# ಅಖಿಲ ಭಾರತ ಪತ್ರಿಕೆ

ಫೆಬ್ರವರಿ 2020

# ಶಕ್ತಿಯ ಪದಧ್ವನಿಗಳು

ಬೆಲೆ : 15/-



ನಾವು ಸೃಷ್ಟಿಯ–ನಿಸರ್ಗ (Nature) – ಪ್ರಕೃತಿಯ ಉತ್ಕ್ರಾಂತಿ ಕ್ರಮವನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದರೆ, ಅದರ ತೀರ ಕೆಳಗಿನ ಸ್ತರವು 'ಜಡ' (Matter) ಆಗಿರುವದು ಭಾಸವಾಗುತ್ತದೆ. ಇದನ್ನೇ ಅನ್ನಮಯ ಕೋಶವೆಂದು ಉಪನಿಷತ್ತುಗಳು ಹೇಳಿವೆ. ಆದರೆ ಅದು ಜಡವಲ್ಲ. ಏಕೆಂದರೆ ಇಲ್ಲಿಯೇ ಸಸ್ಯಸೃಷ್ಟಿ – ಜೀವೋತ್ಪತ್ತಿಯಾಗುತ್ತಿವೆ. ಅದರಲ್ಲಿ 'ಜೀವನ' ವೆಂದರೆ 'ಪ್ರಾಣ (Life)' ಪ್ರಕಟವಾಗಿದೆ. ಅಲ್ಲಿಗೇ ನಿಲ್ಲದೇ 'ಮನವೂ (Mind)' ಒಡಮೂಡಿದೆ. ಹೀಗಾಗಿ 'ಮನೋವಿಶಿಷ್ಟ ಜೀವಿಯಾಗಿ ಮಾನವನ ಜೀವನವಿದೆ. ಅವನು ಪ್ರಕೃತಿಯ ಪ್ರಯೋಗಾಲಯದಲ್ಲಿ ಇಂದಿನವರೆಗಿನ ಅತಿಶ್ರೇಷ್ಠ ಸೃಷ್ಟಿಯಂತಿರುವನು.

ಮಾನವನು ಬರೀ ಅನ್ನಮಯ–ಪ್ರಾಣಮಯ–ಮನೋಮಯದ ಜೀವಿಯಾಗಿ ಉಳಿಯಲಾರ. ಈ ಸ್ತರಕ್ಕಿಂತಲೂ ಔನ್ನತ್ಯದಲ್ಲಿರುವ 'ವಿಜ್ಞಾನಮಯ' ಮತ್ತು 'ಆನಂದಮಯ' ಕೋಶಗಳಿಗೆ ಆರೋಹಣ ಮಾಡಬಲ್ಲ. ಇದೇ 'ಅತಿಮಾನವ' ರಹಸ್ಯ.

**[ಆಧಾರ: ಶ್ರೀ ನವನೀತ ರಾಮಚಂದ್ರರಾಯರ ಲೇಖನ 1972 ಅಗಸ್ಟ 15 – (ಶ್ರೀ ಅರವಿಂದರ ಜನ್ಮ ಶತಾಬ್ದಿ)]**

Photo: Imaging Savitri

**ಅಖಿಲ ಭಾರತ ಪತ್ರಿಕೆ**
**ಫೆಬ್ರವರಿ 2020**

ಸಂಪುಟ: 30 ಸಂಚಿಕೆ: 02

# ಪರಿವಿಡಿ

## "ಶಕ್ತಿಯ ಪದಧ್ವನಿಗಳು"

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಫ್ರಾನ್ಸ್** 5
ಅನು: ಡಾ॥ ಮಹಾದೇವ ಸಕ್ರಿ

**ಅಲ್ಜೇರಿಯಾ** 17
ಅನು: ಪ್ರೊ. ವೀರಭದ್ರಪ್ಪ ಕೆ.

**ಜಪಾನ್** 30
ಅನು: ಡಾ॥ ಬಲಭೀಮ ಭೀಡ

**ಪಾಂಡಿಚೇರಿ** 43
ಅನು: ನಾಗಜ್ಯೋತಿ ಯಲಿವಾರ

**ಶ್ರೀ ಅರವಿಂದರು – ಶತಮಾನದ ನೋಟ** 46
– ಶ್ರೀ ನವನೀತ ರಾಮಚಂದ್ರರಾಯರು

**ವಾರ್ತಾಪತ್ರ** 56

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 343.
ಫೋನ್: 94487 74920
editorabpbng@yahoo.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಸಂಪಾದಕರ ಟಿಪ್ಪಣಿ

ಶ್ರೀಮಾತೆಯವರು ದಿನಾಂಕ 24 ಏಪ್ರಿಲ್ 1920 ರಂದು ಎರಡನೇ ಬಾರಿ ಭಾರತಕ್ಕೆ (ಪಾಂಡಿಚೇರಿಗೆ) ಆಗಮಿಸಿ, ತದನಂತರದಲ್ಲಿ ಇಲ್ಲಿಯೇ ವಾಸ್ತವ್ಯ ಮಾಡಿದ ವಿಷಯಗಳ ಕುರಿತ ವಿವರಣೆಗೆ ಈ ಸಂಚಿಕೆ ಕೆಲವು ಆಯ್ದ ಘಟನೆಗಳನ್ನು ವಿವರಿಸುತ್ತಿದೆ. 1939 ನೇ ಇಸ್ವಿಯಿಂದಲೂ ಈ ದಿನವನ್ನು "ದರ್ಶನದ ದಿನ"ವೆಂದು ಆಚರಿಸಲಾಗುತ್ತಿದೆ. ಈ ವರ್ಷ ಅಂದರೆ 2020 ರಲ್ಲಿ ಇದೀಗ ಆ ಘಟನೆಯ ಶತಮಾನಕ್ಕೆ ತಲುಪಿದ್ದೇವೆ. ಲೌಕಿಕ ರೂಪಾಂತರಣದಲ್ಲಿ ಅವರು ಆಗಮಿಸಿದ ಅತ್ಯಂತ ಮಹತ್ವಪೂರ್ಣ ಘಟನೆಯು ಶತಮಾನವನ್ನು ಕಂಡ ಸಂಭ್ರಮದ ಅಪೂರ್ವ ಕ್ಷಣವಿದು. ಆ ಪರಮದೇವ ಮತ್ತು ಅವನ "ಶಕ್ತಿ" ಸಂಯೋಗಗೊಂಡು ಈ ಭೂಮಿಯ ಮೇಲೆ ನವೀನ ಯುಗವೊಂದನ್ನು ಮತ್ತು ನವೀನ ಮಾನವ ಕುಲವನ್ನು ರೂಪಿಸಲು ಆಗಮಿಸಿದ ಘಟನೆಯಾಗಿದೆ.

ಪರಮ ಸತ್ಯದ (ಋತದ) ನಿರ್ಣಯಾತ್ಮಕ ವಿಜಯ ಮತ್ತು ಪ್ರೇಮವು ಇದೀಗ ಸುನಿಶ್ಚಿತಗೊಳಿಸಲ್ಪಟ್ಟಿದೆ. ಅದಕ್ಕಾಗಿಯೇ ಶ್ರೀಮಾತೆ 'ಈ ದಿನ'ವನ್ನು ವಿರೋಧಾತ್ಮಕ ಬಲಗಳನ್ನು ನಿಯಂತ್ರಿಸಿ, ವಿಜಯವನ್ನು ಖಚಿತಗೊಳಿಸುವ ಸಲುವಾಗಿ, ಅದು ಎಲ್ಲರಿಗೂ ದರ್ಶನಗೊಳ್ಳುವಂತೆಯೇ ಪ್ರತೀಕ ಹೊಂದಿರುವ, ಜೊತೆಜೊತೆಗೆ ಪಾಂಡಿಚೇರಿಗೆ ಮರಳಿಬಂದಿರುವ ವರ್ಷಾಚರಣೆಯಾಗಿದೆ ಎಂದೇ ಹೇಳಿದ್ದಾರೆ. ಈ ಸಂಚಿಕೆಯಲ್ಲಿ ಅವಳು ಇಲ್ಲಿಗೆ ಬರುವದಕ್ಕಿಂತ ಮುಂಚಿನ "ಪದಧ್ವನಿ"ಗಳನ್ನು ಗುರುತಿಸಲಾಗುತ್ತಿದೆ. [ಎಐಎನ್]

*

# ಸಂಪಾದಕೀಯ

ಶ್ರೀಮಾತೆಯವರು ಇಲ್ಲಿಗೆ ಬರುವ ಮುನ್ನ ಶ್ರೀ ಅರವಿಂದರ ಮೂಲಕ, ಮಾನವನ ವಿಕಸನಾ ಪಥವು ಆನ್ವೇಷಣಾ ವಿಧಾನಗಳು ಮತ್ತೊಂದು ನವೀನ ಆಯಾಮವನ್ನು ಪಡೆದುಕೊಂಡಿದ್ದವು. ಜಲಚರಿಯಾಗಿ–ಚತುಷ್ಪದಿಯಾಗಿ–ಅರ್ಧ ಪ್ರಾಣಿ ಅರ್ಧ ಮಾನವ (ನರಸಿಂಹ) ರೂಪುಗೊಳ್ಳುತ್ತಿದ ಮಾನವ ಕುಲವು 'ವಾಮನನ' ಹಂತದಿಂದ ಪರಿವರ್ತಗೊಳ್ಳುತ್ತ ಪರಿವರ್ತಗೊಳ್ಳುತ್ತ 'ವಿಶ್ವರೂಪ'ದ ಭೂಮತೆಯತ್ತ ಆರೋಹಣೆಗೊಂಡಿತ್ತು.

ಭೌತಿಕ ಅಂಶಗಳಲ್ಲಿ ಚಲನೆಯು (ವಿಕಸನವು) ಒಂದು ವೃತ್ತವನ್ನು ಪೂರ್ಣ ಮುಗಿಸಿರುವ ಅವಧಿ ಇದು. ಭೌತಿಕ ವಿಕಸನದ ತುರೀಯಾವಸ್ಥೆಯ 'ವಿಶ್ವರೂಪ' ದರ್ಶನದಿಂದ ಮತ್ತೆ ಆರೋಹಣ ಗೈಯುತ್ತಿರುವ ಅವಧಿ ಇದು. ಅಲ್ಲಿ ಬುದ್ಧಿ ಪ್ರಾಧಾನ್ಯವಾಗಿ ಇದ್ದದ್ದು ನಂತರ 'ಪ್ರಜ್ಞಾ ಪ್ರಾಧಾನ್ಯವಾಗಿ' ತದನಂತರದಲ್ಲಿ 'ವಿಜ್ಞಾನಮಯವಾಗಿ' ರೂಪಾಂತರಣ ಹೊಂದುತ್ತಿರುವ ಈ ವಿಕಸನಾ ಪಥವು ಸೂಕ್ಷ್ಮಾತಿ ಸೂಕ್ಷ್ಮವಾಗಿದೆ.

ಇಲ್ಲಿ ಮನಸ್ಸು ಮತ್ತೂ ಮತ್ತೂ ಆಂತರಂಗಿಕವಾಗಿ ತನ್ನನ್ನು ತಾನೇ ಶೋಧಿಸುತ್ತಾ ಶೋಧಿಸುತ್ತಾ ಸಾಗುತ್ತಿರುವ ಈ ಹಂತದಲ್ಲಿ ಶ್ರೀ ಅರವಿಂದರ ಸೂತ್ರಗಳು ಸೂಕ್ತ ಪಥ ನಿರ್ದೇಶನ ಮಾಡುತ್ತಿವೆ. ಶ್ರೀ ಅರವಿಂದರ 150ನೇ ವರ್ಷದ ಅವಧಿಯಲ್ಲಿ ನಾವಿದ್ದೇವೆ. ಹೀಗಾಗಿ, ಕನ್ನಡದಲ್ಲಿ ಶ್ರೀ ಅರವಿಂದರನ್ನು ಹಾಗೂ ಶ್ರೀಮಾತೆಯವರನ್ನು ನವೀನ ಆಯಾಮದಿಂದ ಅಧ್ಯಯನ ಮಾಡಬೇಕಾಗಿದೆ.

ಈ ವಿಷಯದಲ್ಲಿ, ಡಾ॥ ಶಂ ಬಾ ಜೋಶಿಯವರು ಶ್ರೀ ಅರವಿಂದರ ಬಗೆಗೆ 1921ರಲ್ಲಿಯೇ ಬರೆದ 'ಬಾಬು ಅರವಿಂದ ಘೋಷ' (ಆಗಿನ್ನೂ ಶ್ರೀ ಅರವಿಂದ ಎನ್ನುವ ಹೆಸರು ಇರಲಿಲ್ಲ) ಎನ್ನುವ ಪುಸ್ತಕವೇ ಕನ್ನಡದಲ್ಲಿ ಶ್ರೀ ಅರವಿಂದರನ್ನು ಪರಿಚಯ ಮಾಡಿಕೊಟ್ಟ ಪ್ರಪ್ರಥಮ ಗ್ರಂಥವಾಗಿದೆ. ತದನಂತರದ ಒಂದು ನೂರು ವರ್ಷದ ಅವಧಿಯಲ್ಲಿ, ಕನ್ನಡ ಭಾಷೆಯಲ್ಲಿ ಶ್ರೀ ಅರವಿಂದರ ಬಗೆಗೆ ಬಂದ ಎಲ್ಲ ವಿವರಗಳನ್ನೂ, ಶ್ರೀ ನವನೀತ ರಾಮಚಂದ್ರರಾಯರು "ಶ್ರೀ ಅರವಿಂದರ ಜನ್ಮ ಶತಾಬ್ದಿ (1972)" ಅವಧಿಯಲ್ಲಿ ಪ್ರಕಾಶನಗೊಳಿಸಿದ್ದಾರೆ. ಆ ಪುಸ್ತಕದ

ವಿವರಗಳನ್ನು, 150ನೇ ವರ್ಷದ ಈ ಅವಧಿಯಲ್ಲಿ ಮತ್ತೆ ಮನನಗೊಳಿಸಿ–ಕೊಳ್ಳಬೇಕಾದ ಅವಶ್ಯಕತೆ ಇದೆ. ಹೀಗಾಗಿ ಈ ಸಂಚಿಕೆಯಿಂದ ಶ್ರೀ ನವನೀತ ರಾಮಚಂದ್ರರಾಯರ ಪುಸ್ತಕದ ಸಂಗತಿಗಳನ್ನು ಒದಗಿಸಲು ಕನ್ನಡದ 'ಅಖಿಲ ಭಾರತ ಪತ್ರಿಕೆ' ಸದಾಶಯ ಹೊಂದಿದೆ.

ಇದೇ ಸಮಯದಲ್ಲಿ, ಕನ್ನಡದ ಈ ಅವತರಣಿಕೆಯಲ್ಲಿ ಮೂಲ ಪಠ್ಯದ ಜೊತೆ ಜೊತೆಗೆ, ಶ್ರೀ ಅರವಿಂದರ ಗ್ರಂಥಗಳ ಕುರಿತು ಪ್ರಶ್ನೋತ್ತರ/ಜಿಜ್ಞಾಸೆ/ ವಿಷಯ ವಿಶ್ಲೇಷಣೆಗಳನ್ನು ರೂಪಿಸುವ ಯೋಜನೆ ಇದೆ. ಇದರಲ್ಲಿ ತಮ್ಮನ್ನೂ ತೊಡಗಿಸಿಕೊಳ್ಳಬೇಕೆಂದು "ಅಖಿಲ ಭಾರತ ಪತ್ರಿಕೆ"ಯ ಓದುಗರನ್ನು ಕೋರುತ್ತೇವೆ. ಪ್ರಾರಂಭದ ಹಂತದಲ್ಲಿ 'ಸಾವಿತ್ರಿ'/ದಿವ್ಯಜೀವನ/ಭವಿಷ್ಯ ಕಾವ್ಯದ ಕುರಿತು ಪ್ರಶ್ನೋತ್ತರಗಳನ್ನು ರೂಪಿಸಲು, ತಮ್ಮೆಲ್ಲರ ಸಹಕಾರವನ್ನು ಕೋರುತ್ತೇನೆ.

ಈ ಮೊದಲೂ ವಿನಂತಿಸಿಕೊಂಡಿರುವಂತೆ, ಓದುಗರು ತಮ್ಮ ಸಲಹೆ–ಸೂಚನೆ–ಲೇಖನಗಳ ಮೂಲಕ ಈ 'ಜ್ಞಾನಯಜ್ಞ'ದಲ್ಲಿ ಭಾಗಿಯಾಗಲು ಮತ್ತೊಮ್ಮೆ ಪತ್ರಿಕೆ ಕೇಳಿಕೊಳ್ಳುತ್ತಿದೆ.

# ಫ್ರಾನ್ಸ್

– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ

**ರಕ್ಷಣೆಯ ದಿವ್ಯತೇಜಸ್ಸು (ದಿವ್ಯಕಾಂತಿ)**

ಒಂದು ಸಲ, ಪ್ಯಾರಿಸ್‌ನಲ್ಲಿ, ನಾನು ಬುಲ್‌ವಾರ್ಡ ಸೆಂಟ್ ಮೈಕೆಲ್ ರಸ್ತೆಯನ್ನು ದಾಟುತ್ತಿದ್ದೆ. ಅದು ಕೊನೆಯ ಸಪ್ತಾಹಗಳ ಸಮಯದಲ್ಲಿ; ಕೆಲವು ತಿಂಗಳುಗಳಲ್ಲಿ ಚೈತ್ಯನೊಂದಿಗೆ, ಆಂತರಿಕ ದಿವ್ಯತೆಯೊಂದಿಗೆ ಐಕ್ಯತೆಯನ್ನು ಸಾಧಿಸುವೆನೆಂದು ನಾನು ನಿಶ್ಚಯಿಸಿದ್ದೆ, ಮತ್ತು ಇನ್ನು ಮುಂದೆ ನನ್ನಲ್ಲಿ ಮತ್ತಾವುದೆ ಯೋಚನೆಯಾಗಲಿ, ಮತ್ತಾವುದೆ ಕಳವಳವಾಗಲಿ ಇರಲಿಲ್ಲ. ನಾನು ಲಕ್ಷೆಂಬರ್ಗ ಉದ್ಯಾನವನಗಳ ಹತ್ತಿರ ವಾಸಿಸುತ್ತಿದ್ದೆ ಮತ್ತು ಪ್ರತಿದಿನ ಸಾಯಂಕಾಲ ನಾನು ಅಲ್ಲಿ ಸುತ್ತಾಡುತ್ತಿದ್ದೆ – ಆದರೆ ಯಾವಾಗಲೂ ಆಂತರಿಕದಲ್ಲಿ ಮಗ್ನಳಾಗಿ. ಅಲ್ಲೊಂದು ಬಗೆಯ (ರಸ್ತೆ) ಛೇದಕವಿದೆ, ಮತ್ತು ಯಾರೊಬ್ಬರು ಆಂತರಿಕದಲ್ಲಿ ಗಾಢವಾಗಿ ಮಗ್ನವಿದ್ದಾಗ ಅದನ್ನು ದಾಟುವಂಥ ಸ್ಥಳವಲ್ಲ; ಅದು ಅಷ್ಟು ವಿವೇಚನಾ–ಯುಕ್ತವಾದುದಲ್ಲ. ಆ ಸ್ಥಿತಿಯಲ್ಲಿ ಅಡ್ಡಾಡುತ್ತಿದ್ದಾಗ ನಾನು ಥಟ್ಟನೆ ಒಂದು ಆಘಾತವನ್ನು ಅನುಭವಿಸಿದೆ, ಏನೋ ಒಂದು ಹೊಡೆತ ಅನುಭವಿಸಿದ ಹಾಗೆ, ಏನೋ ಒಂದು ನನಗೆ ಬಡಿದ ಹಾಗೆ, ಮತ್ತು ನಾನು ಸಹಜವೆಂಬಂತೆ ಹಿಂದಕ್ಕೆ ಹಾರಿದೆ. ನಾನು ಹಾಗೆ ಹಿಂದಕ್ಕೆ ಜಿಗಿದ ನಂತರ ಒಂದು ಟ್ರಾಮ್ ಗಾಡಿಯು ಹತ್ತಿರದಲ್ಲಿ ಹಾದುಹೋಯಿತು – ಒಂದು ತೋಳು ಅಳತೆಗಿಂತ ಸ್ವಲ್ಪ ಹೆಚ್ಚು ಅಂತರದಲ್ಲಿ ಆ ಟ್ರಾಮ್ ಗಾಡಿಯ ಅನುಭವವನ್ನು ನಾನು ಪಡೆದೆ. ಅದು ದಿವ್ಯಕಾಂತಿಯನ್ನು ಸ್ಪರ್ಶಿಸಿತ್ತು, ರಕ್ಷಣೆಯ ದಿವ್ಯಕಾಂತಿ – ಆ ಸಮಯದಲ್ಲಿ ಅದು ತುಂಬಾ ಬಲವಾಗಿತ್ತು, ಅಸಾಧಾರಣ ಸ್ಥಿತಿಯಲ್ಲಿ ನಾನು ಗಾಢವಾಗಿ ಮುಳುಗಿಹೋಗಿದ್ದೆ ಮತ್ತು ಅದನ್ನು ಹೇಗೆ ಕಾಯ್ದುಕೊಳ್ಳಬೇಕೆಂದು ನನಗೆ ತಿಳಿದಿತ್ತು – ರಕ್ಷಣೆಯ ದಿವ್ಯಕಾಂತಿಗೆ ಪೆಟ್ಟುಬಿದ್ದಿತ್ತು ಮತ್ತು ಅದು ಅಕ್ಷರಶಃ ನನ್ನನ್ನು ಹಿಂದೆ ತಳ್ಳಿತ್ತು, ಏನೋ ಒಂದು ಭೌತಿಕ ಆಘಾತ ಅನುಭವಿಸಿದಂತೆ. ಚಾಲಕನಿಂದ ಎಂತಹ ಅವಮಾನ! ನಾನು ಸರಿಯಾದ ಸಮಯದಲ್ಲಿ ಹಿಂದಕ್ಕೆ ಜಿಗಿದೆ ಮತ್ತು ಟ್ರಾಮ್ ಗಾಡಿಯು ಪಕ್ಕದಲ್ಲಿ ಹಾದುಹೋಯಿತು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/130–31**

## ಇಗರ್ಜಿಯ ವರ್ಣಾಲಂಕಾರ

ದಕ್ಷಿಣ ಫ್ರಾನ್ಸ್‌ನ 'ಪೊ' (Pau) ಎಂಬಲ್ಲಿ ಒಬ್ಬ ದಯಾಪರ ಮತ್ತು ಕಲಾವಿದರಾಗಿದ್ದ ಪಾದ್ರಿಯ ನೆನಪು ನನಗಿದೆ. ಅವರು ತಮ್ಮ ಇಗರ್ಜಿಯನ್ನು (ಅದು ಚಿಕ್ಕ ಇಗರ್ಜಿ) ವರ್ಣಾಲಂಕಾರ ಮಾಡಿಸಿಕೊಳ್ಳಬೇಕೆಂದು ಬಯಸಿದ್ದರು. ಅವರು ಒಬ್ಬ ಸ್ಥಳೀಯ ನಾಸ್ತಿಕವಾದಿಯನ್ನು (ಅವರು ಒಬ್ಬ ದೊಡ್ಡ ಕಲಾವಿದ ಕೂಡ) ಇಗರ್ಜಿಯ ವರ್ಣಾಲಂಕಾರ ವಿಚಾರವಾಗಿ ಸಂಪರ್ಕಿಸಿದರು. ಆ ನಾಸ್ತಿಕವಾದಿಯು ಆಂಡ್ರೆಯ ತಂದೆಯವರಿಗೂ ಹಾಗೂ ನನಗೆ ಪರಿಚಯಸ್ಥರು. 'ವರ್ಣಾಲಂಕಾರ ಮಾಡಲು ನಾನು ಈ ನಿಜವಾದ ಕಲಾವಿದರನ್ನು ಶಿಫಾರಸ್ಸು ಮಾಡುತ್ತೇನೆ' ಎಂದು ಆಂಡ್ರೆಯ ತಂದೆಯವರು ಪಾದ್ರಿಯವರಿಗೆ ಹೇಳಿದರು. ಆ ಕಲಾವಿದರು ಭಿತ್ತಿಚಿತ್ರಗಳ ಕೆಲಸವನ್ನು ಮಾಡುತ್ತಿದ್ದರು. ಒಟ್ಟಿನಲ್ಲಿ ಸುಮಾರು ಎಂಟು ತಂಡಗಳಿದ್ದವು ಎಂದು ನನ್ನ ನಂಬುಗೆ. ಹಾಗಾಗಿ ನಾವು ಅವುಗಳಲ್ಲಿಯ ಒಂದು ತಂಡವನ್ನು ಕೆಲಸ ಮಾಡಲು ಗೊತ್ತುಪಡಿಸಿದೆ. (ಆ ಇಗರ್ಜಿಯು, ಒಬ್ಬ ಸ್ಪ್ಯಾನಿಶ್ ಇತಿಹಾಸದ ನಾಯಕನಾದ ಸಾನ್‌ಜುವಾನ್ ದೆ ಕಾಂಪೊಸ್ಟೆಲ್ಲೊ ಎನ್ನುವವನಿಗೆ ಸಮರ್ಪಿಸಲಾಗಿತ್ತು; ಅವನು, 'ಕ್ರಿಶ್ಚಿಯನ್' ಮತ್ತು 'ಮೂರ್'ರ ನಡುವಿನ ಯುದ್ಧದಲ್ಲಿ ಕಾಣಿಸಿಕೊಂಡಿದ್ದನು ಮತ್ತು ಅವನ ಭಾಗವಹಿಸುವಿಕೆಯಿಂದ 'ಮೂರ್'ರ ದಮನವಾಗಿತ್ತು. ಅವನು ಶೋಭಾಯಮಾನನಾಗಿದ್ದನು! ಅವನು ಥೇಟ 'ಕಲ್ಕಿ'ಯಂತೆ ಬಿಳಿಯ ಕುದುರೆಯ ಮೇಲೆ ಬಂಗಾರದ ಬೆಳಕಿನಲ್ಲಿ ಅವತರಿಸಿದ್ದನು.) ಎಲ್ಲ ವಧೆ ಮಾಡಲ್ಪಟ್ಟ ಹಾಗೂ ಹೋರಾಟ ಮಾಡುವ 'ಮೂರ್'ರನ್ನು ವರ್ಣಚಿತ್ರದ ಕೆಳಗೆ ಚಿತ್ರಿಸಲಾಗಿತ್ತು ಮತ್ತು ಅವರನ್ನು ಚಿತ್ರಿಸಿದ್ದು ನಾನು; ಚಿತ್ರಿಸುವ ಸಲುವಾಗಿ ಏಣಿಯ ಮೇಲೆ ಎತ್ತರಕ್ಕೆ ಏರುವುದು ನನಗೆ ಬಹಳೇ ಕಷ್ಟದ ಕೆಲಸವಾಗಿತ್ತು, ಆದ್ದರಿಂದ ನಾನು ಕೆಳಗಡೆಯೇ ಚಿತ್ರಿಸುವ ಕೆಲಸವನ್ನು ಮಾಡಿದೆ. ಆದರೆ, ಅದೇನೆ ಇರಲಿ ಎಲ್ಲವೂ ಚನ್ನಾಗಿ ನಡೆದುಹೋಯಿತು. ಆಗ ಪಾದ್ರಿಯು ಸಹಜವಾಗಿಯೇ ನಮ್ಮನ್ನು ಆದರಿಸಿ ನಾಸ್ತಿಕನೊಂದಿಗೆ ರಾತ್ರಿಯ ಭೋಜನಕ್ಕೆ ಆಮಂತ್ರಿಸಿದನು. ಅವನು ಬಹಳ ದಯಾಪರನಾಗಿದ್ದನು – ನಿಜವಾಗಿಯೂ ಮೃದುಮನಸ್ಸಿನ ವ್ಯಕ್ತಿಯಾಗಿದ್ದನು! ಅದಾಗಲೆ ನಾನು ಸಸ್ಯಾಹಾರಿಯಾಗಿದ್ದರಿಂದ ಕುಡಿಯಲಿಲ್ಲ, ಆದ್ದರಿಂದ ಅವನು 'ಇದೆಲ್ಲವನ್ನೂ ನಮಗೆ ನೀಡುವವನು, ನಮ್ಮ ದೇವರು, ಆದ್ದರಿಂದ ಅದನ್ನು ಯಾಕೆ ತೆಗೆದುಕೊಳ್ಳಬಾರದು?' ಎಂದು ಹೇಳುತ್ತ ಬಹಳ ಸೌಮ್ಯದಿಂದ ನನ್ನನ್ನು

ಗದರಿಸಿದನು... ನಾನು ಅವನನ್ನು ಆಕರ್ಷಕವಾಗಿ ಕಂಡೆ. ಅವನು ವರ್ಣಚಿತ್ರಗಳ ಕಡೆಗೆ ನೋಡಿ 'ಮೊರಿಸೆಟ್ಟ'ನ ಹೆಗಲ ಮೇಲೆ ಮೆಲ್ಲನೆ ತಟ್ಟಿ ದಕ್ಷಿಣ ಫ್ರಾನ್ಸ್‌ನ ಭಾಷಾ ಶೈಲಿಯಲ್ಲಿ ಹೇಳಿದನು 'ನೀನು ಇಷ್ಟಪಡುವುದನ್ನು ಹೇಳು, ನಮ್ಮ ಕರ್ತನನ್ನು ನೀನು ತಿಳಿದಿರುವಿ; ನೀನು ಈ ರೀತಿ ಎಂದಿಗೂ, ಎಂದೆಂದಿಗೂ ಚಿತ್ರಿಸಲು ಆಗುತ್ತಿರಲಿಲ್ಲ!'

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಏಪ್ರೀಲ್ 29, 1961**

### ಒಂದು ಚಿಕ್ಕ ಮಗುವಿನಂತೆ ಭಾವಸಮಾಧಿ

ಅಲ್ಲಿ ಇನ್ನೊಂದು ವಿಷಯವಿತ್ತು: ಚಿಕ್ಕದ ಮಗುವಿದ್ದಾಗಲೂ ಸಹ ನಾನು ಕೆಲಸ ಮಾಡುವ ಅಥವಾ ಮಾತನಾಡುವ ಮಧ್ಯದಲ್ಲಿ ಅಥವಾ ಯಾವುದೇ ವಿಷಯದ ಮಧ್ಯದಲ್ಲಿ ಹಠಾತ್ತನೆ ಭಾವಸಮಾಧಿಗೆ ಹೋಗುತ್ತಿದ್ದೆ – ಅದು ಏನೆಂದು ಯಾರಿಗೂ ಗೊತ್ತಾಗುತ್ತಿರಲಿಲ್ಲ! ನಾನು ನಿದ್ರೆಗೆ ಜಾರಿದೆನೆಂದು ಅವರು ಯೋಚಿಸುತ್ತಿದ್ದರು! ಆದರೆ ನಾನು ಒಂದು ತೋಳನ್ನು ಮೇಲೆತ್ತಿ ಅಥವಾ ಶಬ್ದದ ಮಧ್ಯದಲ್ಲಿ ಜಾಗೃತಳಾಗಿರುತ್ತಿದ್ದೆ ಮತ್ತು ಪೂಫ್! (ಮಾಯ) ಅಲ್ಲಿ ಯಾರೂ ಇಲ್ಲ (ಶ್ರೀಮಾತೆ ನಗುವರು). ಬಾಹ್ಯವಾಗಿ ಅಲ್ಲಿ ಯಾರೂ ಇಲ್ಲ, ಆದರೆ ಆಂತರಿಕವಾಗಿ ಸಾಕಷ್ಟು ತೀವ್ರವಾಗಿ, ಕುತೂಹಲಕಾರಿ ಅನುಭವ. ನಾನು ಚಿಕ್ಕವಳಿದ್ದಾಗಲೂ ಸಹ ಆ ಅನುಭವ ನನಗಾಗುತ್ತಿತ್ತು. ಒಂದು ಸಲ (ಆ ಸಮಯದಲ್ಲಿ ನಾನು ಹತ್ತು ಅಥವಾ ಹನ್ನೆರಡು ವಯಸ್ಸಿನವಳಿರಬಹುದು) ನನ್ನ ಪೋಷಕರ ಮನೆಯಲ್ಲಿ ಸುಮಾರು ಹನ್ನೆರಡು ಅಥವಾ ಹೆಚ್ಚು ಜನರಿಗೆ ಮಧ್ಯಾಹ್ನದ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಅವರೆಲ್ಲರೂ ಭಾನುವಾರದ ಅತ್ಯುತ್ತಮ ಉಡುಪಿನಲ್ಲಿ ಅಲಂಕೃತರಾಗಿದ್ದರು ಎಂದು ನನಗೆ ನೆನಪು – ಅವರು ಕುಟುಂಬಸ್ಥರಾಗಿದ್ದರು ಆದರೆ ಎಲ್ಲರಿಗೂ ಒಂದೇ ಭೋಜನವಿತ್ತು ಮತ್ತು ಒಂದು ನಿರ್ದಿಷ್ಟ ಶಿಷ್ಟಾಚಾರವಿತ್ತು; ಸಂಕ್ಷಿಪ್ತದಲ್ಲಿ, ಅವರು ಸರಿಯಾಗಿ ವರ್ತಿಸಬೇಕಾಗಿತ್ತು. ನಾನು ಟೇಬಲ್ಲಿನ ಒಂದು ತುದಿಯಲ್ಲಿ ನನ್ನ ಸೋದರ ಸಂಬಂಧಿಯ ಪಕ್ಕದಲ್ಲಿ ಕುಳಿತುಕೊಂಡಿದ್ದೆ (ನನ್ನ ಸೋದರ ಸಂಬಂಧಿ ನಂತರ ಕೆಲ ಸಮಯದವರೆಗೆ 'ಲೌವ್ರೆ'ಯ ನಿರ್ದೇಶಕನಾಗಿದ್ದ, ಅವನೊಬ್ಬ ಸಾಮರ್ಥ್ಯವುಳ್ಳ ಯುವಕ, ಅವನ ಹತ್ತಿರ ಕಲಾತ್ಮಕ ಬುದ್ಧಿಶಕ್ತಿ ಇತ್ತು). ಹಾಗೆ ನಾವು ಅಲ್ಲಿದ್ದೆವು, ಮತ್ತು ಅವರ

ಪರಿಸರದಲ್ಲಿ ನಾನು ಏನೋ ಒಂದು ವಿಚಿತ್ರವಾದುದನ್ನು ಗಮನಿಸುತ್ತಿದ್ದೆ ಎಂದು ನನಗೆ ನೆನಪು (ನಿಮಗೆ ಗೊತ್ತಿರಲಿ, ಆದಾಗಲೇ ಸಹಜ ಶಕ್ತಿಗಳು ಅಲ್ಲಿ ಇದ್ದರೂ, ನನಗೆ ಅತೀಂದ್ರಿಯ ವಿಷಯಗಳ ಬಗ್ಗೆ ಏನೂ ತಿಳಿದಿರಲಿಲ್ಲ; ಯಾರಾದರೂ ನನ್ನೊಂದಿಗೆ 'ದಿವ್ಯಕಾಂತಿ'ಯ ಮತ್ತು ಎಲ್ಲವನ್ನೂ ಮಾತನಾಡಿದ್ದರೆ... ನನಗೆ ಏನೂ ಗೊತ್ತಿರಲಿಲ್ಲ). ಅವನ ಪರಿಸರದಲ್ಲಿ ಒಂದು ರೀತಿಯ ಅನುಭೂತಿಯನ್ನು ನಾನು ಅವಲೋಕಿಸುತ್ತಿದ್ದೆ, ಮತ್ತೆ ಆ ಮೇಲೆ, ನನ್ನ ಬಾಯಲ್ಲಿ ಮುಳ್ಳು ಚಮಚವನ್ನು ಇಟ್ಟುಕೊಳ್ಳುತ್ತಿದ್ದಂತೆ ನಾನು ಅದನ್ನು ಹೊರತೆಗೆದೆ! ನಾನೆಂಥ ಬೈಗುಳನ್ನು ಪಡೆದೆ! ಹೇಗೆ ವರ್ತಿಸಬೇಕೆಂದು ಗೊತ್ತಿರದಿದ್ದರೆ ಭೋಜನದ ಟೇಬಲ್ಲಿಗೆ ಬರಲೇಬಾರದು ಎಂದು ಹೇಳಿದರು!

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಅಗಸ್ಟ್ 5, 1961**

**ದೇಹದಿಂದ ನಿರ್ಗಮನ**

ಈ ಅವಧಿಯಲ್ಲಿ, ಪ್ರತಿ ರಾತ್ರಿ ನಾನು ನನ್ನ ದೇಹದಿಂದ ನಿರ್ಗಮಿಸಿ 'ಪ್ರಾರ್ಥನೆ ಮತ್ತು ಧ್ಯಾನ'ದಲ್ಲಿ ಉಲ್ಲೇಖಿಸಿದಂತೆ (ಇದನ್ನು ನಾನು ಅಲ್ಪದಲ್ಲಿ ಉಲ್ಲೇಖಿಸಿದ್ದೆ) ಕೆಲಸವನ್ನು ಮಾಡುತ್ತಿದ್ದೆ. ಪ್ರತಿ ರಾತ್ರಿ, ಒಂದೇ ಸಮಯದಲ್ಲಿ, ಮನೆಯಲ್ಲಿ ಪೂರ್ತಿ ನಿಶ್ಯಬ್ದವಿದ್ದಾಗ, ನಾನು ನನ್ನ ದೇಹದಿಂದ ನಿರ್ಗಮಿಸಿ ಎಲ್ಲ ಬಗೆಯ ಅನುಭವಗಳನ್ನು ಪಡೆಯುತ್ತಿದ್ದೆ. ಆ ಮೇಲೆ ನನ್ನ ದೇಹವು ನಿಧಾನವಾಗಿ ನಿದ್ರಾಚರವಾಯಿತು (ಮೂರ್ತ ಪ್ರಜ್ಞೆಯು ಹೆಚ್ಚು ಹೆಚ್ಚು ಜಾಗೃತವಾಗುತ್ತ ಬಂತು, ಹಾಗೆಯೇ ಸಂಬಂಧವು ಅತ್ಯಂತ ದೃಢವಾಗಿ ಅಧಿಷ್ಠಿತವಾಯಿತು). ನನಗೆ ಹೀಗೆ ಎದ್ದೇಳುವ ಅಭ್ಯಾಸವಾಯಿತು – ಆದರೆ ಸಾಮಾನ್ಯ 'ನಿದ್ರಾಚರ'ರಂತೆ ಅಲ್ಲ: ನಾನು ಎದ್ದೇಳುತ್ತಿದ್ದೆ, ಇಳಿಮೇಜನ್ನು ತೆರೆಯುತ್ತಿದ್ದೆ, ಮತ್ತು ಕಾಗದದ ಚೂರನ್ನು ತೆಗೆದುಕೊಂಡು ಕವಿತೆಗಳನ್ನು... ಬರೆಯುತ್ತಿದ್ದೆ. ಹೌದು, ಕವಿತೆಗಳನ್ನು – ನನ್ನಲ್ಲಿ ಕವಿಯಂಥ ಯಾವುದೇ ಸಂಗತಿಗಳಿರದ ನಾನು! ನಾನು ವಿಷಯಗಳನ್ನು ಬರೆಯುತ್ತಿದ್ದೆ, ನಂತರ ಬಲು ಎಚ್ಚರಿಕೆಯಿಂದ ಅದೆಲ್ಲವನ್ನೂ ಮೇಜೊಳಗಿನ ಖಾನೆಯಲ್ಲಿ ಇಡುತ್ತಿದೆ, ಮತ್ತೊಮ್ಮೆ ಎಲ್ಲವನ್ನೂ ಜೋಪಾನವಾಗಿ ಬೀಗ ಹಾಕಿ ವಾಪಸ್ಸು ಹಾಸಿಗೆಗೆ ಹೋಗುತ್ತಿದ್ದೆ. ಒಂದು ರಾತ್ರಿ, ಯಾವುದೋ ಕಾರಣಕ್ಕೆ, ಅದಕ್ಕೆ ಬೀಗ ಹಾಕುವುದನ್ನೇ ನಾನು ಮರೆತಿದ್ದೆ. ನನ್ನ ತಾಯಿಯವರು ಒಳಗಡೆ ಬಂದರು

(ಫ್ರಾನ್ಸ್‌ನಲ್ಲಿ ಕಿಟಕಿಗಳನ್ನು ದಪ್ಪ ಪರದೆಗಳಿಂದ ಮುಚ್ಚುತ್ತಾರೆ ಮತ್ತು ಬೆಳಿಗ್ಗೆ ನನ್ನ ತಾಯಿ ಬಂದು ನನ್ನನ್ನು ಎಬ್ಬಿಸುತ್ತ ಜೋರಾಗಿ ಕಿಟಕಿಯ ಪರದೆಗಳನ್ನು ಸರಿಸುತ್ತಾರೆ, ಬ್ರಂ!, ಯಾವುದೇ ಸೂಚನೆಯಿಲ್ಲದೆ; ಆದರೆ ನಾನು ಅದಕ್ಕೆ ಒಗ್ಗಿಕೊಂಡಿದ್ದೆ ಮತ್ತು ಏಳುವುದಕ್ಕೆ ತಯಾರಾಗುತ್ತಿದ್ದೆ – ಇಲ್ಲದಿದ್ದರೆ ಅದು ಬಹಳೇ ಕಿರಿಕಿರಿ ಎನಿಸುತ್ತಿತ್ತು!). ಅದೇನೇ ಇರಲಿ, ನನ್ನ ತಾಯಿ ಒಳಗಡೆ ಬಂದರು, ಪ್ರಶ್ನಾತೀತ ಅಧಿಕಾರದಿಂದ ನನ್ನನ್ನು ಕೂಗಿದರು, ಆ ಮೇಲೆ ತೆರೆದ ಇಳಿಮೇಜನ್ನು ಮತ್ತು ಕಾಗದದ ಚೂರನ್ನು ನೋಡಿದರು: ‘ಅದೇನದು?!’ ಅವರು ಅದನ್ನು ತೆಗೆದುಕೊಂಡರು. ‘ನೀನು ಏನು ಮಾಡುತ್ತಿದ್ದಿ?’ ನಾನು ಏನು ಉತ್ತರಿಸಿದೆ ಎಂದು ನನಗೆ ಗೊತ್ತಿಲ್ಲ, ಆದರೆ ಅವರು ಡಾಕ್ಟರ್ ಕಡೆ ಹೋದರು: ‘ನನ್ನ ಮಗಳು ನಿದ್ರಾಚರಿಯಾಗಿದ್ದಾಳೆ! ನೀವು ಅವಳಿಗೆ ಒಂದು ಔಷಧವನ್ನು ಕೊಡಬೇಕು.!’

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಆಗಸ್ಟ್ 5, 1961**

**ಅದನ್ನೇ ನಾನು ಬದುಕಬೇಕು**

ವಾಸ್ತವವಾಗಿ, ನನ್ನ ಸ್ವಂತ ಯೋಗವು ತೆಗೆದುಕೊಂಡ ಕ್ರಮದೆಡೆ ನಾನು ನೋಡಿದರೆ... ನಾನು ಐದು ವರ್ಷದವಳಿದ್ದಾಗ (ನಾನು ಮೊದಲೇ ಪ್ರಾರಂಭಿಸಿರಬೇಕು, ಆದರೆ ಸ್ಮರಣೆ ಕೊಂಚ ಅಸ್ಪಷ್ಟ ಮತ್ತು ನಿಖರವಲ್ಲ)... ಆದರೆ ಐದನೇ ವಯಸ್ಸಿನ ನಂತರ, ನನ್ನ ಪರಿವೆಯಲ್ಲಿ (ಮಾನಸಿಕ ಸ್ಮರಣೆ ಅಲ್ಲ ಆದರೆ – ಅದನ್ನು ಹೇಗೆ ಹೇಳಬೇಕು? – ಅದು ನಮೂದಾಗಿದೆ, ನನ್ನ ಪರಿವಿನಲ್ಲಿ ಒಂದು ಸಂಕೇತ)... ಸರಿ, ನಾನು ಪ್ರಜ್ಞೆಯಿಂದ ಪ್ರಾರಂಭಿಸಿದೆ. ಖಂಡಿತವಾಗಿಯೂ ಅದೇನೆಂದು ನನಗೆ ಕಲ್ಪನೆ ಇರಲಿಲ್ಲ. ಆದರೆ ಪ್ರಜ್ಞೆಯ ನನ್ನ ಪ್ರಥಮ ಅನುಭವವು ಇಲ್ಲಾಗಿತ್ತು (ತಲೆಯ ಮೇಲೆ ಸನ್ನೆ), ಬೆಳಕಿನ ಮತ್ತು ಸತ್ವದ ಹಾಗೆ ಅನುಭವ ಪಡೆದೆ; ಮತ್ತು ಅದನ್ನು ನಾನು ಐದನೇ ವಯಸ್ಸಿನಲ್ಲಿ ಇಲ್ಲಿ (ಅದೇ ಸನ್ನೆ) ಅನುಭವಿಸಿದೆ. ಅದು ಅತ್ಯಂತ ಅಹ್ಲಾದಕರ ಸಂವೇದನೆಯಾಗಿತ್ತು. ನನ್ನ ಕೋಣೆಯಲ್ಲಿ, ನನಗೆಂದೇ ಮಾಡಿಸಿದ ಆರಾಮ ಖುರ್ಚಿಯ ಮೇಲೆ ಏಕಾಂಗಿಯಾಗಿ ಕುಳಿತುಕೊಳ್ಳುತ್ತಿದ್ದೆ, ಮತ್ತು ನಾನು... (ನೋಡಿ, ಅದೇನೆಂದು ನನಗೆ ಗೊತ್ತಿರಲಿಲ್ಲ, ಯಾವ ವಸ್ತುವೂ ಇಲ್ಲ, ಏನೂ ಇಲ್ಲ – ಮಾನಸಿಕವಾಗಿ

ಶೂನ್ಯ) ಮತ್ತೆ ನಾನು ಯಾವುದೋ ಬಲವಾದ ವಿಷಯದ ಅತ್ಯಂತ ಆಹ್ಲಾದಕರ, ಅತ್ಯಂತ ಪ್ರಕಾಶಮಾನ ಅನುಭವ ಪಡೆದುಕೊಂಡೆ, ಮತ್ತು ಅದು ಇಲ್ಲಿತ್ತು (ತಲೆಯ ಮೇಲೆ). ಪ್ರಜ್ಞೆ, ಮತ್ತೆ ನಾನು ಅನುಭವಿಸಿದೆ, "ಅನುಭವಿಸಿದಂತೆ ನಾನು ಬದುಕಬೇಕು, ಅದರಂತೆ ನಾನಿರಬೇಕು." ಸಹಜವಾಗಿ, ಆ ಎಲ್ಲ ಪದಗಳೊಂದಿಗೆ ಅಲ್ಲ, ಆದರೆ ... (ಶ್ರೀಮಾತೆಯವರು ಉರ್ಧ್ವಮುಖ ಆಕಾಂಕ್ಷೆಯ ಸನ್ನೆ ಮಾಡುತ್ತಾರೆ). ನಂತರ ನಾನು ಅದನ್ನು ಎಳೆದು ಕೆಳಗೆ ತರುತ್ತೇನೆ, ಅದು... ಅದು ನಿಜವಾಗಿಯೂ ನನ್ನ ಜೀವನದ ಉದ್ದೇಶವಾಗಿತ್ತು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಜುಲೈ 25, 1962**

**ಕಲೆ, ಸಂಗೀತ ಮತ್ತು ಚಿತ್ರಕಲೆ**

ಅತಿ ಚಿಕ್ಕ ವಯಸ್ಸಿನಲ್ಲಿ (ಸುಮಾರು ಎಂಟು ಅಥವಾ ಹತ್ತು), ನನ್ನ ಅಧ್ಯಯನದ ಜೊತೆಯೇ ಚಿತ್ರಕಲೆ ಮಾಡುವುದನ್ನು ಪ್ರಾರಂಭಿಸಿದೆ. ಹನ್ನೆರಡನೆ ವಯಸ್ಸಿನಲ್ಲಿ ನಾನು ಆಗಲೇ ಭಾವಚಿತ್ರಗಳನ್ನು ಬಿಡಿಸುತ್ತಿದ್ದೆ. ಕಲೆ ಮತ್ತು ಸೌಂದರ್ಯದ ಎಲ್ಲ ಅಂಶಗಳು ವಿಶೇಷವಾಗಿ ಸಂಗೀತ ಹಾಗೂ ಚಿತ್ರಕಲೆಗಳು ನನ್ನನ್ನು ಆಕರ್ಷಿಸಿದ್ದವು. ಆ ಅವಧಿಯಲ್ಲಿ ನಾನು ನನ್ನ ಪ್ರಾರಂಭದ ವರ್ಷಗಳಂತೆ ಒಂದು ಬಗೆಯ ಆಂತರಿಕ ಮಾರ್ಗದರ್ಶಕನ ಉಪಸ್ಥಿತಿಯೊಂದಿಗೆ ಅತ್ಯಂತ ತೀವ್ರವಾದ ಪ್ರಾಣಮಯ ಅಭಿವೃದ್ಧಿಯನ್ನು ಹೊಂದಿದೆ; ಎಲ್ಲವೂ ಅಧ್ಯಯನದ ಮೇಲೆ ಕೇಂದ್ರಿಕೃತವಾಗಿದ್ದವು: ಸಂವೇದನೆಗಳ, ವೀಕ್ಷಣೆಗಳ ಅಧ್ಯಯನ, ತಂತ್ರ ಅಧ್ಯಯನ, ತುಲನಾತ್ಮಕ ಅಧ್ಯಯನ, ರುಚಿ, ಗಂಧ, ಶಬ್ದಗಳಿಗೆ ಸಂಬಂಧಿಸಿದ ಒಂದು ಅಖಂಡ ಶ್ರೇಣಿಯ ವೀಕ್ಷಣೆಗಳೂ ಸಹ – ಒಂದು ಬಗೆಯ ಅನುಭವಗಳ ವರ್ಗೀಕರಣ. ಈ ಅನುಭವ, ಜೀವನದ ಎಲ್ಲ ಅಂಶಗಳಿಗೂ ವಿಸ್ತೃತವಾಯಿತು, ಜೀವನದ ಎಲ್ಲ ಅನುಭವಗಳು, ಎಲ್ಲವೂಗಳು – ವಿಪತ್ತುಗಳನ್ನು, ಸಂತೋಷವನ್ನು, ತೊಂದರೆಗಳನ್ನು ಪ್ರತಿಯೊಂದನ್ನು ತರಬಹುದು – ಓಹ್, ಅಧ್ಯಯನಗಳ ಒಂದು ಅಖಂಡ ಕ್ಷೇತ್ರ! ಆಂತರಿಕವಾಗಿ ಯಾವಾಗಲೂ ಈ ಇರುವಿಕೆಯು ಎಲ್ಲವನ್ನೂ ನಿರ್ಣಯಿಸುತ್ತ, ನಿರ್ಧರಿಸುತ್ತ, ವರ್ಗೀಕರಿಸುತ್ತ, ಸಂಘಟಿಸುತ್ತ ಮತ್ತು ವ್ಯವಸ್ಥಿತವಾಗಿರಿಸುತ್ತ ಇರುತ್ತದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಜುಲೈ 25, 1962**

**ಸಂಪರ್ಕವು ಸ್ಥಾಪಿತವಾಯಿತು**

ದೀರ್ಘಕಾಲದವರೆಗೆ, ಬದುಕಲು ಯೋಗ್ಯವಾದ ಒಂದು ವಸ್ತು ಇದೆ ಎಂದು ನಾನು ಭಾವಿಸಿದ್ದು – 'ಪ್ರಜ್ಞೆ'. ಥಿಯಾನ ಭೇಟಿಯಾದ ಮೇಲೆ ಅದರ ವ್ಯವಸ್ಥೆಯ ಬಗ್ಗೆ ನನ್ನ ತಿಳುವಳಿಕೆಗೆ ಬಂತು, ಒಂದು ನಿರ್ದಿಷ್ಟ ಹಂತದಲ್ಲಿ ನಾನು ಜಾಗೃತಳಾಗಿಲ್ಲವೆನ್ನುವುದು ಸಹ ತಿಳಿಯಿತು. ಎರಡು ಸ್ತರಗಳನ್ನು – ಪ್ರಜ್ಞೆಯ ಎರಡು ಸ್ತರಗಳನ್ನು ಜೋಡಿಸುವಿಕೆಯ ಕೆಲಸದಲ್ಲಿ ನಾನು ಒಂದು ವರ್ಷ, ಹತ್ತು ತಿಂಗಳುಗಳನ್ನು ಹೇಗೆ ಕಳೆದೆ ಎಂಬುದನ್ನು ನಿಮಗೆ ಹೇಳಿದ್ದೇನೆಂದು ನನ್ನ ಅನಿಸಿಕೆ; ಸಂಪರ್ಕವು ಸಾಧಿಸಲಿಲ್ಲ, ಆದ್ದರಿಂದ ವಸ್ತುಗಳ ಅಖಂಡ ಶ್ರೇಣಿಯ ಅಬೋಧಿತ ಅನುಭವವನ್ನು ನಾನು ಪಡೆಯಲಿಲ್ಲ. "ಈ ಭಾಗದ ಮತ್ತು ಆ ಭಾಗದ ಮಧ್ಯದಲ್ಲಿನ ಸ್ತರವು ಬೆಳವಣಿಗೆಯಾಗದ ಕಾರಣ ಹೀಗಾಗಿದೆ" ಎಂದು ಥಿಯಾ ಅವರು ಹೇಳಿದರು. ಎಲ್ಲ ಮಜಲುಗಳ ಅರಿವು ನನಗೆ ಬಹಳೇ ಇತ್ತು: ಥಿಯಾ ಅವರು ಅತಿ ಸರಳ ಶಬ್ದಗಳಲ್ಲಿ ಎಲ್ಲವನ್ನೂ ವಿವರಿಸಿದರು. ನಾನು ಹೇಳಿದಂತೆ, ತಿಳಿದುಕೊಳ್ಳಲು ನೀವು ಮಹಾಮೇಧಾವಿಯಾಗಿರಬೇಕಿಲ್ಲ. ಅವರು ನಾಲ್ವಡಿ ಭಾಗಗಳನ್ನು ಮಾಡಿದ್ದರು, ಮತ್ತು ಪ್ರತಿಯೊಂದನ್ನು ನಾಲ್ಕರಲ್ಲಿ ವಿಭಜಿಸಲಾಗಿತ್ತು, ಮತ್ತು ಮತ್ತೆ ನಾಲ್ಕು ಭಾಗಗಳು, ಇರುವಿಕೆಯ ಅಸಂಖ್ಯ ಭಾಗಗಳನ್ನಾಗಿ ಮಾಡುವುದು; ಆದರೆ ಅಂತಹ ಮಾನಸಿಕ ಸುಲಭಿಕರಣದೊಂದಿಗೆ ನಿಮ್ಮ ಇರುವಿಕೆಯ ಆಳವಾದ ಮನೋವೈಜ್ಞಾನಿಕ ಅಧ್ಯಯನ ಮಾಡಬಹುದು. ಆದ್ದರಿಂದ, ಅಂತಿಮವಾಗಿ, ವೀಕ್ಷಣೆಯಿಂದ ಮತ್ತು ವರ್ಜನೆಯಿಂದ ಇದರ ಮತ್ತು ಅದರ (ಶ್ರೀಮಾತೆಯವರ ಪ್ರಜ್ಞೆಯ ಎರಡು ಸ್ತರಗಳನ್ನು ಸೂಚಿಸುವ ಸಂಜ್ಞೆ) ಮಧ್ಯದಲ್ಲಿ ಅಭಿವೃದ್ಧಿಯಾಗದ ಸ್ತರವಿತ್ತು ಎಂದು ನಾನು ಕಂಡುಕೊಂಡೆ – ಅದು ಅರಿವಾಗಿರಲಿಲ್ಲ. ಆದ್ದರಿಂದ, ಹತ್ತು ತಿಂಗಳವರೆಗೆ ಬೇರೆಲ್ಲವನ್ನು ಬಿಟ್ಟು ಬರೀ ಅದರ ಮೇಲೆ ಕೆಲಸ ಮಾಡಿದೆ: ನಿಚ್ಚಳವಾದ ಪರಿಣಾಮಗಳಿಲ್ಲ. ನಾನು ಗಮನಕೊಡಲಿಲ್ಲ, ನಾನು ಸಕಾರಾತ್ಮಕವಾಗಿದ್ದೆ, "ಏನನ್ನಾದರು ಪಡೆಯಲು ಅದು ನನಗೆ ಐವತ್ತು ವರ್ಷಗಳನ್ನು ತೆಗೆದುಕೊಳ್ಳಬಹುದು, ಯಾರಿಗೆ ಗೊತ್ತು" ಎಂದು ನನಗೆ ಹೇಳಿಕೊಳ್ಳುತ್ತಿದ್ದೆ. ನಂತರ ನಾನು ದೇಶಕ್ಕೆ ಹೊರಟೆ (ಆ ಸಮಯದಲ್ಲಿ ನಾನು ಪ್ಯಾರಿಸ್‌ನಲ್ಲಿ ಇರುತ್ತಿದ್ದೆ). ನಾನು ಹುಲ್ಲಿನ ಮೇಲೆ ಮಲಗುತ್ತಿದ್ದೆ, ಇದ್ದಕ್ಕಿದ್ದ ಹಾಗೆ, ಹುಲ್ಲು ಮತ್ತು ಭೂಮಿಯ ಸ್ಪರ್ಶದೊಂದಿಗೆ, ಪುಫ್! ಅಲ್ಲೊಂದು ಬಗೆಯ ಆಂತರಿಕ ಸ್ಫೋಟವಿತ್ತು – ಸಂಪರ್ಕವು ಸಾಧಿಸಿತ್ತು, ಮತ್ತು ನಂತರದ ಎಲ್ಲ

ಅನುಭವಗಳೊಂದಿಗೆ ಪೂರ್ಣ ಪ್ರಜ್ಞೆಯು ಬಂದಿತು. "ಒಳ್ಳೆಯದು, ಎಲ್ಲ ತೊಂದರೆಗಳಿಂದ ಲಾಭವಾಯಿತು" ಎಂದು ನನಗೆ ನಾನು ಹೇಳಿಕೊಂಡೆ.

ಮೊಟ್ಟೆಯಲ್ಲಿನ ಮರಿಹಕ್ಕಿಯ ರಚನೆಯಂತೆ ನಿಧಾನವಾಗಿ, ಅತಿಸೂಕ್ಷ್ಮವಾಗಿ ಕೆಲಸವು ಹೇಗಾಗುತ್ತದೆ ಎಂದು ನಾನು ಖಚಿತವಾಗಿದ್ದೇನೆ, ನೀವು ಚಿಪ್ಪನ್ನು ನೋಡುತ್ತೀರಿ, ಬರೀ ಚಿಪ್ಪನ್ನು ನೀವು ನೋಡುತ್ತೀರಿ, ಒಳಗಡೆ ಏನಿದೆ ಎಂದು ನಿಮಗೆ ಗೊತ್ತಿಲ್ಲ, ಅದು ಬರಿ ಮೊಟ್ಟೆಯೋ ಅಥವಾ ಮರಿಹಕ್ಕಿಯೊ (ಸಾಮಾನ್ಯವಾಗಿ, ಖಂಡಿತವಾಗಿಯೂ ವಿಶೇಷ ಉಪಕರಣಗಳ ಮೂಲಕ ನೀವು ನೋಡಬಹುದು) ನಂತರ ಅದರ ಕೊಕ್ಕು ಕುಕ್ಕುತ್ತ ಹೋಗುತ್ತದೆ! ಮತ್ತೆ ನಂತರ ಕೀಚುವಿಕೆ! ಮರಿಯು ಹಾಗೆಯೇ ಹೊರಗೆ ಬರುತ್ತದೆ. ಚೈತ್ಯ ಪುರುಷನ ಸ್ಪರ್ಶಕ್ಕೂ ನಿಖರವಾಗಿ ಇದೇ ಪ್ರಕಾರದ ಸನ್ನಿವೇಶವಿರುತ್ತದೆ. ಗುರಿಯನ್ನು ಹೊಂದುವುದಕ್ಕಾಗಿ, ತಿಂಗಳುಗಳವರೆಗೆ, ಕೆಲವೊಮ್ಮೆ ವರ್ಷಗಳವರೆಗೆ ಮುಚ್ಚಿದ ಬಾಗಿಲ ಮುಂದೆ ನೀವು ಕೂತಿರಬಹುದು, ನೂಕು, ನೂಕು, ನೂಕುತ್ತಿರು, ಮತ್ತು ಒತ್ತಡವನ್ನು ಅನುಭವಿಸಿ, ಅನುಭವಿಸಿ (ಅದು ನೋವುಂಟು ಮಾಡುತ್ತದೆ!) ಅಲ್ಲಿ ಮತ್ತೇನೂ ಇಲ್ಲ, ಪರಿಣಾಮಗಳಿಲ್ಲ. ನಂತರ, ಆಕಸ್ಮಾತ್ತಾಗಿ, ಯಾಕೆ ಅಥವಾ ಹೇಗೆ ಎಂದು ನಿಮಗೆ ಗೊತ್ತಾಗುವುದಿಲ್ಲ, ನೀವು ಕುಳಿತುಕೊಳ್ಳುತ್ತೀರಿ, ಮತ್ತು ಪೂಫ್! ಎಲ್ಲವೂ ವ್ಯಾಪಕವಾಗಿ – ಮುಕ್ತವಾಗಿ ಸ್ಫೋಟಗೊಳ್ಳುತ್ತದೆ, ಅಲ್ಲಿ ಎಲ್ಲವೂ ಅಣಿಯಾಗಿದೆ, ಎಲ್ಲವೂ ಮಾಡಲ್ಪಟ್ಟಿದೆ – ಮುಗಿಯಿತು, ನೀವು ಒಂದು ಪೂರ್ಣ ಚೈತ್ಯ ಪ್ರಜ್ಞೆಯಾಗಿ ಹೊರಹೊಮ್ಮುವಿರಿ ಮತ್ತು ಚೈತ್ಯ ಪುರುಷನೊಂದಿಗೆ ಹತ್ತಿರವಾಗುವಿರಿ. ನಂತರ ಎಲ್ಲವೂ ಬದಲಾಗುತ್ತದೆ – ಎಲ್ಲವೂ ಬದಲಾಗುತ್ತದೆ – ನಿಮ್ಮ ಜೀವನವು ಸಂಪೂರ್ಣವಾಗಿ ಬದಲಾಗುತ್ತದೆ, ಅದು ನಿಮ್ಮ ಸಕಲ ಇರುವಿಕೆಯ ತಿರುವುಮುರುವು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಸೆಪ್ಟೆಂಬರ್ 5, 1962**

**ಸಂಗೀತ ಪ್ರಪಂಚ**

ಪ್ರಥಮ ಬಾರಿಗೆ ನಾನು ಬೀಥೋವೆನ್‌ರವರ ವಾದ್ಯ ಸಂಗೀತವನ್ನು 'ಡಿ' (ಒಂದು ಸಂಗೀತ ಸ್ವರ – ಚಿಹ್ನೆ)ಯಲ್ಲಿ ಆಲಿಸಿದೆ – ಪಿಟೀಲು ಮತ್ತು ವಾದ್ಯ ಸಂಗೀತಕ್ಕಾಗಿ 'ಡಿ' ಪ್ರಧಾನ ಶ್ರೇಣಿಯಲ್ಲಿ ... ಇದ್ದಕ್ಕಿದ್ದಂತೆ ಪಿಟೀಲು

ಪ್ರಾರಂಭವಾಗುತ್ತದೆ (ಇದು ಆರಂಭದಲ್ಲಿ ಸರಿಯಾದುದಲ್ಲ – ಮೊದಲು ವಾದ್ಯ ಸಂಗೀತ ನಂತರ ಪಿಟೀಲು ವಾದನ), ಪಿಟೀಲಿನ ಮೊದಲ ಸ್ವರಗಳೊಂದಿಗೆ (ಇಜಾಯಿ ಪಿಟೀಲು ನುಡಿಸುತ್ತಲಿದ್ದ, ಅದ್ಭುತ ಸಂಗೀತಗಾರ!), ಮೊದಲ ಸ್ವರಗಳೊಂದಿಗೆ ನನ್ನ ಬುದ್ಧಿಯು ಇದ್ದಕ್ಕಿದ್ದಂತೆ ತೆಗೆದುಕೊಂಡಂತಾಯಿತು, ಆ ನಾನು ಅಂತಹ ಭವ್ಯತೆಯಲ್ಲಿ ಮುಳುಗಿಹೋದೆ... ಓಹ್, ಅದು ನಿಜಕ್ಕೂ ತುಂಬಾ ಚನ್ನಾಗಿತ್ತು! ಒಂದು ಘಂಟೆಗೂ ಹೆಚ್ಚು ಸಮಯ ನಾನು ಅತ್ಯಾನಂದ ಸ್ಥಿತಿಯಲ್ಲಿದ್ದೆ. ಇಜಾಯಿ ಒಬ್ಬ ನಿಜವಾದ ಸಂಗೀತಗಾರ!

ನೀವು ಮನಸ್ಸಿನಲ್ಲಿಟ್ಟುಕೊಳ್ಳಿ, ನನಗೆ ಆ ಎಲ್ಲ ಪ್ರಪಂಚಗಳ ಬಗ್ಗೆ ಏನೂ ತಿಳಿದಿರಲಿಲ್ಲ, ನನಗೆ ಸ್ವಲ್ಪ ಜ್ಞಾನವೂ ಇರಲಿಲ್ಲ; ಆದರೆ ನನ್ನ ಎಲ್ಲ ಅನುಭವಗಳು ನನ್ನ ಯಾವುದೇ ಆ ಬಯಕೆಯಿಲ್ಲದೆ – ಅನಿರೀಕ್ಷಿತವಾಗಿ ಬಂದವು. ನಾನು ವರ್ಣಚಿತ್ರವನ್ನು ನೋಡಿದಾಗ, ಅದೇ ಸಂಗತಿ: ನನ್ನ ತಲೆಯೊಳಗೆ ಏನೋ ಇದ್ದಕ್ಕಿದ್ದಂತೆ ತೆರೆದುಕೊಳ್ಳುತ್ತದೆ ಮತ್ತು ವರ್ಣಚಿತ್ರದ ಮೂಲವನ್ನು ನಾನು ನೋಡುತ್ತೇನೆ – ಮತ್ತು ಅಂತಹ ಬಣ್ಣಗಳು! ... ಎಲ್ಲಾ ಮಾನಸಿಕ ಹಂತಗಳಿಂದ ಹೋಗದೆ, ಜೀವದಿಂದ ನೇರವಾಗಿ ಆ ಜಗತ್ತಿಗೆ ಹೋಗಬಹುದು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಅಕ್ಟೋಬರ್ 27, 1962**

## ಸಂಗೀತದಿಂದ ಉತ್ಪತ್ತಿಯಾಗುವ ಆಕಾಂಕ್ಷೆ

ಪ್ಯಾರಿಸ್‌ನಲ್ಲಿರುವ ಯಹೂದಿ ದೇವಾಲಯಗಳು ಸುಂದರವಾದಂತಹ ಸಂಗೀತ ಹೊಂದಿವೆ; ಓಹ್, ಎಂತಹ ಸುಂದರವಾದ ಸಂಗೀತ! ನನ್ನ ಮೊದಲ ಅನುಭವಗಳಲ್ಲಿ ಒಂದನ್ನು ದೇವಾಲಯದಲ್ಲಿ ಹೊಂದಿದೆ. ಅದೊಂದು ಮದುವೆಯಲ್ಲಿ ಅದ್ಭುತವಾದ ಸಂಗೀತವನ್ನು ನುಡಿಸಲಾಗುತ್ತಿತ್ತು – ಅವರು ಸಂತ ಸಾಂಸ್ ಎಂದು ನಂತರ ತಿಳಿಯಿತು; ಅವರು ನುಡಿಸುತ್ತಿದ್ದುದ್ದು ಆರ್ಗನ್ ಸಂಗೀತ, ಅವರದು ಪ್ಯಾರಿಸ್‌ನಲ್ಲೇ ಎರಡನೇ ಅತ್ಯಂತ ಶ್ರೇಷ್ಠ ಆರ್ಗನ್ ಸಂಗೀತ – ಅದ್ಭುತ! ನಾನು 14 ವರ್ಷದವಳಾಗಿದ್ದೆ, ನನ್ನ ತಾಯಿಯೊಡನೆ ಎತ್ತರದ ಮೊಗಸಾಲೆಯಲ್ಲಿ ಕುಳಿತುಕೊಂಡಿದ್ದೆ, ಅಲ್ಲಿ ಈ ಸಂಗೀತವನ್ನು ನುಡಿಸಲಾಗುತ್ತಿತ್ತು. ಅಲ್ಲಿ ಕೆಲವು ಕಿಡಕಿಗಳು ಸೀಸದ ಗಾಜುಗಳನ್ನು ಹೊಂದಿದ್ದವು – ಬಿಳಿ ಬಣ್ಣದ್ದು, ವಿನ್ಯಾಸವಿಲ್ಲದ್ದು. ಅವುಗಳಲ್ಲಿನ ಒಂದು ಕಿಡಕಿಯ ಕಡೆಗೆ ಎವೆಯಕ್ಕದೆ

ನೋಡುತ್ತಿದೆ, ಸಂಗೀತದಿಂದ ಮೇಲೆ ತೇಲಾಡಿದ ಅನುಭವವಾಗುತ್ತಿತ್ತು, ಆಗ ಕಿಡಕಿಯಿಂದ ಇದ್ದಕ್ಕಿದ್ದಂತೆ ಹೊಳಪೊಂದು ಮಿಂಚಿನ ವೇಗದಿಂದ ಬಂತು. ಸರಿಯಾಗಿ ಮಿಂಚಿನಂತೆ. ನನ್ನ ಕಣ್ಣುಗಳು ತೆರೆದುಕೊಂಡಿದ್ದವು – ಆ ಹೊಳಪು ನನ್ನ ಕಣ್ಣುಗಳನ್ನು ಪ್ರವೇಶಿಸಿತು – ಈ ರೀತಿ ಪ್ರವೇಶಿಸಿತು (ಶ್ರೀಮಾತೆಯವರು ತಮ್ಮ ಎದೆಯನ್ನು ರಭಸವಾಗಿ ಬಡಿದುಕೊಂಡರು) ಮತ್ತೆ ನಂತರ ನಾನು ..... ನಾನು ವಿಸ್ತಾರವಾಗುವ ಮತ್ತು ತುಂಬಾ ಬಲಿಷ್ಠವಾಗುವ ಅನುಭವ ಹೊಂದಿದೆ..... ಅದು ಕೆಲವು ದಿನಗಳವರೆಗೆ ಇತ್ತು. ಗತಕಾಲದ ವಸ್ತುವೊಂದು ಸಂಗೀತದಿಂದ ಉತ್ಪತ್ತಿಯಾಗುವ ಆಕಾಂಕ್ಷೆಯ ಮುಖಾಂತರ ನನ್ನಲ್ಲಿ ಮರಳಿಬಂದಿದೆ ಎಂದು ನಂತರ ನಾನು ತಿಳಿದುಕೊಂಡೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಏಪ್ರಿಲ್ 29, 1961**

**ಶ್ರೀಮಾತೆಯವರ ಸಂಗೀತ**

ನಾನು ಏನನ್ನು ನುಡಿಸುತ್ತೀನೋ ಅದು ಸಂಗೀತವಲ್ಲ, ನಾನು ಸಂಗೀತವನ್ನು ನುಡಿಸಲು ಪ್ರಯತ್ನಿಸುವುದಿಲ್ಲ: ಸರಳವಾಗಿ ಹೇಳುವುದಾದರೆ, ಅದೊಂದು ಬಗೆಯ ನಾದದೊಂದಿಗಿನ ಧ್ಯಾನ.

ಸಂಗೀತದ ಶ್ರೇಷ್ಠ ಅಲೆಗಳಂಥ ಏನೋ ಒಂದನ್ನು ನಾನು ನಿರಂತರವಾಗಿ ಕೇಳುತ್ತೇನೆ. ಕೇವಲ ನಾನು ಸ್ವಲ್ಪ ಹಿಂದೆ ಸರಿಯಬೇಕಷ್ಟೆ (ಪ್ರಾಪಂಚಿಕ ವಿಷಯಗಳಿಂದ), ನಾನು ಅದನ್ನು ಕೇಳಿಸಿಕೊಳ್ಳುತ್ತೇನೆ. ಅದು ಯಾವಾಗಲೂ ಅಲ್ಲಿರುತ್ತದೆ. ಅದು ಸಂಗೀತ, ಆದರೆ ಶಬ್ದವಿಲ್ಲದ್ದು! ಸಂಗೀತದ ಶ್ರೇಷ್ಠ ಅಲೆಗಳು. ನಾನು ಯಾವಾಗ ಆ ಅಲೆಗಳನ್ನು ಕೇಳುತ್ತೇನೋ, ನನ್ನ ಕೈಗಳು ನುಡಿಸಲು ಪ್ರಚೋದನೆಯನ್ನು ಪಡೆಯುತ್ತವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/571**

ನಾನು ಯಾವಾಗ ನುಡಿಸುತ್ತೇನೊ, ಸಾಮಾನ್ಯವಾಗಿ ನಾನು ಏನನ್ನು ನುಡಿಸುತ್ತಿದ್ದೇನೊ ಅದನ್ನು ಕೇಳುತ್ತೇನೆ. ಅದನ್ನು ಹೇಳುವುದು ಕಷ್ಟ... ಅದು ಸಾಧಾರಣವಾದ ಶಬ್ದವಲ್ಲ, ಅದೊಂದು ಶಬ್ದಗಳ ಸಂಯೋಜನೆ, ಅದಲ್ಲ... ಅಲ್ಲ,

ಅದು ಸತ್ಯ, ಅದು ಅದೇ ಶಬ್ದವಲ್ಲ ಆದರೆ ಆ ಶಬ್ದದ ತಿರುಳಿನ ಹಾಗೆ. ಉದಾಹರಣೆಗೆ, ನಾನು ಏನನ್ನು ಕೇಳುತ್ತಿದ್ದೇನೋ ಅದು ದೊಡ್ಡ ವಾದ್ಯಗೋಷ್ಠಿಯಾಗಿ ವ್ಯಕ್ತವಾಗಬೇಕೆಂಬುದು ನನ್ನ ಒಂದು ಬಗೆಯ ಅನಿಸಿಕೆ... ನಾನು ಅದನ್ನು ನೋಡುತ್ತೇನೆ, ನಿಮಗೆ ಗೊತ್ತಾ, ನನ್ನ ಸುತ್ತ ಏನೋ ಒಂದು ದೊಡ್ಡ ವಾದ್ಯಗೋಷ್ಠಿಯಂತೆ ನೋಡುತ್ತೇನೆ, ನನ್ನ ಎಡಕ್ಕೆ, ನನ್ನ ಬಲಕ್ಕೆ, – ಮತ್ತು ನಾನು ಅದನ್ನು ಹಾರ್ಮೋನಿಯಮ್ ಮೇಲೆ ನಕಲು ಮಾಡಬೇಕು. ಇದೊಂಥರ ವಾದ್ಯಗಾರರಿಂದ ರೂಪಿತವಾದ ಒಂದು ವಾದ್ಯಮೇಳವಿದ್ದಂತೆ. ಅದರಲ್ಲಿಯ ಪ್ರತಿಯೊಂದು ಗುಂಪು ಆ ಸಂಯೋಜನೆಯ ಒಂದು ಭಾಗವನ್ನು ಕಿವಿಯು ಗ್ರಹಿಸುವುದಕ್ಕಿಂತ ಅತಿ ಹೆಚ್ಚು ಪೂರ್ಣವಾದ ನಾದವನ್ನು ವ್ಯಕ್ತಪಡಿಸುತ್ತಿತ್ತು. ಅದು ಹಾಗೆಯೇ, ಅದು, ಬರೀ ಯಾವುದೋ ಒಂದು ಸಣ್ಣ ರಾಗವನ್ನು ಗುಂಯ್‌ಗುಡುತ್ತ ವ್ಯಕ್ತಪಡಿಸುವುದಲ್ಲ, ಅದೊಂದು ಸಂಗೀತ ಕಂಪನಗಳ ಒಡಲು. ನಾನು ಅದನ್ನು ಕೇಳುತ್ತ, ಅದು ಹೇಗೆ ಪ್ರಕಟವಾಗಬೇಕೆಂಬುದನ್ನು ನಾನು ನೋಡುತ್ತೇನೆ. ನನ್ನ ಸುತ್ತಮುತ್ತ ಒಂದು ದೊಡ್ಡದಾದ ವಾದ್ಯಮೇಳವನ್ನು ಕಾಣುತ್ತೇನೆ. ಅದೊಂದು ಬಗೆಯ ನೋಟ; ಅದು ಭೌತಿಕ ಕಣ್ಣಿನ ನಿಖರವಾದ ನೋಟವಲ್ಲ, ಆದರೆ ಯಾವುದೋ ತುಂಬಾ... ಪ್ರಜ್ಞೆಯು ಹೇಗೆ ನೋಡುತ್ತದೆ (ಕಾಣುತ್ತದೆ) ಅನ್ನುವುದು. ಅದನ್ನು ನಾನು ಹೇಗೆ ಬಣ್ಣಿಸಲಿ! ಅದು ಸಾಧಾರಣ ಬಗೆಯ ನಮ್ಮ ನೋಟ, ಅಥವಾ ಆಲಿಕೆ ಕೂಡ ಎಂದಷ್ಟೇ ನಾನು ಹೇಳಬಲ್ಲೆ.

ಅದೊಂದು, ನೋಟ, ನಾದಗಳ ಸಂಯೋಜನೆಯ ಅರಿವು ಮತ್ತು ಅವು ಹೇಗೆ ವ್ಯಕ್ತವಾಗಬೇಕೆಂಬುದನ್ನು ಒಳಗೊಂಡ ಸಮಗ್ರ ಜ್ಞಾನ...

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಅಕ್ಟೋಬರ್ 27, 1962**

## ಶ್ರೀ ಅರವಿಂದರೊಡನೆ ಚೈತ್ಯ ಪುರುಷನನ್ನು ಬಿಡುವುದು

ನಿಮಗೆ ಗೊತ್ತೆ, ಒಂದು ವರ್ಷ ಶ್ರೀ ಅರವಿಂದರವರ ಜೊತೆ ಇದ್ದ ನಂತರ, ಯುದ್ಧ ಕಾರಣ, ಮೊದಲನೆ ವಿಶ್ವ ಯುದ್ಧದ ಸಮಯದಲ್ಲಿ ಅಲ್ಲಿಂದ ಬಿಟ್ಟಾಗ ಎಲ್ಲ ನರಗಳು ಅಸ್ವಸ್ಥವಾಗಿದ್ದವು: ಅವೆಲ್ಲವೂ ನೋವಿನ ಒತ್ತಡದ ಸ್ಥಿತಿಯಲ್ಲಿದ್ದವು (ಎಲ್ಲ ನರಗಳು ಅಸ್ವಸ್ಥವಿದ್ದಾಗ ಅದನ್ನು ನರಗಳ ಉರಿಯೂತ ಕರೆಯುತ್ತಾರೆಂದು ನನ್ನ ಅನಿಸಿಕೆ). ವಿಶೇಷವಾಗಿ, ಸರ್ವವೂ ಎಲ್ಲ ಕಡೆ ಅಸ್ತವ್ಯಸ್ತವಾದಾಗ ಅದು

ದುಃಖಕಾರಕ: ರಕ್ತ ಪರಿಚಲನೆ ಅಸ್ತವ್ಯಸ್ತವಾದಾಗ, ಜೀರ್ಣಕ್ರಿಯೆ ಅಸ್ತವ್ಯಸ್ತವಾದಾಗ, ಎಲ್ಲವೂ ಅಸ್ತವ್ಯಸ್ತವಾಗಿತ್ತು (ಅದು ಫ್ರಾನ್ಸ್‌ನಲ್ಲಿ, ದಕ್ಷಿಣ ಫ್ರಾನ್ಸ್‌ನಲ್ಲಿ). ನರಗಳು ಅದನ್ನು ಜ್ಞಾಪಿಸಿಕೊಳ್ಳುತ್ತವೆ, ಮತ್ತು ನನಗೆ ಯಾಕೆಂದು ಗೊತ್ತಿಲ್ಲ, ಇಲ್ಲೊಮ್ಮೆ ಸಂಗತಿಗಳು ಬಹಳೇ ಕಠಿಣವಾದಾಗ, ಅವು ಜ್ಞಾಪಿಸಿಕೊಂಡವು. ಶ್ರೀ ಅರವಿಂದರು ಅಲ್ಲಿದ್ದರು ಮತ್ತು ನಾನು ಅವರಿಗೆ ಹೇಳಿದೆ (ಈ ಕಥೆಯನ್ನು ನಿಮಗೆ ಈಗಾಗಲೇ ಹೇಳಿರಬೇಕೆಂದುಕೊಳ್ಳುತ್ತೇನೆ). ಒಂದು ಕೈ ಬಂದು ಎಲ್ಲ ನೋವನ್ನು ಹಾಗೆಯೇ ತೆಗೆದುಕೊಂಡು ಹೋದಂತಹ ಸಂಪೂರ್ಣ ಅರಿವು ನನಗಾಗಿದೆ – ಒಂದು ಕ್ಷಣದಲ್ಲಿ ಅದು ಹೋಗಿತ್ತು. ಮತ್ತೆ ಅದು ಎಂದಿಗೂ ತಿರುಗಿ ಬರಲಿಲ್ಲ. ಈಗ ಕಾಲಕಾಲಕ್ಕೆ, ಜನರು ಕೇಡೆಣಿಸಿದಾಗ ಅಥವಾ ಅವರ ಯೋಚನೆಗಳು ಸರಿಯಾಗಿರದಿದ್ದರೆ, ಜೊತೆಗೆ ವಿಶ್ರಾಂತಿ–ಯಿಂದಿರದಿದ್ದರೆ, ತಿನ್ನುವಿಕೆ ಇರದಿದ್ದರೆ, ನಿದ್ರೆ ಇರದಿದ್ದರೆ ಆಗ ಕಾಲಕಾಲಕ್ಕೆ, ಇಲ್ಲಿ ಅಥವಾ ಅಲ್ಲಿ ನರಗಳು ಒತ್ತಡಕ್ಕೊಳಗಾಗುತ್ತವೆ. ತನ್ನ ಪರಮಾವಧಿಯಲ್ಲಿ ಅದು ತೀಕ್ಷ್ಣವಾದ ನೋವು. ಫ್ರಾನ್ಸ್‌ನಲ್ಲಿ ಅದು ನನ್ನಲ್ಲಿ ವಾರಗಳವರೆಗೆ ಇತ್ತು. ಕೆಲವೊಮ್ಮೆ ಅದು ಬರುತ್ತಿತ್ತು, ಮತ್ತೆ ನಾನು ನಿಶ್ಚಲವಾಗಿರುತ್ತಿದ್ದೆ... ಮೃದುವಾಗುತ್ತಿದ್ದೆ... ದೈವೀ ಉಪಸ್ಥಿತಿಯಲ್ಲಿ – ಆ ಮೇಲೆ ಆಚೆಗೆ, ಸುಳಿವಿಲ್ಲದೆ ಅದು ಹೋಗುತ್ತಿತ್ತು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಫೆಬ್ರವರಿ 20, 1968**

ಅವರು, ಅದನ್ನು ನರಗಳ ರೋಗವೆಂದು ಕರೆಯುತ್ತಾರೆ: ಎಲ್ಲ ನರಗಳು ಸೂಕ್ಷ್ಮಗ್ರಾಹಿಗಳಾಗುತ್ತವೆ ಮತ್ತು ಭಯಾನಕವಾಗಿ ಬಳಲುತ್ತವೆ. ನಾನು ಮೊದಲನೇ ಸಲ ಅದನ್ನು ಅನುಭವಿಸಿದಾಗ, ಎಂದಿಗೂ ಊಟ ಮಾಡಲಿಲ್ಲ, ಎಂದಿಗೂ ನಿದ್ರೆ ಮಾಡಲಿಲ್ಲ ಎಂದಿಗೂ ಚಲಿಸಲಿಲ್ಲ, ಎಂದಿಗೂ...

ಅದು ಯಾಕೆಂದರೆ... ನಾನು ಏನೋ ಒಂದು ಹುಚ್ಚು ಕೆಲಸ ಮಾಡಿದ್ದೆ: ನನ್ನ ಚೈತ್ಯ ಪುರುಷನನ್ನು ಬಿಟ್ಟು ನಾನು ಫ್ರಾನ್ಸಿಗೆ ಹೋದೆ; ವಾತಾವರಣದಿಂದ ನಾನು ಸಾಕಷ್ಟು ದೂರ ಹೋಗುತ್ತಿದ್ದ ಹಾಗೆ ಅದು ನನ್ನನ್ನು ವಶಪಡಿಸಿಕೊಂಡಿತು; ಮೆಡಿಟರೇನಿಯನ್ ಸೇರುತ್ತಿದ್ದ ಹಾಗೆ, ಅದು ಆರಂಭವಾಯಿತು. ಮತ್ತು ಅದು ತುಂಬಾ ಗಂಭೀರವಾಯಿತು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ನವೆಂಬರ್ 12, 1969**

# ಅಲ್ಜೇರಿಯಾ

– ಅನುವಾದ: ಪ್ರೊ. ವೀರಭದ್ರಪ್ಪ ಕೆ.

## ಥಿಯಾನ್ ಮತ್ತು ಶ್ರೀಮತಿ ಥಿಯಾನ್

ಅವರು (ಮಾಕ್ಸಿಥಿಯಾನ್) ಎರಡು ಹೆಸರುಗಳನ್ನು ಇಟ್ಟುಕೊಂಡಿದ್ದರು ಒಂದು ಅವರು ಅಲ್ಜೇರಿಯಾದಲ್ಲಿ ಆಶ್ರಯ ತೆಗೆದುಕೊಂಡಾಗ (ಯಾವ ಕಾರಣಕ್ಕಾಗಿ ನನಗೆ ಗೊತ್ತಿಲ್ಲಾ) ಇಟ್ಟುಕೊಂಡ ಅರಬ್ ಹೆಸರು. ಬ್ಲಾವಸ್ಕಿಯವರೊಂದಿಗೆ ಕೆಲಸ ಮಾಡಿ ಈಜಿಪ್ತದಲ್ಲಿ ರಹಸ್ಯ ಸಂಸ್ಥೆಯನ್ನು ಹುಟ್ಟುಹಾಕಿದ ನಂತರ ಅವರು ಅಲ್ಜೇರಿಯಾಕ್ಕೆ ಹೋದರು ಮತ್ತು ಅವರಲ್ಲಿ ತಮ್ಮನ್ನು ತಾವೆ "ಐಯ್ ಅಜೇಜ್" ಎಂದು ಕರೆದುಕೊಂಡರು (ಅರೇಬಿಯಾದ ಮೂಲದಲ್ಲಿ "ಪ್ರೀತಿ ಪಾತ್ರ" ಎಂದರ್ಥ, ನಂತರ ಯಾವಾಗ ಅವರು ಅವರ ವಿಶ್ವವಿಮರ್ಶೆ ಮತ್ತು ವಿಶ್ವಮಯಗೊಳಿಸುತ್ತಿರುವಾಗ ತಮ್ಮನ್ನು ತಾವೇ ಮಾಕ್ಸ್‌ಥಿಯಾನ್ ಎಂದು ಕರೆದುಕೊಂಡರು ಅದರರ್ಥ ಪರಮೋಚ್ಚ ದೇವರು(!) ಶ್ರೇಷ್ಠ ದೇವರು! ಇವೆರಡು ಹೆಸರು ಬಿಟ್ಟು ಅವರು ಬೇರೆ ಹೆಸರಿನಿಂದ ಯಾರಿಗೂ ಗೊತ್ತಿರಲ್ಲಿಲ್ಲಾ ಮ್ಯಾಕ್ಸ ಥಿಯನ್ ಅವರ ಹೆಂಡತಿ ಒಬ್ಬ ಆಂಗ್ಲ ಮಹಿಳೆ ಅವರು ತಾನು ಭಾರತದಲ್ಲಿ ದೀಕ್ಷೆ ಪಡೆದೆನೆಂದು ಹೇಳುತ್ತಿದ್ದರು (ಅವರಿಗೆ ಸ್ವಲ್ಪ ಸಂಸ್ಕೃತ ಗೊತ್ತಿತ್ತು ಮತ್ತು ಋಗ್ವೇದ ಚೆನ್ನಾಗಿ ಗೊತ್ತಿತ್ತು) ನಂತರ ಅವರು ಒಂದು ಸಂಪ್ರದಾಯವನ್ನು ಸೂತ್ರೀಕರಿಸಿ ಆ ಸಂಪ್ರದಾಯವನ್ನು ಅವರು ಕಬಾಲ ಮತ್ತು ವೇದಗಳ ಮುಂದುವರೆದ ಸಂಪ್ರದಾಯವೆಂದರು. ಆದರೆ ಹಲವು ಸಂಗತಿಗಳು (ಶ್ರೀಮತಿ ಥಿಯಾನ್‌ರವರು ಅತೀಂದ್ರಿಯ ದೃಷ್ಠಿಯುಳ್ಳವರಾಗಿದ್ದರು ಅವರಿಗೆ ಮುಂದಾಗುವ ಸೂಚನೆಗಳು ಬರುತ್ತಿದ್ದವು ಒಹ್ ಅವರು ಅದ್ಭುತವಾಗಿದ್ದರು), ಬಹಳಷ್ಟು ವಿಷಯಗಳನ್ನು ನಾನು ಸ್ವತಃ ತಿಳಿದುಕೊಳ್ಳುವ ಮುನ್ನವೆ ಅವುಗಳನ್ನು ಕಾಣುತ್ತಿದ್ದೆ ಮತ್ತು ತಿಳಿದುಕೊಳ್ಳುತ್ತಿದ್ದೆ ಮತ್ತು ಅವು ಅಷ್ಟೇ ಸದೃಢವಾಗಿರುತ್ತಿದ್ದವು.

ವೈಯಕ್ತಿಕವಾಗಿ ನನಗೆ ಮನವರಿಕೆಯಾಗಿದ್ದೆಂದರೆ, ಈ ಎರಡು ಸಂಪ್ರದಾಯಗಳ ಮುಂದುವರಿದ ಜ್ಞಾನವು ಸಮಗ್ರ ಜ್ಞಾನದ ಸನಿಹದಲ್ಲಿದೆ ಹಾಗೂ ಖಚಿತವಾಗಿ ಅಲ್ಲಿನ ಅನುಭವಗಳಲ್ಲಿ ಸಾಮ್ಯತೆಯಿವೆ. ನಾನು ಇಲ್ಲಿಗೆ ಬಂದ ಮೇಲೆ ಶ್ರೀ ಅರವಿಂದವರಿಗೆ ಕೆಲ ವಿಷಯಗಳನ್ನು ನಿಗೂಢ ದೃಷ್ಠಿಕೋನದ ಮುಖಾಂತರ ತಿಳಿಯುತ್ತಿದೆ ಎಂದಾಗ ಅದು ವೇದದ ಸಂಪ್ರದಾಯಕ್ಕೆ

ಹೊಂದಿಕೆಯಾಗುತ್ತದೆ ಎಂದು ಯಾವಾಗಲು ಹೇಳುತ್ತಿದ್ದರು. ಕೆಲವೊಂದು ನಿಗೂಡ ವಿದ್ಯೆಗಳ ಅಭ್ಯಾಸದ ಬಗ್ಗೆ ಅವರು ಹೇಳುತ್ತಿದ್ದರು, ಅವೆಲ್ಲಾ ತಾಂತ್ರಿಕ – ಮತ್ತು ನನಗೆ ಆ ಸಮಯದಲ್ಲಿ ಏನು ಗೊತ್ತಿರಲಿಲ್ಲಾ. ವೇದಗಳ ಬಗ್ಗೆ ಆಗಲಿ ಅಥವಾ ತಾಂತ್ರಿಕದ ಬಗ್ಗೆ ಆಗಲಿ ಏನು ಗೊತ್ತಿರಲಿಲ್ಲಾ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ನವೆಂಬರ್ 4, 1958**

## ನಾನು ಯಾವಾಗಲೂ ಹೆದರಿಲ್ಲಾ

ಥಿಯಾನ ಅಸಾಧರಣ ಶಕ್ತಿ ಹೊಂದಿದ್ದರು ..... ಗುಡುಗು ಮಿಂಚುಗಳಿಂದ ಕೂಡಿದ ಒಂದು ಬಿರುಗಾಳಿ ದಿನ ಕುಳಿತುಕೊಳ್ಳುವ ಕೊಠಡಿಯಲ್ಲಿ ಮೇಲ್ಛಾವಣೆಯನ್ನು ಹತ್ತಿದರು, ಇಂತಹ ವಿಲಕ್ಷಣ ಸಮಯದಲ್ಲಿ ಮೇಲೆ ಹೋಗುವದು ಎಂದು ನಾನಂದೆ, ಅದಕ್ಕವರು ನಕ್ಕು ಹೇಳಿದರು "ನನ್ನ ಜೊತೆ ಬಾ, ಹೆದರಬೇಡ" ನಾನು ಅವರ ಜೊತೆ ಹೋದೆ ಅವರು ಕೆಲ ಪ್ರಾರ್ಥನೆಗಳನ್ನು ಮಾಡಿದರು ಮತ್ತು ನಮ್ಮ ಕಡೆ ಮಿಂಚೊಂದು ಬರುವದನ್ನು ನಾನು ಸ್ಪಷ್ಟವಾಗಿ ನೋಡಿದೆ. ಅಚಾನಕ್ಕಾಗಿ ಅದು ತನ್ನ ಪಥವನ್ನು ಬದಲಿಸಿತು, ಬಹುಶಃ ಅದು ಅಸಾಧ್ಯವೆಂದು ನೀನು ಹೇಳಬಹುದು, ಆದರೆ ಅದು ತಿರುಗಿಹೋಗಿ ದೂರದಲ್ಲಿ ಒಂದು ಗಿಡಕ್ಕೆ ಹೋಗಿ ಬಡೆಯಿತು. ನಾನು ಥಿಯಾನರನ್ನು ಕೇಳಿದೆ "ನೀವೆ ಅದನ್ನು ಮಾಡಿದ್ದಾ?" ಅವರು ತಲೆ ಅಲ್ಲಾಡಿಸಿದರು.

ಓಹ್! ಆ ಮನುಷ್ಯ ಭಯಂಕರ, ಅವನಲ್ಲಿ ಒಂದು ಭಯಂಕರ ಶಕ್ತಿಯಿತ್ತು. ಆದರೆ ಮೇಲ್ನೋಟಕ್ಕೆ ಒಳ್ಳೆಯ ಚಹರೆ!

ನೀನು ಅವರ ಛಾಯಾಚಿತ್ರ ನೋಡಿದ್ದೀಯಾ? ಇಲ್ಲವಾ? ನಾನು ನಿನಗೆ ತೋರಿಸಬೇಕು, ಅವರು ತುಂಬಾ ಸುಂದರವಾದ ಮನುಷ್ಯ, ಸುಮಾರು ಅರವತ್ತು ವರುಷ – ಐವತ್ತು ಮತ್ತು ಅರವತ್ತರ ನಡುವೆ.

ಮತ್ತು ನಾನು ಅಲ್ಲಿಗೆ ಹೋದಾಗ ಹೇಗೆ ಬರಮಾಡಿಕೊಂಡರು ಅಂತಾ? ನಾನು ನನ್ನ ಜೀವನದಲ್ಲಿ ಮೊದಲನೇ ಸಲ ಒಬ್ಬಳೆ ಪ್ರಯಾಣ ಮಾಡಿದ್ದೆ ಮತ್ತು ಮೊದಲನೇ ಸಲ ಮೆಡಿಟೇರಿಯನ್ ಸಮುದ್ರವನ್ನು ದಾಟಿದ್ದೆ. ಓರಾನ್ ಮತ್ತು ಟ್ಲೆಮ್ಸಿನ್ ನಡುವೆ ರೈಲಿನ ಪ್ರಯಾಣ ಸುಮಾರು ದೂರದ್ದು – ಹೇಗಾದರು ನಾನು ಉತ್ತಮ ರೀತಿಯಲ್ಲಿ ನಿರ್ವಹಿಸಿದೆ: ನಾನು ಅಲ್ಲಿಗೆ ಮುಟ್ಟಿದೆ. ನಾವು ನಿಲ್ದಾಣದಲ್ಲಿ

ಭೆಟ್ಟಿಯಾದೆವು ಮತ್ತು ಕಾರಿನ ಮೂಲಕ ಅವರ ಸ್ಥಳಕ್ಕೆ ಪ್ರಯಾಣ ಬೆಳೆಸಿದೆವು (ಅದು ಬಹಳ ದೂರವಿತ್ತು). ಕೊನೆಗೂ ಅವರ ತೋಟಕ್ಕೆ ಬಂದು ತಲುಪಿದೆವು – ಅದೊಂದು ಅದ್ಭುತ! ಅದು ಬೆಟ್ಟದ ಬದಿಗೆ ಚಾಚಿಕೊಂಡಿತ್ತು. ಅಲ್ಲಿಂದ ಟ್ಲೆಮ್ಸನ್ನಿನ ಸಂಪೂರ್ಣ ಕಣಿವೆ ಕಾಣುತ್ತಿತ್ತು. ನಾವು ಕೆಳಗಿನಿಂದ ವಿಶಾಲವಾದ ರಸ್ತೆಯ ಮೂಲಕ ಮೇಲೆ ಹತ್ತಿದೆವು. ನಾನು ಏನು ಹೇಳಲಿಲ್ಲಾ – ಅದೊಂದು ಭೌತಿಕ ದೃಷ್ಟಿಯಿಂದ ನಿಜವಾದ ಅನುಭವವಾಗಿತ್ತು. ನಾವು ಮನೆ ಕಾಣುವಷ್ಟು ಸಮೀಪ ಬಂದೆವು, ಅವರು ಅಲ್ಲಿ ನಿಂತು ಹೇಳಿದ್ದೇನೆಂದರೆ "ಅದು ನನ್ನ ಮನೆ" ಮನೆ ಕೆಂಪು! ಕೆಂಪು ಬಣ್ಣ ಬಳಿದಿತ್ತು, ಬಾರ್ಲೆ ಬಂದಿದ್ದಾಗ ಅವನು ಕೇಳಿದ್ದ "ನೀವು ನಿಮ್ಮ ಮನೆಗೆ ಕೆಂಪು ಬಣ್ಣ ಏಕೆ ಬಳಿದಿದ್ದೀರಿ?" (ಬಾರ್ಲೆ ಥಿಯಾನ್ ಅವರ ಪ್ರಥಮ ಶಿಷ್ಯ ಮತ್ತು ಫ್ರಾನ್ಸನೊಂದಿಗೆ ಸಂಬಂಧ ಏರ್ಪಡಿಸಿದ್ದ) ಥಿಯಾನ್ ಅವರ ಕಣ್ಣಲ್ಲಿ ಚೇಷ್ಟೆಯ ಮಿನುಗು ಮತ್ತು ಹಾಸ್ಯದಿಂದಲೇ ಎನ್ನುವಂತೆ ಹೇಳಿದ್ದು, ನಾನು ಬಾರ್ಲೆಗೆ ಹೇಳಿದ್ದೆ – ಯಾವಾಗಲೂ ಕೆಂಪು ಹಸಿರಿನೊಂದಿಗೆ ಸರಿಯಾಗಿ ಹೊಂದುತ್ತದೆಯೆಂದು! ಅದರೊಂದಿಗೆ ಈ ಮಹನೀಯನನ್ನು ಅರ್ಥಮಾಡಿಕೊಳ್ಳಲು ಪ್ರಾರಂಭಿಸಿದೆ ..... ನಾವು ಬೆಟ್ಟವನ್ನು ಹತ್ತುತ್ತಾ ಇದ್ದಾಗ ಹಠಾತ್ತಾಗಿ, ಎಚ್ಚರಿಕೆ ಕೊಡದೆ ತಿರುಗಿ ನನ್ನ ಮುಂದೆ ನಿಂತು ಹೇಳಿದ "ಈಗ ನೀನು ನನ್ನ ದಯೆಯಲ್ಲಿದ್ದೀಯಾ. ನೀನು ಹೆದರಿಕೊಂಡಿದ್ದೀಯಾ? ಅದೇ ರೀತಿ, ನಾನು ಅವರ ಕಡೆ ನೋಡಿದೆ, ನಕ್ಕು, ಉತ್ತರಿಸಿದೆ, ನಾನು ಯಾವಾಗಲೂ ಹೆದರಲ್ಲಾ, ನನ್ನಲ್ಲಿ ದೇವರಿದ್ದಾನೆ" (ಶ್ರೀಮಾತೆ ತಮ್ಮ ಹೃದಯವನ್ನು ಸ್ಪರ್ಶಿಸುವರು) ಅವರ ಮುಖ ನಿಜವಾಗಿ ಕಪ್ಪಿಟ್ಟಿತು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಫೆಬ್ರವರಿ 4, 1961**

**ಪೈನ್ ಮರದ ಕಥೆ**

ಪೈನ್ ಮರದ ಕಥೆ ಕೂಡಾ ಟ್ಲೆಮ್ಸನ್ನಿಂದ ಕೇಳಿದ್ದು.

ಯಾರೊ ಕೆಲವರು ಪೈನ್ ಮರಗಳನ್ನು ನೆಡಲು ಬಯಸಿದ್ದರು – ಸ್ಕಾಟ್ಲೆಂಡ್ ಮರಗಳು – ನಾನು ಆಲೋಚಿಸಿದ ಹಾಗೆ – ಮತ್ತು ತಪ್ಪಿನಿಂದಾಗಿ ನಾರ್ವೆಯ ಮರಗಳನ್ನು ಬದಲಾಯಿಸಿ ಕೊಡಲಾಯಿತು. ಹಿಮ ಬೀಳಲು ಪ್ರಾರಂಭವಾಯಿತು! ಇದಕ್ಕಿಂತ ಮುಂಚೆ ಅಲ್ಲಿ ಹಿಮ ಬಿದ್ದಿರಲಿಲ್ಲಾ. ನೀನು ಊಹಿಸಬಹುದು ಸಹರಾ ಮರುಭೂಮಿಯಿಂದ ಕೆಲವೇ ಕಿಲೋಮಿಟರ್

ದೂರದಲ್ಲಿದೆ ಆ ಪ್ರದೇಶ, ನೆರಳು ಬಿಸಿಲಿನ ಪ್ರದೇಶ. ಆದರೂ ಅಲ್ಲಿ ಹಿಮ ಬೀಳಲು ಪ್ರಾರಂಭವಾಯಿತು.

ಒಂದು ರಾತ್ರಿ ಶ್ರೀಮತಿ ಥಿಯಾನ್ರವರು ತಮ್ಮ ಹಾಸಿಗೆಯಲ್ಲಿ ಮಲಗಿದ್ದಳು. ಓರ್ವ ಕುಬ್ಜ ವ್ಯಕ್ತಿ ಬಂದು ಅವರನ್ನು ಎಬ್ಬಿಸಿದನು. ಅದು ನಾರ್ವೆಯೆಂಬ ಕುಬ್ಜ ವ್ಯಕ್ತಿ. ಚೂಪು ಟೊಪ್ಪಿಗೆ, ಚೂಪು ಮೂತಿಯ ಬೂಟು ಧರಿಸಿದ್ದರು. ತಲೆಯಿಂದ ಕಾಲಿನವರೆಗೆ ಹಿಮ ಆವರಿಸಿತ್ತು. ಅದು ಕರಗತೊಡಗಿ ಅವರ ರೂಮನ್ನು ಒದ್ದೆಯಾಗತೊಡಗಿತು. ಹಾಗಾಗಿ ಅವರು ಸಿಟ್ಟಿಗೆದ್ದು, ನೋಡಿ, ನೀನು ಏನು ಮಾಡುತ್ತಿದ್ದೀಯಾ? ನೀನು ಏಕೆ ಇಲ್ಲಿ ಈ ರೀತಿ ನೀರು ಚೆಲ್ಲುತ್ತಿದ್ದೀಯಾ! ಏನು ಮಾಡುತ್ತಿದ್ದೀಯ! ನೀನು ನೆಲ–ಹಾಸನ್ನು ಕೆಡಿಸಿ ಹಾಳು ಮಾಡುತ್ತಿದ್ದಿಯಾ! ಎಂದು ಕೂಗಿದ್ದರು.

"ನಮ್ಮನ್ನು ಈ ಬೆಟ್ಟಕ್ಕೆ ಕರೆದಿದ್ದಾರೆಂದು ಹೇಳಲು ಇಲ್ಲಿದ್ದೇನೆ, ಮತ್ತು ಅದಕ್ಕಾಗಿಯೇ ಇಲ್ಲಿಗೆ ನಾವು ಬಂದಿದ್ದೆವೆ."

"ನೀನು ಯಾರು?"

"ಹಿಮ ದೇವತೆ."

"ಅದು ಸರಿ" ಶ್ರೀಮತಿ ಥಿಯಾನ್ರವರು ಉತ್ತರಿಸಿದರು. ನಾನು ಎದ್ದ ಮೇಲೆ ಅದನ್ನು ನೋಡುತ್ತೇನೆ ಈಗ ನೀವು ಹೊರಡಿ ನನ್ನ ಕೊಠಡಿಯನ್ನು ನೀವು ಹಾಳುಮಾಡುತ್ತಿದ್ದೀರಿ, ಕುಬ್ಜ ವ್ಯಕ್ತಿ ಮರೆಯಾದರು. ಆದರೆ ಅವರು ಎದ್ದಾಗ ರೂಮಿನಲ್ಲಿ ನೀರಿನ ಕೊಚ್ಚೆಗುಂಡಿ ಇತ್ತು. ಹೀಗಾಗಿ ಅದು ಕನಸಾಗಿರಲಿಕ್ಕಿಲ್ಲಾ ಮತ್ತು ಕಿಡಕಿಯಿಂದ ಹೊರ ನೋಡಿದಾಗ ಬೆಟ್ಟಗಳೆಲ್ಲಾ ಹಿಮದಿಂದ ಮುಚ್ಚಲ್ಪಟ್ಟಿದ್ದವು! ಅದು ಮೊದಲನೇ ಸಲ. ಅವರು ಅಲ್ಲಿ ವರ್ಷಾನುಗಟ್ಟಲೆ ಇದ್ದರೂ ಹಿಮವನ್ನು ನೋಡಿದ್ದಿಲ್ಲಾ. ತದನಂತರ ಎಲ್ಲಾ ಚಳಿಗಾಲದಲ್ಲಿ ಬೆಟ್ಟಗಳೆಲ್ಲಾ ಹಿಮದಿಂದ ಆವರಿಸಲ್ಪಡುತ್ತಿದ್ದವು, ಅದನ್ನು ನೀವೂ ನೋಡಬಹುದು, ಯಾವಾಗ ಜನರು ಈ ನಿಗೂಢ ಪ್ರಜ್ಞೆಯಲ್ಲಿರುತ್ತಾರೆಯೋ ಆಗ ಅವರಿಗೆ ಎಲ್ಲವೂ ಸಾಧ್ಯ – ಒಂದು ತರಹದ ನೂತನ ಪರಿಸರ ಸೃಷ್ಟಿಯಾಗುತ್ತದೆ, ಆವಾಗ ಎಲ್ಲವೂ ಸಾಧ್ಯವಿದೆ. ನಮ್ಮ ಯುರೋಪನವರ ಸಾಮಾನ್ಯ ಜ್ಞಾನಕ್ಕೆ ಯಾವುದು ಅಸಾಧ್ಯವೋ – ಅದೆಲ್ಲಾ ಸಾಧ್ಯ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಫೆಬ್ರವರಿ 4, 1961**

## ಹನ್ನೆರಡು ದೇಹಗಳು ಮತ್ತು ಪರಿಶುದ್ಧ ಶ್ವೇತ ಬೆಳಕು

ಥಿಯಾನ್ ಮತ್ತು ಶ್ರೀಮತಿ ಥಿಯಾನ್‌ರವರು ಕೂಡ ಹೇಳುತ್ತಿದ್ದರು ಅವರು "ಸುಪ್ರಮಾನಸದ" ಬಗ್ಗೆ ಮಾತಾಡಿಲ್ಲಾ ಆದರೆ, ವೇದಗಳಲ್ಲಿ ಹೇಳಿದ ಹಾಗೆ ಸತ್ಯ ಜಗತ್ತು ಭೂಮಿ ಮೇಲೆ ಅವತರಿಸಿ "ಹೊಸ ಜಗತ್ತನ್ನು ಸೃಷ್ಠಿ ಮಾಡಬೇಕು" ಅವರು ಸುವಾರ್ತೆ(ಬೈಬಲ್‌ನ)ಯಿಂದ ಹಳೆ ನುಡಿಗಟ್ಟನ್ನು ತೆಗೆದುಕೊಳ್ಳುತ್ತಿದ್ದರು "ಹೊಸ ಸ್ವರ್ಗ ಮತ್ತು ಹೊಸ ಭೂಮಿ" ಇದು ಕೂಡ ವೇದದ ತರಹದ್ದೆ ಹೇಳಿಕೆ ಶ್ರೀಮತಿ ಥಿಯಾನ್‌ರವರಿಗೆ ಈ ರೀತಿಯ ಅನುಭವವಾಗುತ್ತಿತ್ತು ಮತ್ತು ಅದರ ಸೂಚನೆ ಕೊಡುತ್ತಿದ್ದರು (ನಿಜವಾಗಿ ನನಗೆ ಕಲಿಸಲಿಲ್ಲಾ) ಅದು ಹೇಗೆ ಮಾಡಬೇಕೆಂದು ಅವರು ತಮ್ಮ ದೇಹದಿಂದ ಹೊರಹೋಗುತ್ತಿದ್ದರು ಮತ್ತು ಪ್ರಾಣ ಜಗತ್ತಿನಲ್ಲಿ ಪ್ರಜ್ಞೆ ತಾಳುತ್ತಿದ್ದರು (ಮಧ್ಯದಲ್ಲಿ ಅನ್ವೇಷಕರಿಗೆ ಬಹಳಷ್ಟು ಸ್ಥರಗಳಿವೆ) ಪ್ರಾಣ ಜಗತ್ತಾದ ಮೇಲೆ ಮಾನಸಿಕ: ನೀವು ಪ್ರಜ್ಞಾ ಪೂರ್ವಕವಾಗಿ ಪ್ರಾಣ ಜಗತ್ತನ್ನು ಬಿಟ್ಟು ಹೊರಬಂದಿರಿ, ನೀವು ನೋಡಬಹುದು, ಮತ್ತು ಮಾನಸಿಕ ಜಗತ್ತನ್ನು ಪ್ರವೇಶಿಸಿದಿರಿ, ನಂತರ ಮಾನಸಿಕ ದೇಹವನ್ನು ಬಿಟ್ಟು ಮತ್ತೊಂದಕ್ಕೆ ಪ್ರವೇಶಿಸಿದಿರಿ....... ಅವರು ಬೇರೆ ಶಬ್ದಗಳನ್ನು ಬಳಸುತ್ತಾರೆ. ಮತ್ತೊಂದು ವರ್ಗೀಕರಣವಿದೆ (ನನಗೆ ನೆನಪಿಲ್ಲಾ). ಆದರೂ ಕೂಡ ಎಲ್ಲ ಅನುಭವವೂ ಮಾತ್ರ ಒಂದೇ ಆಗಿರುತ್ತದೆ ಮತ್ತು ಅದೇ ರೀತಿ ಅವರು ಹನ್ನೆರಡು – ಒಂದರ ನಂತರ ಒಂದು – ಹೀಗೆ ಹನ್ನೆರಡು ದೇಹಗಳನ್ನು ತಾಳುತ್ತಿದ್ದರು. ಅವರು ತುಂಬಾ ಪ್ರಗತಿ ಸಾಧಿಸಿದ್ದರು. ಮತ್ತು ವ್ಯಕ್ತಿಗತಗೊಳಿಸಿಕೊಂಡಿದ್ದರು, ಕ್ರಮಬದ್ಧಗೊಳಿಸಿಕೊಂಡಿದ್ದರು. ಅವರು ಒಂದು ಸ್ಥರದ ದೇಹವನ್ನು ಬಿಟ್ಟು ಮತ್ತೊಂದು ಸ್ಥರದ ಪ್ರಜ್ಞೆಗೆ ಪ್ರವೇಶಿಸುತ್ತಿದ್ದರು, ಸಂಪೂರ್ಣ ಆ ಪರಿಸರವನ್ನು ಅನುಭವಿಸಿ ವರ್ಣಿಸುತ್ತಿದ್ದರು, ಹೀಗೆ ಹನ್ನೆರಡು ಸಲ.

ಬಹಳ ಜಾಣ್ಮೆಯಿಂದ ನಾನು ಆ ರೀತಿ ಮಾಡುವುದನ್ನು ಕಲಿತೆ; ನಾನು ಯಾವ ಸ್ಥರದಲ್ಲಿ ಬೇಕಾದರು ನೆಲೆಗೊಳ್ಳುತ್ತಿದ್ದೆ, ಅಲ್ಲಿ ಏನು ಮಾಡಬೇಕೋ ಅದನ್ನು ಮಾಡುತ್ತಿದ್ದೆ, ಸ್ವತಂತ್ರವಾಗಿ ಸುತ್ತಲೂ ಚಲಿಸುತ್ತಿದ್ದೆ. ನೋಡಿ, ದೃಷ್ಟಿಸಿ, ಅಲ್ಲಿ ಏನು ನೋಡಿದೆ ಅದನ್ನು ಹೇಳಿತ್ತಿದ್ದೆ ನನ್ನ ಕೊನೆಯ ಹಂತ ಥಿಯಾನ್ ಅದನ್ನು "ಪ್ಯಾಥೆಟ್ಸಿಮ" ಎನ್ನುತ್ತಿದ್ದ. ಅದು ಅನಾಗರಿಕ ಆದರೆ ಬಹಳ ಅಭಿವ್ಯಕ್ತ ಜಗತ್ತು ನಿರಾಕಾರದ ಸರಹದ್ದಿನಲ್ಲಿತ್ತು. ಅವರು ಕೆಲವೊಂದು ಸಲ ಯಹೂದಿ ಶಬ್ದವನ್ನು ಉಪಯೋಗಿಸುತ್ತಿದ್ದರು "ನಿರಾಕಾರ" ಎಂದರೆ ಪರಮೋಚ್ಚ (ಈ

ಹಂತದಿಂದ ನಿರಾಕಾರಕ್ಕೆ ಪ್ರವೇಶಿಸುತ್ತಾರೆ. ಅಲ್ಲಿಂದ ಬಿಡಲು ಯಾವ ದೇಹಗಳಿರುವುದಿಲ್ಲಾ ಎಲ್ಲಾ ಆಕಾರಗಳನ್ನು ದಾಟಿ ಎಲ್ಲಾ ಆಲೋಚನೆಗಳ ಆಕಾರಗಳನ್ನು) ಈ ಕ್ಷೇತ್ರದಲ್ಲಿ (ನಿರಾಕಾರಕ್ಕಿಂತ ಮುಂಚಿನ ಹಂತ) ಸಂಪೂರ್ಣ ಏಕತೆಯ ಅನುಭವವಾಗುತ್ತದೆ. ಪ್ರೀತಿಯ ನಾದವನ್ನು ಹೊಂದಿದ್ದ ಏಕತೆಯು, ಪ್ರೀತಿ ಹೆಚ್ಚೆಚ್ಚು ಪ್ರಕಟನೆಗೊಂಡ ...... "ಸಾಂದ್ರ"ವಾಗಿದೆ. ಅವರು ಯಾವಾಗಲೂ ಹೇಳುತ್ತಿದ್ದ (ಬೇರೆ ಬೇರೆ ಸಾಂದ್ರ) ಮತ್ತು ಪ್ರೀತಿ, ಹೆಚ್ಚಿನ ಸಾಂದ್ರತೆಯ ಅಭಿವ್ಯಕ್ತಿ ಸಂಪೂರ್ಣ ಏಕತೆಯ ಭಾವ – ಸಂಪೂರ್ಣ ಏಕತೆಯ, ಗುರುತು – ಕೆಳ ಜಗತ್ತಿನ ಯಾವುದೇ ಆಕಾರಗಳೊಂದಿಗೆ ಗುರುತಿಸಿಕೊಳ್ಳದಿರುವಿಕೆ. ಅದೊಂದು ಪ್ರಭೆ .... ಒಂದು ಪರಿಶುದ್ಧವಾದ ಶ್ವೇತ ಪ್ರಭೆ ಬಂಗಾರದ ಗುಲಾಬಿ ಅದರೊಳಗೆ (ಶಬ್ದಗಳು ಒರಟು) ಈ ಪ್ರಭೆ ಮತ್ತು ಈ ಅನುಭವ ನಿಜವಾಗಿಯೂ ಅದ್ಭುತ ಶಬ್ದಗಳಿಂದ ಅಭಿವ್ಯಕ್ತಗೊಳಿಸಲಾಗುವದಿಲ್ಲಾ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ನವೆಂಬರ್ 7, 1961**

**ಸುಪ್ರಮಾನಸ ರೂಪದ ಮಾದರಿ**

ಸರಿ, ನಾನೊಂದು ಸಲ ಅಲ್ಲಿದ್ದೆ (ಥಿಯಾನ್‌ರವರು ನನಗೆ ಎಚ್ಚರಿಸುತ್ತಿದ್ದರು. ನೀನು ಆ ಕ್ಷೇತ್ರದ ಆ ಕಡೆ ಹೋದರೆ ವಾಪಸ್ ಬರುವುದು ಕಷ್ಟ ಎಂದು) ಆದರೆ ನಾನಲ್ಲಿದ್ದೆ, ಆ ಕಡೆ ಹೋಗಬೇಕೆಂದುಕೊಂಡಿದ್ದರಿಂದ ಆವಾಗ – ಸ್ವಲ್ಪ ಅನಿರೀಕ್ಷಿತವಾಗಿ ಮತ್ತು ಅದ್ಭುತವಾದ ರೀತಿಯಲ್ಲಿ – ನಾನು ಒಂದು "ತತ್ವ"ದ ಮುಂದೆ ಬಂದು ನಿಂತಿದ್ದೆ. ಮನುಷ್ಯ ರೂಪದ ತತ್ವದ ಮುಂದೆ ನಾವು ನೋಡುವ ಮನುಷ್ಯ ರೂಪವನ್ನು ಹೋಲುತ್ತಿರಲಿಲ್ಲಾ, ಆದರೂ ನೆಟ್ಟಗಿನ ರೂಪ, ಆಕಾರ, ನಿರಾಕಾರ ಜಗತ್ತಿನ ಸರಹದ್ದಿನಲ್ಲಿ ನಿಂತಿತ್ತು, ಒಂದು ಮಾನದಂಡದ ತರಹ, ಆ ಸಮಯದಲ್ಲಿ ಯಾರೂ ಅದರ ಬಗ್ಗೆ ನನ್ನೊಟ್ಟಿಗೆ ಮಾತಾಡಿರಲಿಲ್ಲಾ, ಶ್ರೀಮಾತೆ ಥಿಯಾನ್ ಅದನ್ನು ನೋಡಿರಲ್ಲಿಲ್ಲಾ, ಯಾರು ಎಂದು ನೋಡಿರಲ್ಲಿಲ್ಲಾ ಅಥವಾ ಏನೂ ಹೇಳಿಲ್ಲಾ. ಆದರೆ ನಾನೊಂದು ರಹಸ್ಯವನ್ನು ಕಂಡುಹಿಡಿಯುವ ಸನಿಹದಲ್ಲಿದ್ದೇನೆಂದು ಅವರಾರೂ ಹೇಳಿಲ್ಲ.

ನಂತರ, ಶ್ರೀ ಅರವಿಂದರನ್ನು ಭೇಟಿಯಾಗಿ ಮತ್ತು ಇದರ ಬಗ್ಗೆ ಮಾತಾಡಿದಾಗ ಅದು "ಸುಪ್ರಮಾನಸದ ಮಾದರಿ ರೂಪ"ವೆಂದು ಅವರು

ಹೇಳಿದರು ನಾನು ಪುನಃ ಬಹಳ ಸಲ ನೋಡಿದೆ. ಆದನಂತರ ಮತ್ತು ಇದು ನಿಜವೆಂದು ಸಿದ್ಧವಾಯಿತು.

ಒಂದು ಸಲ ಆ ಸೀಮೆಯನ್ನು ದಾಟಿದ ಮೇಲೆ, ಮೇಲೆರುವುದು, ಕೆಳಗಿಳಿಯುವುದು ಇಲ್ಲವೆಂದು ಸ್ವಾಭಾವಿಕವಾಗಿ ನಿನಗೆ ಗೊತ್ತಾಗುತ್ತದೆ; ನೀನು ಪ್ರಾಕೃತಿಕ ಪ್ರಜ್ಞೆಯನ್ನು ಬಿಟ್ಟು ಮತ್ತು ಉನ್ನತ ಮನಸ್ಸಿಗೆ ಹೋಗುವಾಗ ಪ್ರಾರಂಭದಲ್ಲಿ ಅವರೋಹಿಸಿದ ಸಂವೇದನೆ ಉಂಟಾಗುತ್ತದೆ. ಆದರೆ ಒಂದು ಸಲ ನೀವದನ್ನು ಮೀರಿ ಆಚೆ ಹೋದರೆ, ಮೇಲೇರುವ ಬಯಕೆ ಇರುವುದಿಲ್ಲಾ ಬದಲಾಗಿ, ಒಂದು ತರಹದ ಆಂತರಿಕ ಪರಿವರ್ತನೆಯ ಸಂವೇದನೆಯಾಗುತ್ತದೆ.

ಆ ಮೇಲೆ ಅಲ್ಲಿಂದ ಪುನಃ ಅವರೋಹಿಸುತ್ತೇನೆ; ಪುನಃ ನನ್ನ ದೇಹಗಳನ್ನು ಒಂದರ ನಂತರ ಒಂದು, ಹೀಗೆ ಪುನಃ ಪುನಃ ಪ್ರವೇಶಿಸುತ್ತದೆ. ಪುನಃ ಪ್ರವೇಶದ ನಿಜವಾದ ಸಂವೇದನೆ ಇರುತ್ತದೆ; ಅದು ನಿಜವಾಗಿ ಘರ್ಷಣೆಯನ್ನುಂಟು ಮಾಡುತ್ತದೆ.

ದೇಹವು ಯಾವಾಗ ಆತ್ಯಂತಿಕ ಉನ್ನತ ಸ್ಥಿತಿಯಲ್ಲಿದ್ದಾಗ ಮೂರ್ಛಾವಸ್ಥೆಯಲ್ಲಿರುತ್ತದೆ.

ನಾನು 1904ರಲ್ಲಿ ಈ ಪ್ರಯೋಗ ಮಾಡಿದೆನೆಂದು ಆಲೋಚಿಸುತ್ತೇನೆ, ನಾನಿಲ್ಲೀಗ ಬಂದಾಗ ಆ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿ ಸಾಕಷ್ಟು ತಿಳಿದುಕೊಂಡಾಗಿತ್ತು, ಮತ್ತು ಯಾವಾಗ ಸುಪ್ರಮಾನಸವನ್ನು ಕಂಡುಹಿಡಿಯುವ ಪ್ರಶ್ನೆ ಬಂದಾಗ – ನಾನು ನನ್ನ ಅನುಭವವನ್ನು ಪುನಃ ಪ್ರಾರಂಭಮಾಡಿದೆ – ನನಗೆ ಬೇಕೆಂದಾಗ ಪುನರಾವರ್ತಿಸಲು ಕಲಿತೆ, ಸತತ ಹೊಸ ರೂಪಕೊಡುವ ಮೂಲಕ ಇದು ಒಂದು ಸ್ವ–ಇಚ್ಛೆ ಪ್ರಕ್ರಿಯೆಯಾಗ ತೊಡಗಿತು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ನವೆಂಬರ್ 7, 1961**

### ಅಚೇತನದೊಳಗೆ ಅವರೋಹಣ ಮತ್ತು ಅಪ್ರತಿಮ ದೇವರು

ಇದು ಮೊದಲನೇ ಸಲ ಏನು ಅಲ್ಲಾ, ನಾನು ಟ್ಲೆಮ್ಸನ್‌ನಲ್ಲಿ ಥಿಯಾನ್ರೊಂದಿಗೆ ಕೆಲಸ ಮಾಡುವಾಗ (ಎರಡನೇ ಸಲ ಅಲ್ಲಿದ್ದಾಗ), ನಾನು ವೈಯಕ್ತಿಕವಲ್ಲದ ಪೂರ್ಣ ಅಂದರೆ, ಸಾಮಾನ್ಯವಾದ ಅಜೇತನದೊಳಗೆ ಇಳಿದೆ (ಜೀವನದ ಮಂತ್ರವನ್ನು ನನ್ನಿಂದ ಹುಡುಕಿಸಲು ಅವರು ಬಯಸಿದ್ದರು) ಮತ್ತು

ಅಚಾನಕ್ಕಾಗಿ, ನಾನೊಂದು ಸಮಾಧಿ ಅಥವಾ ಸುಂದರ ಗುಹೆಯ ಮುಂದೆ ನಿಂತಿದ್ದೆ (ಖಂಡಿತವಾಗಿ ಏನೋ ಒಂದು ಅದೇ ತರಹ). ಯಾವಾಗ ಅದು ತೆಗೆಯಿತೋ, ಆಗ ನಾನು ಒಬ್ಬ ವರ್ಣ ವೈವಿಧ್ಯದ ವ್ಯಕ್ತಿ ತನ್ನ ತಲೆಯನ್ನು ಬಾಗಿಸಿ ಕೈಗಳ ಮೇಲಿಟ್ಟು ದೀರ್ಘ ನಿದ್ದೆಯಲ್ಲಿದ್ದುದನ್ನು ನೋಡಿದೆ, ಅವನ ಸುತ್ತಲೂ ಇರುವ ಬೆಳಕು ವರ್ಣ ವೈವಿದ್ಯದ್ದು ನಾನು ಏನು ಕಾಣುತ್ತಿದ್ದೇನೆಂದು ಥಿಯಾನ್‌ರವರಿಗೆ ಹೇಳಿದಾಗ ಅವರು ಹೇಳಿದರು ಅದು "ಅದು ಅಚೇತನದ ಆಳದಲ್ಲಿರುವ ಅಪ್ರತಿಮ ದೇವರು" ತನ್ನ ಕಿರಣಗಳ ಮೂಲಕ ನಿಧಾನವಾಗಿ, ಅಚೇತನವನ್ನು ಚೇತನವನ್ನಾಗಿ ಎಚ್ಚರಿಸುತ್ತಿದ್ದಾನೆ. ತದನಂತರ ಒಂದು ಗಮನಾರ್ಹ ವಿದ್ಯಮಾನ ಘಟಿಸಿತು. ಯಾವಾಗ ನಾನು ಅವನತ್ತ ನೋಡಿದಾಗ, ಅವನು ಎಚ್ಚೆತ್ತುಕೊಂಡ ಮತ್ತು ತನ್ನ ಕಣ್ಣು ತೆರೆದ, ಪ್ರಜ್ಞೆಯ ಪ್ರಾರಂಭವನ್ನು ಅಭಿವ್ಯಕ್ತಗೊಳಿಸಿದ, ಎಚ್ಚೆತ್ತುಕೊಂಡು ಕಾರ್ಯನಿರ್ವಹಣೆಯಾಗಿತ್ತು ಕೂಡ.

ನಾನು ಅಚೇತನದೊಳಗೆ ಇಳಿದ ಅನುಭವವನ್ನು ಸಾಕಷ್ಟು ಸಲ ಅನುಭವಿಸಿದ್ದೇನೆ (ನಿನಗೆ ನೆನಪಿದೆ ಆ ದಿನ ಅದು ಆದಾಗ ನೀನಿದ್ದೆ – ಅದನ್ನು ದೈವೀ ಪ್ರೇಮದಿಂದ ಮಾಡಬೇಕು). ಅಚೇತನದ ಪೂರಾ ತಳಕ್ಕೆ ಇಳಿಯುವ ಅನುಭವ ಮತ್ತು ಅಲ್ಲಿ ದೈವೀ ಪ್ರಜ್ಞೆಯನ್ನು ಕಾಣುವುದು, ದೈವೀ ಸಾನ್ನಿಧ್ಯ, ಒಂದು ರೂಪದಲ್ಲಿ ಅಥವಾ ಮತ್ತೊಂದು ರೂಪದಲ್ಲಿ ಇದು ಸಾಕಷ್ಟು ಸಲ ಪುನರಾವರ್ತಿತಗೊಂಡಿದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ನವೆಂಬರ್ 7, 1961**

## ಪ್ರಾಣದ ಮೂಲಕ ಹಾದಿಯನ್ನು ನಿರ್ಮಿಸುವದು

ಕೆಲವು ವಿಷಯಗಳು ಬಹಳ ಕುತೂಹಲಕಾರಿ. ನಾನು ಭೂಮಿಗೆ ಬಂದ ಉದ್ದೇಶಿತ ಕೆಲಸದ ಭಾಗಗಳಾಗಬೇಕು. ಥಿಯಾನ್‌ರೊಂದಿಗೆ ಮುಖಾಮುಖಿ–ಯಾಗುವ ಮುಂಚೆ ಏನು ತಿಳಿದುಕೊಳುವದಕ್ಕಿಂತ ಮುಂಚೆ, ನನಗೆ ರಾತ್ರಿ ಅನುಭವವಾಗುತ್ತಿದ್ದವು, ಜನರು ತಮ್ಮ ದೇಹವನ್ನು ಬಿಡುವ ಕೆಲವು ಕ್ರಿಯೆಗಳನ್ನು ನೋಡುತ್ತಿದ್ದೆ ಮತ್ತು ಕ್ರಿಯೆಯ ಜ್ಞಾನವನ್ನು ನಾನು ಏನು ಮಾಡುತ್ತಿದ್ದೇನೆಂಬುವದು ನನಗೆ ಗೊತ್ತಿರಲಿಲ್ಲಾ. ಆದರು ಸಹ ಏನು ಮಾಡಬೇಕೆಂದು ಖಚಿತವಾಗಿ ಗೊತ್ತಿತ್ತು ಮತ್ತು ನಾ ಮಾಡಿದ್ದೆ ಆಗ ನನಗೆ ಸುಮಾರು ಇಪ್ಪತ್ತು ವಯಸ್ಸು.

ನಾನು ಥಿಯಾನರ ಬೋಧನೆಯೊಳಗೆ ಬಂದ ತಕ್ಷಣದಿಂದ (ನಾನು ಅವರನ್ನು ವೈಯಕ್ತಿಕವಾಗಿ ಭೇಟಿಯಾಗುವ ಮುಂಚೆ) ನನಗೆ ಮುಂಚಿನಿಂದ ಗೊತ್ತಿರದ ವಿಷಯಗಳು ಓದಿದ ತಕ್ಷಣ ತಿಳಿದು ಬಿಡುತ್ತಿದ್ದವು, ನಾನು ತುಂಬಾ ವ್ಯವಸ್ಥಿತವಾಗಿ ಕೆಲಸ ಮಾಡಲು ಪ್ರಾರಂಭಿಸಿದೆ. ಪ್ರತಿ ರಾತ್ರಿ ನಿರ್ದಿಷ್ಟ ಸಮಯದಲ್ಲಿ ನಾನು ಭೂಮಂಡಲದ ವಾತಾವರಣಕ್ಕೂ ಮತ್ತು ಅತೀಂದ್ರಿಯ ವಾತಾವರಣಕ್ಕೂ ಪಥವನ್ನು ನಿರ್ಮಾಣ ಮಾಡುವ ಕೆಲಸ ಮಾಡುತ್ತಿದ್ದೆ – ಪ್ರಾಣದ ಮೂಲಕ ಸುರಕ್ಷಿತ ಪಥ. ಯಾರಿಗೆ ಪ್ರಜ್ಞೆ ಇರುತ್ತದೆಯೋ ಆದರೆ ಅದರ ಜ್ಞಾನವಿರುವುದಿಲ್ಲವೊ ಅವರಿಗೆ ತುಂಬಾ ಕಷ್ಟಕರವಾದ ಹಾದಿ, ಹೀಗಾಗಿ ಅವರು ಅದರ ಮೂಲಕ ಹಾದುಹೋಗಲಾರರು – ಹೋಗಲು ಅವರಿಗೆ ತುಂಬ ಘೋರ – ನಾನು ಈ ಪಥವನ್ನು ರಚಿಸುತ್ತಿದ್ದೆ, ಈ ಕೆಲಸವನ್ನು ಮಾಡಲು (ಇದು ಸುಮಾರು 1903 ಅಥವಾ 1904ರಲ್ಲಿ ಇರಬಹುದ, ಖಚಿತವಾಗಿ ನೆನಪಿಲ್ಲಾ) ತಿಂಗಳು ಮತ್ತು ತಿಂಗಳು ಮತ್ತು ತಿಂಗಳು ಎಲ್ಲ ತರಹದ ಅಸಾಮಾನ್ಯ ಸಂಗತಿಗಳು ಈ ಸಮಯದಲ್ಲಿ ಘಟಿಸಿದವು – ಅಸಾಮಾನ್ಯ ನೀಳ್ಗತೆಗಳನ್ನು ಹೇಳಬಹುದು...

ನಂತರ ಟ್ಲೆಮ್ಸೆನ್‌ಗೆ ಹೋದಾಗ ಶ್ರೀಮತಿ ಥಿಯಾನ್ರವರಿಗೆ ಹೇಳಿದಾಗ, "ಹೌದು" ನೀನು ಭೂಮಿಗೆ ಬಂದು ಮಾಡಬೇಕಾದ ಕೆಲಸದಲ್ಲಿ, ಇದು ಕೂಡ ಅದರ ಭಾಗವೇ ಆಗಿದೆ, ಎಂದು ಅವರು ಹೇಳಿದರು "ಸ್ವಲ್ಪವೇ ಅಂತರಾತ್ಮ ಎಚ್ಚೆತ್ತುಕೊಂಡ ಪ್ರತಿ ಜೀವಿ ಸಾಯುವಾಗ ನಿನ್ನ ಪ್ರಭೆಯತ್ತ ಸಾಗುತ್ತಾರೆ ಯಾವ ಕಾರಣಕ್ಕಾಗಿ ಎಲ್ಲಿ ಸಾಯಲಿ, ನೀನು, ಅವರನ್ನು ಅದರಿಂದ ಪಾರುಮಾಡಲು ಸಹಾಯ ಮಾಡುತ್ತೆ" ಮತ್ತು ಈ ಕೆಲಸ ಅನವರತ. ಅನವರತ ಜನರು ದೇಹ ಬಿಟ್ಟಾಗ ಅವರಿಗೆ ಏನಾಗುತ್ತದೆ ಎಂಬುವದಕ್ಕೆ ಸಂಬಂಧಪಟ್ಟಂತೆ, ಗಣನೀಯ ಸಂಖ್ಯೆಯ ಅನುಭವಗಳು ನನಗಾಗಿವೆ. ನನಗೆ ಎಲ್ಲಾ ರೀತಿಯ ಅನುಭವಗಳಾಗಿವೆ, ಎಲ್ಲಾ ರೀತಿಯ ಉದಾಹರಣೆಗಳು – ಇದು ನಿಜವಾಗಿ ಆಸಕ್ತಿದಾಯಕ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಮೇ 17, 1969**

## ಪ್ರಜ್ಞಾಯುಕ್ತ ಸಮಾದಿ

ಆದರೆ ನನಗೆ ಎಂದು ಕೂಡಾ ಸಮಾಧಿ ಸ್ಥಿತಿ ಆಗಿಲ್ಲಾ, ಮತ್ತು ಶ್ರೀ ಅರವಿಂದರಿಗೆ ಕೂಡ – ನಮಗಿಬ್ಬರಿಗೂ ಕೂಡ ಸಮಾಧಿ ಸ್ಥಿತಿ ಆಗಿಲ್ಲಾ! ನನ್ನ

ಅರ್ಥದ ಪ್ರಕಾರ ಒಂದು ರೀತಿಯ ಸಮಾಧಿ ಸ್ಥಿತಿ ಯಾವಾಗ ದೇಹದ ಜೊತೆಗಿನ ಸಂಬಂಧ ಕಡಿಯುತ್ತದೆ ಅವರು ಯಾವಾಗಲು ಅದನ್ನೇ ಹೇಳುತ್ತಿದ್ದರು ಮತ್ತು ಮೊದಲನೇ ಸಲ ನಾವು ಭೇಟ್ಟಿಯಾದಾಗ ಅವರಿಗೆ ಹೇಳಿದ್ದೇನೆಂದರೆ "ಸರಿ, ಎಲ್ಲರೂ ಸಮಾಧಿ ಬಗ್ಗೆ ಮಾತನಾಡುತ್ತಾರೆ, ಆದರೆ ನನಗೆ ಆ ರೀತಿ ಆಗಿಲ್ಲಾ! ನಾನು ಪ್ರಜ್ಞೆ ಕಳೆದುಕೊಂಡಿಲ್ಲಾ. ಆಹ್ ನನಗೆ ಕೂಡಾ ಸರಿಯಾಗಿ ಹಾಗೆ!"

ಅದು ಬೆಳವಣಿಗೆಯ ಮೇಲೆ ನಿರ್ಭಯವಾಗುತ್ತದೆ ಥಿಯಾನ್‌ರವರು ಕೂಡ ಹಾಗೆ ಹೇಳುತ್ತಿದ್ದರು "ಸಮಾಧಿ ಸ್ಥಿತಿಗೆ ಹೋಗುವವರಿಗೆಲ್ಲಾ ಯಾವುದೋ ಒಂದು ಕೊಂಡಿ ತಪ್ಪಿಹೋಗಿರುತ್ತದೆ" ಅವರು ನೋಡಿದಂತೆ, ಜನರಲ್ಲಿ ಅಸಂಖ್ಯಾತವಾಗಿ ಸಣ್ಣ "ಸೇತುವೆ" ಎಂಬ ಮಧ್ಯವರ್ತಿ ವಲಯಗಳಿವೆ ಇಂತಹ ಮದ್ಯವರ್ತಿ ವಲಯ ಸರಿಯಗಿ ಬೆಳೆದಿಲ್ಲದ್ದಿದ್ದರೆ ಅವರು ಹೇಳುತ್ತಿದ್ದರು ಯಾವ ವಲಯದಲ್ಲಿ ನಿಮ್ಮ ಪ್ರಜ್ಞೆ ಇರುವುದಿಲ್ಲವೊ ಅದು ಸರಿಯಾಗಿ ಬೆಳೆದಿರುವುದಿಲ್ಲಾ. ಏಕೆಂದರೆ ಅದು ವೈಯಕ್ತೀಕರಣಗೊಂಡಿರುವುದಿಲ್ಲಾ. ನೀವು ಅದನ್ನು ದಾಟಿದಾಗ, ನೀವು ಸಮಾಧಿ ಸ್ಥಿತಿ, ವೈಯಕ್ತೀಕರಣಗೊಳ್ಳದಿರುವ ಸ್ಥಿತಿ – ಪ್ರಜ್ಞಾ ಸ್ಥಿತಿ ಜಾಗ್ರತ ಸ್ಥಿತಿಯಿಲ್ಲದಿರುವ ಕಾರಣ ನಿಮ್ಮ ದೇಹವು ಸಮಾಧಿ ಸ್ಥಿತಿಗೆ ಹೋಗುತ್ತದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಮೇ 7, 1969**

## ಪ್ರಜ್ಞೆಯ ರೂಪ

ಅವರು ದಹನ ಮಾಡಲು ಕೆಲವು ಸಲ ಬಹಳ ಅವಸರಿಸಿದಾಗ, ಕೆಲವು ಸಲ ಅವರನ್ನು ಜೀವಂತ ಸುಟ್ಟುಹಾಕುತ್ತಾರೆ!...... ಅವರು ಕಾಯಬೇಕು. ಆಗ ಅದು ಪ್ರಜ್ಞೆ ರೂಪ ತಾಳಿರುತ್ತದೆ, ಜೀವದ ರೂಪ, ಅಲ್ಲಿ ಪ್ರಜ್ಞೆ ಇದೆ, ಪ್ರಜ್ಞೆಯ ರೂಪ ಪ್ರತಿ ಜೀವಕೋಶದಲ್ಲಿರುತ್ತದೆ. ಅದು ಹೊರಬರಲು ಏಳು ದಿನ ತೆಗೆದುಕೊಳ್ಳುತ್ತದೆ ಕೆಲವು ಸಲ ಸುಟ್ಟಾಗ ದೇಹವು ಹಠಾತ್ ಚಲಿಸುತ್ತದೆ. ಇದಕ್ಕೆ ಜನರು ಯಾಂತ್ರಿಕ ಕ್ರಿಯೆ ಎನ್ನುತ್ತಾರೆ. ಇದು ಯಾಂತ್ರಿಕವಾಗಿಯೇ?, ನನಗೆ ಗೊತ್ತು ಅದು ಖಂಡಿತವಾಗಿಯೂ ಯಾಂತ್ರಿಕವಾಗಿ ಅಲ್ಲಾ, ನನಗೆ ಗೊತ್ತು ಅಲ್ಲಿ ಈ ಪ್ರಜ್ಞೆಯ ರೂಪ ಇರುತ್ತದೆ. ಏಕೆಂದರೆ ಅದರಿಂದ ಹೊರ ಹೋಗಿ ಬಂದಿದ್ದೇನೆ. ಒಂದು ಸಲ, ಅಂದರೆ ಬಹಳ ಹಿಂದೆ, ನಾನು ಮೂರ್ಛಾವಸ್ಥೆಯಲ್ಲಿದ್ದೆ, ಮತ್ತು ಸ್ವಲ್ಪ ಸಮಯದ ನಂತರ ಇನ್ನು ದೇಹವು ಅದೇ ಸ್ಥಿತಿಯಲ್ಲಿದ್ದಾಗ ದೇಹವು ಮತ್ತೆ

ಜೀವಿಸಲು ಪ್ರಾರಂಭಿಸಿತು; ಅದೇನೆಂದರೆ ಅದು ಮಾತನಾಡಲು ಮತ್ತು ಚಲಿಸಲು ಸಶಕ್ತವಾಗಿರುತ್ತದೆ ಮತ್ತು ಚಲಿಸಲು ಕೂಡ (ಥಿಯಾನ್ ನನಗೆ ಅಭ್ಯಾಸ ಮಾಡಿಸಿದ್ದ) ದೇಹದಿಂದ ಎಲ್ಲವೂ ಹೊರ ಹೋದ ಮೇಲೂ ಕೂಡ ಅದು ನಿಲ್ಲಲು ಮತ್ತು ಚಲಿಸಲು ನಿಭಾಯಿಸುವಷ್ಟು ಸಕ್ಷಮವಾಗಿತ್ತು.

ಒಂದು ಸಲ ಎಲ್ಲವೂ ಹೊರ ಹೋದ ಮೇಲೆ ಅದು ಸ್ವಾಭಾವಿಕವಾಗಿ ತಣ್ಣಗಾಗುತ್ತದೆ. ಆದರೆ ದೇಹ ಪ್ರಜ್ಞೆ ಸ್ವಲ್ಪ ಶಕ್ತಿಯನ್ನು ಗಾಳಿಯಿಂದ ತೆಗೆದುಕೊಳ್ಳುತ್ತದೆ, ಇಲ್ಲಿಂದ ಅಥವಾ ಅಲ್ಲಿಂದ...... ಮತ್ತು ಆ ಸ್ಥಿತಿಯಲ್ಲಿ ಮಾತನಾಡುತ್ತಿದ್ದೆ ನಾನು ಮಾತಾಡುತ್ತಿದ್ದೆ, ನಾನು ಚನ್ನಾಗಿ ಮಾತನಾಡುತ್ತಿದ್ದೆ ಮತ್ತು ಅದರೊಟ್ಟಿಗೆ, ಬೇರೆ ಎಲ್ಲವನ್ನೂ ನೋಡಿದ್ದನ್ನು ಮೆಲುಕು ಹಾಕುತ್ತಿದ್ದೆ.

ಅದಕ್ಕಾಗಿ ಜನರ ದೇಹಗಳನ್ನು ದಹನ ಮಾಡುವದನ್ನು ಅಷ್ಟಾಗಿ ನಾನು ಇಷ್ಟಪಡುವದಿಲ್ಲಾ.

ನಾನು ಆಲೋಚಿಸಿದ ಹಾಗೆ ಇಲ್ಲಿ ದಹನ ಮಾಡುತ್ತಾರೆ (ಗಂಭೀರ ಕಾಯಿಲೆಗಳಿಂದ ಬಳಲಿ ಸತ್ತವರ ದೇಹಗಳನ್ನು ನೈರ್ಮಲ್ಯದ ದೃಷ್ಟಿಯಿಂದ ಸುಡುತ್ತಾರೆ) ಭಾರತದಲ್ಲಿ, ಮುಖವಾಗಿ ಸತ್ತನಂತರ ಸತ್ತವರ ಆಸೆ, ತುಡಿತ ಸಣ್ಣ ಪ್ರಮಾಣದ ರೂಪತಾಳಿ ಗಾಳಿಯಲ್ಲಿ ಹರಡಿ "ದೆವ್ವ"ಗಳ ರೂಪ ತಾಳಬಹುದೆಂಬ ಅಂಜಿಕೆಯಿಂದ ಎಲ್ಲಾ ಆಸೆಗಳು, ಎಲ್ಲಾ ಬಂಧನಗಳು, ಎಲ್ಲಾ ಸಂಗತಿಗಳು ತುಣುಕುಗಳಾಗಿ ಬೇರ್ಪಟ್ಟು (ಪ್ರತಿಯೊಂದು ತನ್ನದೇ ದಾರಿಯಲ್ಲಿ ಸಾಗಿ) ತದನಂತರ ಈ ತುಣುಕುಗಳು ಸುತ್ತಲಿನ ವಾತಾವರಣದಲ್ಲಿ ಬಲವನ್ನು ಪಡೆದು ಮತ್ತು ಯಾವಾಗ ಅವು ಯಾರಲ್ಲಾಗಲಿ ಸಂಪರ್ಕ ಏರ್ಪಡಿಸಿಕೊಳ್ಳುತ್ತವೆ ಅವು ಅವನನ್ನು ರಕ್ತಪಿಶಾಚಿಯನ್ನಾಗಿಸುತ್ತವೆ. ಆ ಮೇಲೆ ಅವು ತಮ್ಮ ಆಸೆಗಳನ್ನು ಈಡೇರಿಸಿಕೊಂಡು ಸಂತೃಪ್ತರಾಗಲು ಪ್ರಯತ್ನಪಡುತ್ತವೆ.

ಜಗತ್ತು, ಭೂಮಿಯ ವಾತಾವರಣ, ಸಂಪೂರ್ಣ ಕೊಳಕು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಮೇ 28, 1960**

**ಜೀವದ ತಂತು ಕಡಿದು ಹೋದ ಮೇಲೆ ಬದುಕಿರುವದು**

ಒಂದು ಸಲ ಥಿಯಾನ್‌ರೊಂದಿಗೆ ಟ್ಲೆಮ್ಸನ್‌ನಲ್ಲಿ ಇದ್ದಾಗ (ಇದು ಎರಡು ಸಲ ಆಗಿದೆ, ಎರಡನೇ ಸಲ ಒಬ್ಬಳೆ ಇದ್ದಾಗ ಆಗಿದ್ದುದರಿಂದ ನನಗೆ

ಖಚಿತವಾಗಿಲ್ಲಾ), ನಾನು ಪ್ರಜ್ಞಾಯುಕ್ತ ಸಮಾಧಿ ಸ್ಥಿತಿಯಲ್ಲಿದ್ದಾಗ, ಒಂದು ತರಹ ಮೂರ್ಛಾವಸ್ಥೆ, ಏಕೆಂದರೆ ನನ್ನ ದೇಹ ನಿಧಾನವಾಗಿ ಮಾತನಾಡಬಹುದಾಗಿತ್ತು, ಥಿಯಾನ್‌ರವರು ಹೇಗೆ ಮಾಡಬೇಕೆಂದು ನನಗೆ ಕಲಿಸಿದ್ದರು. ಇದು ಏಕೆಂದರೆ "ಜೀವದ ರೂಪ" ಯಾವಾಗಲೂ ಇರುತ್ತೆ (ಏಕೆಂದರೆ ಅದು ಬಿಡಲು ಏಳು ದಿನ ತೆಗೆದುಕೊಳ್ಳುತ್ತದೆ ಇನ್ನು ದೇಹವನ್ನು ಚಲಿಸಲು ಕಲಿಸಬಹುದು – ಒಳಗಡೆ ಸತ್ತೆ ಇಲ್ಲದಿದ್ದರು "ಜೀವದ ರೂಪ ದೇಹವನ್ನು ಚಲಿಸಲು ಸಹಾಯ ಮಾಡುತ್ತದೆ (ಹೇಗಾದರೂ, ತೀರ ಶಬ್ದಗಳು), ಆದಾಗ್ಯೂ ಸಹಿತ, ಈ ಸ್ಥಿತಿ ಅಪಾಯಕಾರಿ–ಯಲ್ಲದ್ದು ಏನೆಲ್ಲಾ, ಇದರ ಸಾಕ್ಷಿ ಏನೆಂದರೆ ನಾನೊಂದು ಸಲ ಸಮಾದಿ ಸ್ಥಿತಿಯಲ್ಲಿ ಕೆಲಸ ಮಾಡುತ್ತಿದ್ದಾಗ, ಯಾವುದೋ ಕಾರಣಕ್ಕಾಗಿ (ಈ ನನಗೆ ನೆನಪಿಲ್ಲಾ, ಆದರೆ ಥಿಯಾನ್‌ರವರು ನನ್ನ ಮೇಲ್ವಿಚಾರಣೆ ಮಾಡುವಾಗ ಆದ ಅಚಾತುರತೆಯಿಂದ), ಅಂತೂ ಅದನ್ನು ಏನೆಂದು ಕರೆಯಬೇಕೆಂದು ನನಗೆ ಗೊತ್ತಿಲ್ಲಾ – ಛಟ್ ಅಂತ ಹಂತ! ಕೊಂಡಿ ಕಳಚಿತು, ಯಾವಾಗ ನಾನು ವಾಪಾಸ್ ಬರಲು ಬಯಸಿದ್ದೇನೋ ನನಗೆ ನನ್ನ ದೇಹವನ್ನು ಪುನಃ ಪ್ರವೇಶಿಸಲಾಗಲಿಲ್ಲಾ ಆದರೆ ಅವರಿಗೆ ಎಚ್ಚರ ಕೊಡುವಷ್ಟು ಸಮರ್ಥಳಾಗಿದ್ದೆ: ತಂತು ಹರಿದಿದೆ ನಂತರ ತನ್ನ ಶಕ್ತಿ ಮತ್ತು ಜ್ಞಾನವನ್ನು ಬಳಸಿ ನಾನು ವಾಪಸ್ ಬರಲು ಸಹಾಯ ಮಾಡಿದ. ಆದರೆ ಅದು ತಮಾಷೆಯಾಗಿರಲಿಲ್ಲಾ! ಅದು ಬಹಳ ಕಷ್ಟಕರವಾಗಿತ್ತು ಮತ್ತು ಇದು ನಾನು ಎರಡು ಸ್ಥಿತಿಯಲ್ಲಿ ಇದ್ದಾಗ ಆಗಿದ್ದ ಅನುಭವ, ಏಕೆಂದರೆ, ಯಾವುದು ಹೊರಗೆ ಹೋಗಿತ್ತೊ, ಅದಕ್ಕೆ ದೇಹದ ಆಸರೆ ಇರಲಿಲ್ಲಾ – ತಂತು ಹರಿದಿತ್ತು ಎಂದು ಆಗ ನನಗೆ ತಿಳಿದಿತ್ತು. ಸಹಜವಾಗಿ, ನಾನು ವಿಶೇಷ ಸ್ಥಿತಿಯಲ್ಲಿದ್ದೆ; ಜೀವದ ಶಕ್ತಿಯಿಂದ ಸಂಪೂರ್ಣ ಪ್ರಜ್ಞೆಯಲ್ಲಿ ಕೆಲಸ ಮಾಡುತ್ತಿದ್ದೆ, ಮತ್ತು ನಾನು ನನ್ನ ಸುತ್ತಲನ್ನು ನಿಯಂತ್ರಣ ಮಾಡುವದರಲ್ಲಿದ್ದೆ.... ನೀನು ನೋಡುವಂತೆ, ಪ್ರಜ್ಞೆಯ ಸಂಚಲನೆ ಈ ತರಹ ಆರಂಭವಾಗುತ್ತೆ: ನೀವು ಇನ್ನೊಂದು ಜಗತ್ತಿಗೆ ಸಂಬಂದಿಸಿದ ಹಾಗೆ; ನೀವು ಸ್ವಲ್ಪ ಸ್ಪಷ್ಟವಾಗಿ ಸಂವೇದಿಸುವಿರಿ. ಥಿಯಾನೂ ಕೂಡಲೇ (ನನಗೆ ಕೇಂದ್ರಿಕರಿಸೆಂದು ಹೇಳಿದರೆ ಬಂತು) – ಶ್ರೀಮಾತೆ ನಗುತ್ತಾರೆ – ನಾನು ಪ್ರಯೋಗ ಮಾಡುತ್ತಿದ್ದೆ ಮತ್ತು ದೂರ ಅಲೆದಾಡಲು ತಯಾರಾಗಿದ್ದೆ ಆದರೆ ಅವರು ನನ್ನ ಮೇಲೆ ಸಾಯುತ್ತಾಳೆಂದು ಭಯಂಕರವಾಗಿ ಹೆದರಿದ್ದ) ಅವನು ನನಗೆ ಏಕಾಗ್ರತೆಗೊಳ್ಳು ಎಂದು ಬೇಡಿಕೊಂಡ, ಆದ್ದರಿಂದ ನಾನು ನನ್ನ ದೇಹದ ಮೇಲೆ ಏಕಾಗ್ರತೆಗೊಳಿಸಿದೆ.

ಯಾವಾಗ ನಾನು ಪುನಃ ಪ್ರವೇಶಿಸಿದೆನೋ ಅದು ಭಯಂಕರವಾಗಿ ನೋವು ಮಾಡುತ್ತೆ, ಭಯಂಕರವಾಗಿ – ತಳಮಳಗೊಳಿಸುವ ನೋವು, ನರಕದಲ್ಲಿ ಮುಳುಗುವಾಗಿನ ತರಹದ ನೋವು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಆಗಸ್ಟ್ 5, 1961**

## ನಾಲ್ಕು ಅಸುರರನ್ನು ಮತ್ತು ಜೀವದ ಮಂತ್ರವನ್ನು ಭೇಟಿ ಮಾಡಿದ್ದು

ನಾನು ಆಯ್ಕೆ ಮಾಡಿಕೊಂಡು ನಾಲ್ಕು ಅಸುರರನ್ನು ಭೇಟಿ ಮಾಡಲಿಲ್ಲಾ – ಅದು ಪರಮಾತ್ಮನ ನಿರ್ಧಾರವಾಗಿತ್ತು. ಮೊದಲನೇಯವ, ಧಾರ್ಮಿಕರು ಕರೆವಂತೆ ಸೈತಾನ "ಪ್ರಜ್ಞೆಯ ಅಸುರ ಆತನನ್ನು ಬದಲಾಯಿಸಲಾಗಿದೆ ಮತ್ತು ಇನ್ನು ಕೆಲಸ ಮಾಡುತ್ತಿದ್ದಾನೆ. ಎರಡನೇಯವ (ದುಖಃದ ಪ್ರಜ್ಞೆಯವನು) ತನ್ನನ್ನು ತಾನೆ ಪರಮಾತ್ಮನಲ್ಲಿ ಲೀನವಾಗಿದ್ದಾನೆ. ಮೂರನೇಯವ ಮೃತ್ಯು ದೇವತೆ (ಅದು ಥಿಯಾನ್). ನಾಲ್ಕನೇಯವ ಜಗತ್ತಿನ ಒಡೆಯ ಮಿಥ್ಯೆಯ ದೇವರು ಆರ್. ಅವರು ಈ ಅಸುರ ಭಾರತದಲ್ಲಿ ಹೇಳುವ ಹಾಗೆ ವಿಭೂತಿಯಾಗಿ ಹೊರಹೊಮ್ಮಿದ್ದಾರೆ ಥಿಯಾನ್‌ರವರು ಮೃತ್ಯು ದೇವತೆಯ ವಿಭೂತಿ.

ಇದೊಂದು ಅದ್ಭುತ ಕಥೆ ನಿಜವಾದ ಕಾದಂಬರಿ, ಒಂದು ದಿನ ಅಸುರರೆಲ್ಲಾ ಇಲ್ಲಿಂದ ಹೋದ ಮೇಲೆ, ಆವಾಗ ಇದನ್ನು ಹೇಳಬೇಕು.

ಏನಾದರಾಗಲಿ, ಥಿಯಾನ್‌ರವರಿಂದ ನಾನು ಮೊದಲನೇ ಸಲ "ಜೀವದ ಮಂತ್ರ"ವನ್ನು ನೋಡುತ್ತೇನೆ ಮತ್ತು ಅವನು ತನಗೆ ನಾನು ಕೊಡಬೇಕೆಂದು ಬಯಸಿದ್ದ ಅವನು ಅದನ್ನು ಹೊಂದಲು ಬಯಸಿದ್ದ – ಅದು ಒಂದು ತರಹ ಅಸಾಧಾರಣವಾದದ್ದು! "ಆ ಮಂತ್ರ" ಜೀವವನ್ನು ಕೊಡುತ್ತೆ (ಯಾರೇ ಆಗಲಿ ವಾಪಸ್ ಜೀವನವನ್ನು ಪಡೆಯಬಹುದು, ಆದರೆ ಅದು ಸಣ್ಣ ಪ್ರಮಾಣದ ಶಕ್ತಿ. ಒಂದು ಕ್ಷೇತ್ರದಲ್ಲಿ ಅದರ ಮೇಲೆ ನನ್ನ ಹೆಸರು ಸಂಸ್ಕೃತದಲ್ಲಿ! ನನಗೆ ಸಂಸ್ಕೃತ ಗೊತ್ತಿರಲಿಲ್ಲಾ, ಆದರೆ ಥಿಯಾನ್‌ಗೆ ಗೊತ್ತಿತ್ತು. ಮತ್ತು ನನ್ನನ್ನು ಆ ಜಾಗಕ್ಕೆ ಕರೆದೊಯ್ದು ತೋರಿಸಿದ್ದರು, ಅದನ್ನು ನೋಡಿದಾಗ, ನಾನು ಇದೂ ಒಂದು ತರಹದ ವಿನ್ಯಾಸದ ಸಂಸ್ಕೃತವೇ ಇರಬೇಕು (ಲಿಪಿ ಸಂಸ್ಕೃತ ಎಂದು ಗುರುತಿಸಿದೆ) ನೀನು ಏನು ನೋಡುತ್ತಿರುವದನ್ನು ಮರು ಹೇಳು ಎಂದು ನನಗೆ ಹೇಳಿದರು, ನಾನು ಹಾಗೇ ಮಾಡಿದೆ ಅದು ನನ್ನ ಹೆಸರು ಮೀರಾ ಸಂಸ್ಕೃತದಲ್ಲಿ ಬರೆದಿದೆ

– ಮಂತ್ರವು ನನಗಾಗಿ ಮತ್ತು ನಾನು ಮಾತ್ರ ಅದನ್ನು ತೆರೆಯಬಹುದಾಗಿತ್ತು "ಅದನ್ನು ತೆರೆದು ಏನು ಕಾಣುತ್ತಿರುವೆ ನನಗೆ ಹೇಳು" ಎಂದು ಹೇಳಿದೆ.

(ಇದೆಲ್ಲಾ ಆಗುವಾಗ ನಾನು ಮೂರ್ಛಾವಸ್ಥೆಯ ಸಮಾಧಿ ಸ್ಥಿತಿಯಲ್ಲಿದ್ದೆ) ನನಲ್ಲಿ ತಕ್ಷಣ ನನಲ್ಲಿ ಏನೋ ಒಂದು ಅರಿವಾಯಿತು. ಹೀಗಾಗಿ ನಾನು ಅದನ್ನು ಓದಲಿಲ್ಲಾ. "ಇಲ್ಲಾ".

ನಾನು ಮತ್ತೆ ಅದನ್ನು ಶ್ರೀ ಅರವಿಂದರ ಜೊತೆಯಲ್ಲಿದ್ದಾಗ ಅದನ್ನು ಕಂಡುಕೊಂಡೆ ಮತ್ತು ನಾನದನ್ನು ಶ್ರೀ ಅರವಿಂದರಿಗೆ ಕೊಟ್ಟೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ನವೆಂಬರ್ 5 1961**

## ಜಪಾನ್

– ಅನುವಾದ: ಡಾ॥ ಬಲಭೀಮ ಭೀಡ, ರಾಯಚೂರು

### ಹೂಗಳು ಮತ್ತು ತರಕಾರಿಗಳು

ಪ್ರತಿದಿನ ಮುಂಜಾನೆ ನಾನು ಯಾವಾಗಲೂ ಅವುಗಳನ್ನು ಹೊಂದಿಸುತ್ತೇನೆ. (ಸುಮಾರು ಮುಕ್ಕಾಲು ಗಂಟೆ ನನಗೆ ಅದಕ್ಕಾಗಿ ಸಮಯ ಬೇಕಾಗುತ್ತದೆ. ಸುಮಾರು ನೂರಕ್ಕಿಂತ ಹೆಚ್ಚು ಹೂಗಳನ್ನು ಬೇರೆ ಬೇರೆ ಹೂದಾನಿಗಳಲ್ಲಿ ಜೋಡಿಸಬೇಕು, ಮತ್ತು ಪ್ರತಿ ವ್ಯಕ್ತಿಗೂ ನಾನು ವಿಶೇಷ ಪ್ರಕಾರದ ಹೂವನ್ನೇ ನೀಡುತ್ತೇನೆ – ನಾನು ಅವೆಲ್ಲವನ್ನು ವ್ಯವಸ್ಥಿತಗೊಳಿಸುತ್ತೇನೆ). "ನನ್ನನ್ನು, ನನ್ನನ್ನು ತೆಗೆದುಕೊಳ್ಳಿ".. ಎನ್ನುತ್ತಾ ಅವು ನಿಜವಾಗಿಯೂ ನನಗೆ ಬೇಕಾದವುಗಳೇ ಆಗಿರುತ್ತವೆ. ಅವು "ನನ್ನನ್ನು" ಎಂದು ಹೇಳುತ್ತಾ ಕೂಗಿ ಕರೆಯುತ್ತವೆ.., ಇದೇನೂ ಹೊಸದಲ್ಲ, ಏಕೆಂದರೆ ನಾನು ಜಪಾನಿನಲ್ಲಿದ್ದಾಗ ನನ್ನದೊಂದು ದೊಡ್ಡ ತೋಟವಿತ್ತು, ಅದರಲ್ಲಿ ಕೆಲ ಭಾಗ ನಾನು ತರಕಾರಿ ಬೆಳೆಸುತ್ತಿದ್ದೆ. ನಮಗೆ ಆ ದಿನ ಬೇಕಾದ ತರಕಾರಿಗಳನ್ನು ತರಲೆಂದು ತೋಟಕ್ಕೆ ಹೋದಾಗ, ಅವುಗಳಲ್ಲಿ ಕೆಲವು ಅಲ್ಲಿ.. ಇಲ್ಲಿ.. ಅಲ್ಲಿ (ಬೇರೆ ಬೇರೆಡೆಗೆ ಹಬ್ಬಿರುವುದನ್ನು ನೋಡುತ್ತಿರುವ ಭಂಗಿಯಲ್ಲಿ) ನನ್ನನ್ನುದ್ದೇಶಿಸಿ ಹೇಳುತ್ತಿದ್ದವು. "ನನ್ನನ್ನು! ನನ್ನನ್ನು! ನನ್ನನ್ನು!.., ಹೀಗೆ. ನಾನು ಹೋಗುವುದು ಅವುಗಳನ್ನು ಕಿತ್ತುಕೊಳ್ಳುವುದು ನಡೆಯುತ್ತಿತ್ತು. ಅವು ಅಕ್ಷರಶಃ ನನ್ನನ್ನು ಕರೆಯುತ್ತಿದ್ದವು, ಕೂಗಿ ಕರೆಯುತ್ತಿದ್ದವು.

ಇದು ಬಹಳ ಹಿಂದಿನ ದಿನದ ಮಾತು, ಹತ್ತೊಂಬತ್ತು ನೂರ ಯಾವಾಗ? ಬಹುಶಃ 1916–17 ರಲ್ಲಿ – ಸುಮಾರು ನಲ್ವತ್ತು ವರ್ಷಗಳ ಹಿಂದೆ.

ಐವತ್ತು..

(ಶ್ರೀಮಾತೆ ನಗುತ್ತ) ಐವತ್ತು ವರ್ಷಗಳ ಹಿಂದೆ –

ಆದರೆ ಈಗ, ಮುಂಜಾನೆ ನಾನು ವಿಚಾರ ಮಾಡಬೇಕಾಗಿಲ್ಲ, ಶಾಂತವಾಗಿ ಇದ್ದುಬಿಟ್ಟರೆ ಆಯಿತು. ನಾನು ನೇರವಾಗಿ ಹೂಗಳ ಬಳಿ ಹೋಗುತ್ತೇನೆ, ಅವು ಹೇಳತೊಡಗುತ್ತವೆ "ನನ್ನನ್ನು, ನನ್ನನ್ನು" ಎಂದು! ನನ್ನಷ್ಟಕ್ಕೆ ನನಗೇ ಆಶ್ಚರ್ಯವಾಗುತ್ತದೆ ನಾನು ಹೇಳಿಕೊಳ್ಳುತ್ತೇನೆ. "ಅದ್ಭುತ, ನನಗೆ ಬೇಕಾಗಿದ್ದುದೂ ಕೂಡ ಇದೇ!"

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಫೆಬ್ರವರಿ 7, 1968**

**ರವೀಂದ್ರನಾಥ ಠಾಕೂರ ಮತ್ತು ನಿರ್ವಾಣ**

ಇದೆಲ್ಲವೂ ಆಯಾ ವ್ಯಕ್ತಿಯ ಅಭೀಪ್ಸೆ ಅಥವಾ ಬಲವತ್ತರವಾದ ಪೂರ್ವಾಭಿಲಾಷೆಯ ಮೇಲೆ ಅವಲಂಬಿಸಿರುತ್ತದೆ. ಅಥವಾ ತನ್ನ ಕೆಲಸಕ್ಕಾಗಿ ಏನು ಬೇಕಾಗಿರುವುದೋ ಅದರ ಮೇಲೆ ಅವಲಂಬಿತವಾಗಿರುತ್ತದೆ. ಇದು ಹೇಗೆಂದರೆ, ವ್ಯಕ್ತಿಯು ತನಗೆಲ್ಲಿ ಹೋಗಬೇಕಾಗಿದೆಯೋ ಅಲ್ಲಿಗೆ ನೇರವಾಗಿ ನಡೆದು ಹೋಗಿಬಿಡುತ್ತಾನೆ, ಉಳಿದುದೆಲ್ಲವನ್ನೂ ನಿರ್ಲಕ್ಷಿಸಿ ಬಿಡುತ್ತಾನೆ, ಅವುಗಳ ಬಗ್ಗೆ ಗಮನ ಹರಿಸುವುದಿಲ್ಲ – ಅವುಗಳನ್ನು ದಾಟಿ ಮುಂದೆ ಹೋಗಿಬಿಡುತ್ತಾನೆ. ಉಳಿದ ಯಾವ ಅಂಶಗಳ ಬಗ್ಗೆಯೂ ಲಕ್ಷ್ಯಕೊಡುವುದಿಲ್ಲ. ಮತ್ತು, ಈಗ ವರ್ಗೀಕರಣ ಮಾಡಬೇಕಾಗಿರುವುದರ ಅವಶ್ಯಕತೆ, ಸರಿ, ಅದು ಆನಂತರದ್ದು, ಸಂಗತಿಗಳನ್ನು ವರ್ಣಿಸಬೇಕು, ವಿವರಿಸಬೇಕೆಂದು ಅನಿಸಿದರೆ ಹಾಗೆ ಮಾಡಬಹುದು, ಆದರೆ ಅದೇನೂ ಅಗತ್ಯವಾಗಿ ಬೇಕೆ ಬೇಕು ಎಂಬುದೇನಲ್ಲ.

ಇನ್ನು ಪ್ರಸಿದ್ಧವಾದ "ನಿರ್ವಾಣ" ಇದೆಯಲ್ಲ, ಅದರಂತೆ ಇದೆಲ್ಲ – ನೀವು ಅದನ್ನು ಪ್ರತಿಯೊಂದರ ಹಿಂದೆಯೂ ಕಾಣಬಹುದು. ಅಂತರಾತ್ಮಿಕ ನಿರ್ವಾಣ, ಮಾನಸಿಕ ನಿರ್ವಾಣ, ಅಷ್ಟೇ ಏಕೆ ಪ್ರಾಣಿಕ ನಿರ್ವಾಣ ಕೂಡ ಇದೆ. ನಾನು ಜಪಾನಿನಲ್ಲಿ ಇದ್ದಾಗ ಠಾಕೂರರ ಜೊತೆಗೆ ಭೇಟಿಯಾದಾಗ ಆದ ಅನುಭವದ ಬಗ್ಗೆ ಈಗಾಗಲೇ ನಾನು ನಿಮಗೆ ಹೇಳಿದ್ದೇನೆಂದು ತೋರುತ್ತದೆ. ಠಾಕೂರರು

ಯಾವಾಗಲೂ ತಾವು ಧ್ಯಾನ ಮಾಡಲು ಆರಂಭಿಸಿದ ತಕ್ಷಣ ನಿರ್ವಾಣಕ್ಕೆ ಹೋಗಿಬಿಡುತ್ತೇವೆಂದು ಹೇಳುತ್ತಿದ್ದರು. ಹಾಗೂ ಒಂದು ಸಲ ತಮ್ಮ ಜೊತೆ ಕುಳಿತು ಧ್ಯಾನ ಮಾಡಲು ನನ್ನನ್ನು ಕೇಳಿಕೊಂಡರು. ನಾವಿಬ್ಬರೂ ಧ್ಯಾನ್ಯಕ್ಕೆ ಕುಳಿತೆವು. ನಾನಿನ್ನೂ ಒಂದು ಹೆಜ್ಜೆ ಮುಂದೆ ಇಡಬೇಕೆಂದು ಯೋಚಿಸುವಷ್ಟರಲ್ಲಿ ಅವರು ತಮ್ಮ ಮನಸ್ಸಿನೊಳಗೆ ಹೋಗಿಬಿಟ್ಟರು, ಅಲ್ಲಿ.. (ನಾನೇನು ಮಾಡುತ್ತೇನೆಂದರೆ ನಾನು ಯಾರ ಜೊತೆ ಧ್ಯಾನ ಮಾಡಲು ಕುಳಿತಿರುತ್ತೇನೋ ಅವರ ಜೊತೆ ತಾದಾತ್ಮ್ಯ ಹೊಂದುತ್ತೇನೆ, – ಅಂತೆಯೇ ಏನಾಗುತ್ತದೆ ಎಂಬುದು ನನಗೆ ಚೆನ್ನಾಗಿ ತಿಳಿಯುತ್ತದೆ.) ಸರಿ, ಅವರು ಧ್ಯಾನ ಮಾಡಲು ಆರಂಭಿಸಿದರು, ಎಲ್ಲವೂ ಬಹುಬೇಗನೇ ಒಂದು ನಿಲುಗಡೆಗೆ ಬಂದು ನಿಂತುಬಿಟ್ಟಿತು. ಎಲ್ಲವೂ ಚಲನರಹಿತ, ನಿಶ್ಚಲವೆನ್ನುವಂತಾಗಿ ಹೋಯಿತು, ಅವರು ಅಕ್ಷರಶಃ ನಿಶ್ಚಲರಾಗಿ ಬಿಟ್ಟರು. (ಬಹು ಚೆನ್ನಾಗಿ ಸಿದ್ಧಿಸಿಕೊಂಡಿದ್ದರು).., ಅಲ್ಲಿಂದ ಮುಂದೆ ಶೂನ್ಯದಲ್ಲಿ ಪತನ ಆರಂಭವಾಯಿತು, ಅದು ಶೂನ್ಯದ ಸ್ಥಿತಿ ಅಥವಾ ವ್ಯವಸ್ಥೆ. ಮತ್ತು ಅಂಥ ಸ್ಥಿತಿಯಲ್ಲಿ ಅವರು ಅನಿಶ್ಚಿತ ಸಮಯದವರೆಗೂ ಇದ್ದುಬಿಡುತ್ತಿದ್ದರೇನೋ. ಎಷ್ಟು ಸಮಯವೋ ನನಗೆ ಸರಿಯಾಗಿ ನೆನಪಿಲ್ಲ, ಬಹುಶಃ ಮುಕ್ಕಾಲು ಗಂಟೆ ಇರಬಹುದು, ಅಂತೂ ಅದು ದೀರ್ಘವಾದ ಸಮಯ ಅಂತೂ ನಿಶ್ಚಿತ. ನಾನು ಇಡೀ ಧ್ಯಾನ ಸಮಯದುದ್ದಕ್ಕೂ ಜಾಗೃತಳಾಗಿದ್ದೆ, ಅವರು ಬೇರೆ ಯಾವುದಾದರೂ ಸ್ಥಿತಿಗೆ ತಲುಪುತ್ತಾರೆನೋ ಎಂದು ನೋಡುತ್ತದೆ, ಆದರೆ ಇಲ್ಲ, ಅವರು ಅಲ್ಲಿಯೇ ನಿಂತರು, ಅಲ್ಲಿ ತುಂಬ ಚೆನ್ನಾಗಿ, ಪ್ರಶಾಂತವಾಗಿ, ನಿಶ್ಚಲವಾಗಿ ನಿಂತುಕೊಂಡಿದ್ದರು. ಅಲ್ಲಿಂದ ಪುನಃ, ಹಿಂತಿರುಗಿ ಬಂದರು ಅವರ ಮನಸ್ಸು ಮತ್ತೆ ಜಾಗೃತವಾಯಿತು.

ಅವರ ಸಮಕ್ಷಮ ನಾನು ಏನನ್ನೂ ಹೇಳಲಿಲ್ಲ.

ಆದರೆ ಅದು ನಿಜವಾದ ನಿರ್ವಾಣ ಸ್ಥಿತಿ. ಶೂನ್ಯ, ಯಾವುದೇ ರೀತಿಯ ಸೂಕ್ಷ್ಮ ಸಂವೇದನೆ, ಸಂಚಲನೆ ಒಂದೂ ಇಲ್ಲ – ಆಲೋಚನೆಗಳಿಲ್ಲ – ಏನೂ ಇಲ್ಲ, ಒಂದು ತರಂಗ ಕೂಡ ಇಲ್ಲ. ಅದು ನಿರ್ವಾಣದ ಸ್ಥಿತಿ. ನನಗೆ ಆಗ ನಿಶ್ಚಿತವಾಗಿದ್ದೇನೆಂದರೆ, ಮನಸ್ಸಿನ ಹಿಂಭಾಗದಲ್ಲಿ ನಿರ್ವಾಣ ಇದೆ, ಅವರು ನೇರವಾಗಿ ಅಲ್ಲಿಗೇ ಹೋಗಿದ್ದರು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಅಕ್ಟೋಬರ್ 30, 1962**

## ಶ್ರೀಮತಿ ಡೇವಿಡ್ ನೀಲ್ ಮತ್ತು ಬುದ್ಧ

ಶ್ರೀಮತಿ ಡೇವಿಡ್ ನೀಲ್ ಅವರ ಒಂದು ಪ್ರಸಂಗ ನನಗೆ ಚೆನ್ನಾಗಿ ನೆನಪಿದೆ. ತುಂಬ ಆಸಕ್ತಿಕರವಾಗಿದೆ. ಆಕೆ ಒಂದು ಉಪನ್ಯಾಸ ನೀಡಲು ಬಂದಿದ್ದರು. (ನನಗೂ ಆಕೆಯ ಅಂಥ ನಿಕಟ ಪರಿಚಯವೇನೂ ಇರಲಿಲ್ಲ. ನಾನು ಆಕೆಯನ್ನು ಭೇಟಿಯಾದದ್ದು ಅದೇ ಮೊದಲ ಸಲ). ಬಹುಶಃ ಅದು ಥಿಯೋಸಫಿಕಲ್ ಸೊಸೈಟಿ ಇದ್ದಿರಬಹುದು (ನನಗೆ ನೆನಪಿಲ್ಲ). ನಾನು ಉಪನ್ಯಾಸ ಕೇಳಲು ಹೋದೆ. ಆಕೆ ಮಾತನಾಡುತ್ತಿದ್ದಾಗ ನನಗೆ ಬುದ್ಧನ ದರ್ಶನವಾಯಿತು. ನಾನು ಸ್ಪಷ್ಟವಾಗಿ ಕಂಡೆ, ಆಕೆಯ ತಲೆಯ ಮೇಲೆ ಅಲ್ಲ. ತುಸು ಪಾರ್ಶ್ವ ಭಾಗದಲ್ಲಿದೆ. ಅವನು ಸ್ಪಷ್ಟವಾಗಿ ಅಲ್ಲಿ ಇದ್ದ. ಉಪನ್ಯಾಸ ಮುಗಿದ ನಂತರ ನನ್ನನ್ನು ಆಕೆಗೆ ಪರಿಚಯಿಸಲಾಯಿತು. (ಆಕೆ ಯಾವ ತರಹದ ಸ್ವಭಾವದ ಹೆಂಗಸು ಎಂಬುದು ನನಗೇನೂ ಗೊತ್ತಿರಲಿಲ್ಲ) ನಾನು ನೇರವಾಗಿ ಹೇಳಿದೆ. 'ಮೇಡಮ್, ನಿಮ್ಮ ಉಪನ್ಯಾಸದುದ್ದಕ್ಕೂ ನಾನು ಬುದ್ಧನನ್ನು ಕಂಡೆ.' ಆಕೆ (ತುಸು ಸಿಟ್ಟಿನ ಧ್ವನಿಯಲ್ಲಿ ) ಉತ್ತರಿಸಿದರು. "ಅಸಾಧ್ಯ – ಬುದ್ಧನು ನಿರ್ವಾಣದಲ್ಲಿರುತ್ತಾನೆ!" (ಶ್ರೀಮಾತೆ ನಗುತ್ತಾರೆ) ಓಹ್!.., "ಸುಮ್ಮನಿದ್ದು ಬಿಡುವುದೇ ಒಳ್ಳೆಯದು", ನನ್ನೊಳಗೆ ನಾನೇ ಹೇಳಿಕೊಂಡೆ.

ಆದರೆ ಆಕೆ ಏನೇ ಹೇಳಲಿ, ಬುದ್ಧ ಅಲ್ಲಿದ್ದುದು ಮಾತ್ರ ಸತ್ಯ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ನವೆಂಬರ್ 9, 1966**

## ಗೌತಮ ಬುದ್ಧನೊಡನೆ ಸಂವಹನ

"ನೀನು ನನ್ನನ್ನು ಕುರಿತು ಧ್ಯಾನ ಮಾಡುತ್ತಿರುವಿಯಲ್ಲ, ನಾನು ಈ ದಿನ ಸಂಜೆ ನಿನ್ನ ಜೊತೆ ಮಾತನಾಡುತ್ತೇನೆ. ನಿನ್ನ ಹೃದಯದಲ್ಲಿ ಬಂಗಾರದ ಬೆಳಕಿನಿಂದ ಸುತ್ತುವರಿದ ವಜ್ರ ಇರುವುದು ನನಗೆ ಕಾಣುತ್ತಿದೆ. ಅದು ಪರಿಶುದ್ಧವಾಗಿದೆ, ಬೆಚ್ಚಗಿದೆ, ಅದು ಒಂದು ರೀತಿಯ ನಿರಾಮಯ ನಿರಾಳ ಪ್ರೇಮವನ್ನು ಸೂಚಿಸುತ್ತದೆ, ಅಭಿವ್ಯಕ್ತಗೊಳಿಸುತ್ತದೆ. ಆದರೆ ಅದನ್ನು ನೀನೇಕೆ ಒಂದು ಗಾಢವಾದ ನೇರಳೆ ಬಣ್ಣದ ಅಂಚು ಇರುವ ಸಂಪುಟದಲ್ಲಿ ಕಾಣದಂತೆ ಅಡಗಿಸಿರುವೆ? ಹೊರಗಿನ ಕವಚ ಗಾಢವಾದ ಹೊಳಪಿಲ್ಲದ ನೀಲಬಣ್ಣದ್ದಿದೆ, ಅದು ಕತ್ತಲೆಯ ಪ್ರತೀಕ. ಅದು, ನೀನು ನಿನ್ನ ಮಹತಿಯನ್ನು ಪ್ರಕಟಪಡಿಸಲು ಹಿಂಜರಿಯುತ್ತಿರುವಿ ಎಂಬುದನ್ನು ತೋರಿಸುತ್ತದೆ. ಅದನ್ನು ಬೆಳಗಿಸಲು ಕಲಿತುಕೋ, ಯಾವುದಕ್ಕೂ ಹೆದರಬೇಕಾಗಿಲ್ಲ.

ಬಿರುಗಾಳಿ ಬಂದರೂ, ಅದು ನಮ್ಮನ್ನು ದಂಡೆಯಿಂದ ದೂರಕ್ಕೊಯ್ಯಬಹುದು, ಆದರೆ ಅದು ನಮ್ಮನ್ನು ಜಗತ್ತಿಗೇ ಪರಿಚಯಿಸಿಕೊಡುತ್ತದೆ. ನೀನೇನು? ನಿನ್ನ ಮಾರ್ದವತೆಯ ಬಗೆಗೆ ಜಿಪುಣಳಾಗಿರುವಿ ಏನು? ಆದರೆ, ಪ್ರೇಮದ ಮೂಲವು ಅನಂತವಾಗಿದೆ. ನಿನ್ನನ್ನು ಅಪಾರ್ಥಮಾಡಿಕೊಂಡಾರೆಂಬ ಭಯವಿದೆ ಏನು? ಆದರೆ ಯಾವುದೇ ಮನುಷ್ಯನಾಗಲಿ ಎಂದಾದರೂ ಪರಮಾತ್ಮನನ್ನು ನಿಜವಾಗಿ, ಸರಿಯಾಗಿ ಅರ್ಥಮಾಡಿಕೊಳ್ಳಲು ಶಕ್ತನಾಗಿರುವುದನ್ನು ನೀನು ಕಂಡಿರುವಿಯಾ? ಅಲ್ಲದೇ, ಶಾಶ್ವತವಾದ ಸತ್ಯವು ನಿನ್ನ ಮೂಲಕ ಪ್ರಕಟವಾಗಲು ಸಿದ್ಧವಾಗಿದ್ದರೆ ನೀನು ಉಳಿದವುಗಳ ಬಗ್ಗೆ ಏಕೆ ತಲೆಕೆಡಿಸಿಕೊಳ್ಳಬೇಕು? ನೀನು ಒಂದು ರೀತಿಯ ಯಾತ್ರಾರ್ಥಿ, ಪುಣ್ಯಕ್ಷೇತ್ರದಿಂದ ಹೊರಟ ಯಾತ್ರಾರ್ಥಿ ಇದ್ದಂತೆ. ನೀನು ರಹಸ್ಯತೆಯ ಹೊಸ್ತಿಲ ಬಳಿ, ಜನಜಂಗುಳಿ ಎದುರು ನಿಂತಿರುವ ವ್ಯಕ್ತಿಯು ತನ್ನ ಪವಿತ್ರವಾದ ರಹಸ್ಯವನ್ನು, ತನ್ನ ಪರಮೋಚ್ಚ ಸಂಶೋಧನೆಯನ್ನು ಹೇಳಲು ಹಿಂಜರಿಯುವಂತೆ ನೀನೂ ಹಿಂಜರಿಯುತ್ತಿರುವಿ. ಇಲ್ಲಿ ಕೇಳು. ನಾನೂ ಸಹ ಮೊದಲು ಬಹಳ ದಿನ ಹೀಗೆಯೇ ಹಿಂಜರಿಯುತ್ತಿದ್ದೆ ಏಕೆಂದರೆ ನಾನು ನನ್ನ ಭೋದನೆ ಮತ್ತು ಪರಿಣಾಮಗಳನ್ನು ಮುಂದಾಗಿಯೇ ಊಹಿಸಬಲ್ಲವಳಾಗಿದ್ದೆ – ಅಂದರೆ ಅಭಿವ್ಯಕ್ತಗೊಳಿಸುವಲ್ಲಿ ಇರುವ ಅಪರಿಪೂರ್ಣತೆ ಮತ್ತು ಅದನ್ನು ಚೆನ್ನಾಗಿ ಅರ್ಥೈಸಿಕೊಳ್ಳುವಲ್ಲಿ ಇರುವ ಹೆಚ್ಚಿನ ಅಪರಿಪೂರ್ಣತೆ. ಆದರೂ ಸಹ ಜನರತ್ತ ಮುಖಮಾಡಿದೆ. ಭೂಮಿಯತ್ತ ಮುಖಮಾಡಿದೆ, ಅವರಿಗೆ ನನ್ನ ಸಂದೇಶವನ್ನು ಬಿತ್ತರಿಸಿದೆ. ಜನರತ್ತ, ಭೂಮಿಯತ್ತ ತಿರುಗು – ಎಂಬ ಆದೇಶ ನಿನ್ನ ಹೃದಯದಲ್ಲಿ ಕೇಳಿಸುವುದಿಲ್ಲವೇ?– ನಿನ್ನ ಹೃದಯದಲ್ಲಿ... ಏಕೆಂದರೆ ಯಾರು ದಯಾರ್ದ್– ರಾಗಿದ್ದಾರೆಯೋ ಅವರ ಹೃದಯದಲ್ಲಿ ಇಂಥ ಧನ್ಯ, ಪುಣ್ಯ ಸಂದೇಶ ಸದಾ ಇದ್ದೇ ಇರುತ್ತದೆ. ಇನ್ನು ಮುಂದೆ, ಆ ವಜ್ರವನ್ನು ಯಾರು ಅಪಹರಿಸಲಾರರು. ಅದು ತನ್ನ ಜಾಗದಲ್ಲಿ ತನ್ನಷ್ಟಕ್ಕೆ ತಾನು ಪರಿಪೂರ್ಣವಾಗಿ ಸದೃಢವಾಗಿದೆ, ಅದರಿಂದ ಸೂಸಿ ಬರುವ ಕಾಂತಿಯು ಜನರ ಹೃದಯದಲ್ಲಿರುವ ಅನೇಕ ಸಂಗತಿಗಳನ್ನು ಪರಿವರ್ತಿಸಬಲ್ಲದು. ನಿನ್ನ ಶಕ್ತಿಯ ಬಗ್ಗೆ ಸಂದೇಹವಿದೆಯೇ? ನಿನ್ನಲ್ಲಿ ಅಜ್ಞಾನವಿದೆಯೆಂಬ ಭೀತಿಯೇ? ಈ ತೆರನಾದ ಭಾವನೆಯೇ ನಿನ್ನ ಶಕ್ತಿಯನ್ನು ಕತ್ತಲೆಯ ಆಳದಲ್ಲಿ ಕಾಣದಂತೆ ಅಡಗಿಸಿರುತ್ತದೆ. ಯಾವುದೋ ರಹಸ್ಯ ಹೊಸ್ತಿಲಲ್ಲಿ ನಿಂತಿರುವಂತೆ ನೀನು ಸಂದೇಹಪಡುತ್ತಿರುವಿ ಮತ್ತು ನಡುಗುತ್ತಿರುವಿ; ಸೃಷ್ಟಿಯ ರಹಸ್ಯವು ನಿನಗೀಗ ಆ ಪರಮ ಶಾಶ್ವತ ಕಾರಣಕ್ಕಿಂತ ಹೆಚ್ಚು ಅಭೇದ್ಯವಾಗಿ, ಅಪಾರವಾಗಿ ತೋರುತ್ತಲಿದೆ.

ಆದರೆ ನಿನ್ನ ಧೈರ್ಯವನ್ನು ಪುನಃ ಕ್ರೋಢೀಕರಿಸಿಕೋ, ನಿನ್ನ ಅಂತರಾಳದಿಂದ ಬರುವ ಆದೇಶವನ್ನು ಪಾಲಿಸು. ಇದನ್ನು ನಾನೇ ನಿನಗೆ ಹೇಳುತ್ತಿದ್ದೇನೆ, ಏಕೆಂದರೆ ನನಗೆ ನೀನು ಗೊತ್ತು, ನಾನು ನಿನ್ನನ್ನು ಪ್ರೀತಿಸುತ್ತೇನೆ. ನೀನು ನನ್ನನ್ನು ಮೊದಲು ಅರಿತಿದ್ದಂತೆ, ಪ್ರೀತಿಸುತ್ತಿದ್ದ ರೀತಿಯಲ್ಲಿಯೇ ನಾನು ನಿನ್ನನ್ನು ಈಗಲೂ ಪ್ರೀತಿಸುತ್ತೇನೆ. ನಾನು ನಿನ್ನೆದುರು ಇಷ್ಟು ಸ್ಪಷ್ಟವಾಗಿ ಪ್ರಕಟವಾಗಿ ಗೋಚರವಾಗಲು ಕಾರಣವೇನೆಂದರೆ ನೀನು ಯಾವುದೇ ಕಾರಣಕ್ಕೂ ನನ್ನ ಮಾತುಗಳನ್ನು ಸಂದೇಹಿಸಬಾರದೆಂಬುದೇ ಆಗಿದೆ. ಹಾಗೂ ನಾನು ನಿನ್ನ ಕಣ್ಣುಗಳೆದುರಿಗೆ ನಿನ್ನ ಹೃದಯವನ್ನೇ ಬಿಚ್ಚಿ ತೋರಿಸಿದ ಕಾರಣವೇನೆಂದರೆ, ಪರಮಾತ್ಮನ ಸಂಕಲ್ಪವೇನೆಂಬುದನ್ನು ನೀನು ಅದಿಲ್ಲದೇ ನಿಚ್ಚಳವಾಗಿ ಅರಿಯಲಾರಿ. ನಿನ್ನ ಅಸ್ತಿತತ್ವದ, ನಿನ್ನ ಸತ್ತೆಯ ಮೂಲ ನಿಯಮವನ್ನು ನೀನೀಗ ತಿಳಿದುಕೊಳ್ಳಬಲ್ಲಿ. ಈಗಲೂ ಇದೆಲ್ಲ ನಿನಗೆ ತುಂಬ ಕಠಿಣವೆಂದು ತೋರಬಹುದು, ಆದರೆ ಒಂದು ದಿನ ಅವಶ್ಯವಾಗಿ ಬಂದೇ ಬರುವುದು, ಆಗ ಇಷ್ಟು ದಿನ ಇದೆಲ್ಲ ಹೇಗಿತ್ತಲ್ಲ ಎಂದು ನಿನಗೇ ಅನಿಸುವುದು." ಶಾಕ್ಯಮುನಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/332–33**

(ಡಿಸೆಂಬರ್ 20, 1916 ರ ತಮ್ಮ ಪ್ರಾರ್ಥನೆಯ ಸಮಯದಲ್ಲಿ ಶ್ರೀಮಾತೆ ಒಂದು ದೀರ್ಘವಾದ ಸಂಭಾಷಣೆಯನ್ನು ಬರೆದರು, ತಮ್ಮ ಸಾಯಂಕಾಲದ ಧ್ಯಾನದಲ್ಲಿ ಒಂದು ದಿನ ಅದು ಶಾಕ್ಯಮುನಿ (336–67) ಯಿಂದ ಅವರಿಗೆ ಕೇಳಿಬಂದಿತ್ತು. ಓರ್ವ ಶಿಷ್ಯ ಶಾಕ್ಯಮುನಿ ಅಂದರೆ ಯಾರು ಎಂದು ಕೇಳಿದ) ಶಾಕ್ಯಮುನಿ ಎಂಬುದು ಬುದ್ಧನ ಹೆಸರು – "ಶಾಕ್ಯರಲ್ಲಿ ಮುನಿ, ಸಂತ" ಬುದ್ಧನು ಜನ್ಮತಃ ಈ ಶಾಕ್ಯ ವಂಶಕ್ಕೆ ಸೇರಿದವನು, ಅವರ ತಂದೆ ಶಾಕ್ಯ ವಂಶದ ರಾಜನಾಗಿದ್ದನು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/607**

**ಕುಂಡಲಿನಿ ಜಾಗ್ರತಿ**

ಈ ಕುಂಡಲಿನಿಯು ಎಚ್ಚೆತ್ತುಕೊಳ್ಳುವುದು, ಅದರ ಜಾಗೃತಿಯು ನನಗೆ ಆಗಿತ್ತು.., ನಾನು ಆಗ ಇನ್ನೂ ಪ್ಯಾರಿಸ್‌ನಲ್ಲಿ ಇದ್ದೆ. ಭಾರತಕ್ಕೆ ಬರುವ ಪೂರ್ವದಲ್ಲಿ ವಿವೇಕಾನಂದರ ಪುಸ್ತಕಗಳಲ್ಲಿ ನಾನು ಇದರ ಬಗ್ಗೆ ಓದಿದ್ದೆ. ಯಾವಾಗ ಆ ಶಕ್ತಿ ಎಚ್ಚೆತ್ತಿತೋ ಅದು ನನ್ನ ತಲೆಯ ಮೂಲಕ ಪ್ರಕಟವಾಯಿತು, ಇಲ್ಲಿಂದ (ತಲೆಯ

ನೆತ್ತಿಯ ಮೇಲೆ ಕೈಮಾಡಿ ತೋರಿಸುತ್ತಾರೆ); ಶಾಸ್ತ್ರೀಯ ಅನುಭವದಲ್ಲಿ ಅದನ್ನು ಈ ರೀತಿ ಯಾರೂ ವಿವರಿಸಿಲ್ಲ. ಶಕ್ತಿ ಪ್ರಕಟವಾಗಿ ತುಸು ಮೇಲೆ ಬಂದು ಅಲ್ಲಿ ಪ್ರಜ್ಞೆ ಸ್ಥಿರವಾಗಿ ನಿಂತಿತು (ತಲೆಗಿಂತ ತುಸು ಎಂಟು ಇಂಚು ಮೇಲೆ ಎಂಬಂತೆ ತೋರಿಸುತ್ತಾರೆ). ನಾನಿಲ್ಲಿ ಬಂದ ಮೇಲೆ ಶ್ರೀ ಅರವಿಂದರಿಗೆ ಅದರ ಬಗ್ಗೆ ಹೇಳಿದೆ, ಅವರೂ ಸಹ ತಮ್ಮ ಸಂದರ್ಭಗಳಲ್ಲಿ ಕೂಡ ಹೀಗೆಯೇ ಆಗಿದೆ ಎಂದು ಹೇಳಿದರು. ಹಾಗೂ ಪುರಾತನ ಶಾಸ್ತ್ರ ಗ್ರಂಥಗಳ ಬೋಧನೆಯಂತೆ ಅಂಥ ಅನುಭವ ಆದಾಗ ನೀನು ಜೀವಂತ ಉಳಿಯುವುದು ಸಾಧ್ಯವಿಲ್ಲ; ನೀವು ಸತ್ತು ಹೋಗಬೇಕು ಎಂದು (ನಗುತ್ತ) ಹೇಳಿದರು "ಇಲ್ಲಿ ಇಬ್ಬರಿದ್ದೇವೆ ಇಬ್ಬರೂ ಸಾಯದೇ ಜೀವಂತವಾಗಿದ್ದೇವೆ."

ಪ್ರಜ್ಞೆ ಅಲ್ಲಿಯೇ (ತಲೆಯ ಮೇಲೆ ಸನ್ನೆ ಮಾಡಿ) ದೃಢವಾಗಿ ನಿಂತಿದೆ. ಅಲ್ಲಿಂದ ಮುಂದೆ ಅದೇನೂ ಕೆಳಗಿಳಿದು ಬರಲಿಲ್ಲ. ಅದು ಅಲ್ಲಿಯೇ ಇದೆ, ಸದಾ ಅಲ್ಲಿಯೇ ಇದೆ.

ಅಲ್ಲಿಂದ ನಾನು ಹಿಂತಿರುಗಿ (1915 ರಲ್ಲಿ ಫ್ರಾನ್ಸಿಗೆ) ಹೋದ ಮೇಲೆ.. ನಾನೊಂದು ಪ್ರಯೋಗ ಮಾಡಿದೆ. ಕೊನೆಯ ಕೇಂದ್ರವಿದೆಯಲ್ಲ (ಬೆನ್ನಲುಬಿನ ಕೊನೆಯ ಆಧಾರ ಭಾಗದಲ್ಲಿ) ಅಲ್ಲಿಂದ ಎಲ್ಲ ಶಕ್ತಿಯನ್ನು ಮೇಲೆತ್ತಿ (ಹೃದಯವನ್ನು ಸೂಚಿಸುತ್ತಾರೆ) ಶೇಖರಿಸಿಕೊಂಡೆ.

ಆದರೆ ನನಗೆ ಪಾದಗಳ ಕೆಳಗೂ ಚಕ್ರಗಳಿರುವುದರ ಅರಿವಾಯಿತು.

ಕಾಲುಗಳ ಕೆಳಗೆ ಒಂದು ಚಕ್ರವಿರುವುದಾಗಿ ನನಗೆ ಅನಿಸಿತು. ಹಾಗೂ ಕಾಲುಗಳ ಕೆಳಗೆ ಒಂದು ಚಕ್ರ ಅವಶ್ಯವಾಗಿ ಇತ್ತು.., ಕಾಲುಗಳ ಕೆಳಗೆ, ಮೊಳಕಾಲುಗಳಲ್ಲಿ ಒಂದು, ಒಂದು ಇಲ್ಲಿ (ಬೆನ್ನಲುಬಿನ ಆಧಾರ ಭಾಗವನ್ನು ಸೂಚಿಸುತ್ತ) ಮತ್ತು ಅವುಗಳ ಎಲ್ಲ ಶಕ್ತಿಯನ್ನು (ಶಕ್ತಿಯನ್ನು ಸಂಚಯಿಸಿ ಮೇಲೆಳೆಯುವಂತೆ ಸನ್ನೆ ಮಾಡುತ್ತ) ಮೇಲಕ್ಕೆತ್ತಿದೆ. ಅವೆಲ್ಲ ಇಲ್ಲಿ (ಹೃದಯವನ್ನು ತೋರಿಸುತ್ತ) ಬಂದು ಸೇರಿಕೊಂಡವು.

ನಾನು ಇಲ್ಲಿಗೆ (ಪಾಂಡಿಚೇರಿಗೆ) ಬಂದ ಕ್ಷಣದಿಂದ ನನ್ನ ಶರೀರದ ಮೇಲೆ ನನಗೆ ವಿಶೇಷ ಆಸ್ಥೆ, ಭಾವನೆ ಉಳಿದಿಲ್ಲ. ನಾನು ಮಾಡಬೇಕಾದ ಕೆಲಸದ ಜೊತೆ ಮಾತ್ರ ಸಂಬಂಧ ಇಟ್ಟುಕೊಂಡಿದ್ದೇನೆ. ಆದರೆ ಇಲ್ಲಿಗೆ ಬರುವ ಮೊದಲು, ವಿಶೇಷವಾಗಿ ನಾನು ಇಲ್ಲಿಂದ ಹಿಂತಿರುಗಿ ಹೋಗಿ ಪುನಃ ಬರುವವರೆಗಿನ ಅವಧಿ ಎಷ್ಟು.., ನಾನು ಪುನಃ ಬಂದದ್ದು 1920 ರಲ್ಲಿ, ಮೊದಲು ನಾನು ಇಲ್ಲಿ ಬಂದುದು 1914 ರಲ್ಲಿ,

ಅಲ್ಲಿಂದ 15 ರಲ್ಲಿ ನಾನು ಹಿಂತಿರುಗಿ, ಹೋದೆ.., ನನ್ನ ಕಲ್ಪನೆಯ ಪ್ರಕಾರ 1916 ರಿಂದ 20 ರವರೆಗೆ ಜಪಾನ್‌ನಲ್ಲಿ ಇದ್ದೆ. ಅಂದರೆ 14 ರಲ್ಲಿ 15 ರಲ್ಲಿ ಹಿಂತಿರುಗಿ ಹೋದೆ) ಆ ಸಮಯದ ನಂತರ ಇಂಥ ಅನೇಕ ಅನುಭವಗಳಾಗಿವೆ (ಕುಂಡಲಿನಿ ಮುಂತಾದವು) ಫ್ರಾನ್ಸನಲ್ಲಿ ಮತ್ತು ಜಪಾನದಲ್ಲಿ –

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಜುಲೈ 11, 1970**

## ಶ್ರೀ ಅರವಿಂದರ ಪ್ರಭಾವಲಯ

ಇಲ್ಲಿ ಕೇಳಿ, ಜಪಾನ್‌ದಿಂದ ನಾನು ಬಂದೆನಲ್ಲ, ಆಗ ನಾನು ಸಮುದ್ರದಲ್ಲಿ, ಹಡಗಿನಲ್ಲಿದ್ದೆ, ಯಾವುದೇ ರೀತಿಯ ನಿರೀಕ್ಷಣೆಗಳಿರಲಿಲ್ಲ. (ಹೊರಗಡೆಗೆ ನಾನು ಬೃಹತ್ ನಾನು ಹಡಗಿನಲ್ಲಿದ್ದರೂ ಅಂತರಂಗದ ಜೊತೆ ವ್ಯಸ್ತಳಾಗಿದ್ದೆ) ಒಮ್ಮೆಲೇ ಅಕಸ್ಮತ್ತಾಗಿ ಪಾಂಡಿಚೇರಿಯಿಂದ ಸುಮಾರು 2 ಸಮುದ್ರ ಮೈಲುಗಳಿಂದ (ಅಂದರೆ ಸರಿಸುಮೂರು 3704 ಮೀಟರ್ ಅಂದರೆ ಸುಮಾರು 4 ಮೈಲು) ದೂರದಲ್ಲಿರುವಾಗ ಹವಾಮಾನದ ಗುಣಧರ್ಮವೇ ಬದಲಾಗಿಬಿಟ್ಟಿತು. ಅದು ಎಷ್ಟು ಬದಲಾಗಿತ್ತೆಂದರೆ ನಾವು ಶ್ರೀ ಅರವಿಂದರ ಪ್ರಭಾವಲಯವನ್ನು ಪ್ರವೇಶಿಸುತ್ತಿದ್ದೇವೆ ಎಂಬುದು ಗೊತ್ತಾಗಿಬಿಟ್ಟಿತು. ಇದು ಭೌತಿಕ ಅನುಭವ, ಯಾರಲ್ಲಿ ನಿಜವಾಗಿ ಜಾಗೃತವಾದ ಪ್ರಜ್ಞೆ ಇದೆಯೋ ಅವರಿಗೆ ಕೂಡ ಇಂಥ ಅನುಭವ ಆಗುವುದರಲ್ಲಿ ಸಂಶಯವಿಲ್ಲವೆಂದು ನಾನು ಆಶ್ವಸ್ಥಳಾಗಿ ಹೇಳುತ್ತೇನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/223**

ಕೆಲವರು ನಿರಂತರವಾಗಿ ಉಚ್ಚತಮ ಪ್ರಜ್ಞೆಯಲ್ಲಿ ಇರುತ್ತಾರೆ, ಕೆಲವರು ಅದರಲ್ಲಿ ಪ್ರವೇಶ ಮಾಡಲು ಹೆಣಗಾಡಬೇಕಾಗುತ್ತದೆ. ಆದರೆ ಇಲ್ಲಿ ಹಾಗಲ್ಲ, ಇದು ತೀರ ಭಿನ್ನವಾಗಿದೆ; ನಾನು ಹೇಳುತ್ತಿದ್ದ ಅನುಭವದ ಪ್ರಸಂಗದಲ್ಲಿ ಎಲ್ಲ ರೀತಿಯ ಒತ್ತು ನೀಡಿದ್ದು ಯಾವುದೆಂದರೆ, ನಾನು ಏನನ್ನೂ ನಿರೀಕ್ಷೆ ಮಾಡುತ್ತಿರಲಿಲ್ಲ ಎಂಬುದೇ. ನನಗೆ ಚೆನ್ನಾಗಿ ಗೊತ್ತಿತ್ತು, ನಾನು ಬಹು ದೀರ್ಘ ಸಮಯದಿಂದ ನಿರಂತರವಾಗಿ ಆಧ್ಯಾತ್ಮಿಕ ಸಂಪರ್ಕದಲ್ಲಿ ಇದ್ದೆ, ಹಾಗೆ ಹೇಳಬೇಕೆಂದರೆ ಶ್ರೀ ಅರವಿಂದರ ಪ್ರಭಾ ಕ್ಷೇತ್ರದಲ್ಲಿಯೇ ಇದ್ದೆ. ಆದರೆ ಈ ರೀತಿ ಭೌತಿಕ ವಾತಾವರಣದಲ್ಲಿ ಕೂಡ ಬದಲಾವಣೆಯಾಗುವ ಸಾಧ್ಯತೆ ಇದೆ ಎನ್ನುವುದರ ಕಲ್ಪನೆಯನ್ನು ನಾನೆಂದೂ

ಮಾಡಿರಲಿಲ್ಲ. ನಾನು ಏನನ್ನೂ ನಿರೀಕ್ಷಿಸುತ್ತಿರಲಿಲ್ಲ, ತುಸು ಕೂಡ ನಿರೀಕ್ಷಣೆ ಇರಲಿಲ್ಲ, ಹೀಗಿರುವಾಗ ಇಂಥ ನಿರೀಕ್ಷಣಾರಹಿತ ಸ್ಥಿತಿಯೇ ಈ ಅನುಭವಕ್ಕೆ ವಿಶೇಷ ಮಹತ್ವ ನೀಡಿತು, ಅದು ಹಾಗೆಯೇ ಆಕಸ್ಮಾತ್ತಾಗಿ, ಅನಿರೀಕ್ಷಿತವಾಗಿ, ಒಮ್ಮಲೇ ಬಂದಿತು, ಒರ್ವ ವ್ಯಕ್ತಿ ಹಠತ್ತಾಗಿ ಬೇರೆ ವಾತಾವರಣವನ್ನೇ ಪ್ರವೇಶಿಸಿದಾಗ ಆಗುವುದಿಲ್ಲವೇ ಹಾಗೆ.. ನೀವು ಉಸಿರಾಡುವ ಗಾಳಿ ಸದಾ ಒಂದೇ ಆಗಿರುವುದಿಲ್ಲ, ಒಂದೇ ದೇಶದಲ್ಲಿ ಕೂಡ ಗಾಳಿಯ ತರಂಗಗಳು ಬೇರೆ ಬೇರೆಯಾಗಿರುತ್ತವೆ, ಬೇರೆ ಬೇರೆ ಪ್ರದೇಶ ಬೇರೆ ಸ್ಥಳಗಳಲ್ಲಿ ಯಾವುದೂ ಒಂದೇ ರೀತಿಯಾಗಿ ಇರುವುದಿಲ್ಲ, ಇದನ್ನು ನೀವು ಗಮನಿಸಿದ್ದೀರೋ ಇಲ್ಲವೋ ನನಗೆ ಗೊತ್ತಿಲ್ಲ. ಈ ರೀತಿ ಸೂಕ್ಷ್ಮ ಭೌತಿಕವನ್ನು ಗಮನಿಸುವ ಅಭ್ಯಾಸ ನಿಮಗೆ ರೂಢಿಯಾಗಿದ್ದರೆ ನೀವು ತಕ್ಷಣ “ಓಹ್ ಇದು ಫ್ರಾನ್ಸಿನಲ್ಲಿರುವಂಥ ಹವಾಮಾನ” ಅಥವಾ “ಇದು ಜಪಾನಿನ ಗಾಳಿ” ಎಂದು ತಕ್ಷಣ ಗುರುತಿಸಿಬಿಡುವಿರಿ. ಇದು ರುಚಿ ಅಥವಾ ವಾಸನೆಯಂತೆ ಆವಿವರಣೀಯ – ಆದರೆ ಈ ಸದ್ಯದ ಸಂದರ್ಭದ ಬಗ್ಗೆ ಹೇಳುವುದಾದರೆ ಇದು ಅದರ ಉದಾಹರಣೆ ಅಲ್ಲ. ಇದು ಬೇರೊಂದು, ವಿಶಿಷ್ಟ ಸಂವೇದನೆ ಅದು ಪ್ರಾಣಿಕವೂ ಅಲ್ಲ ಮಾನಸಿಕವೂ ಅಲ್ಲ, ಅದು ಭೌತಿಕ ಜಗತ್ತಿನ ಸಂವೇದನೆ ನಾವು ತಿಳಿದಿರುವ 5 ಇಂದ್ರಿಯಗಳಲ್ಲದೇ ಇನ್ನೂ ಕೆಲ ಇಂದ್ರಿಯಗಳು ಇವೆ, ನಾವು ಅವುಗಳನ್ನು ಬೇಕಾದರೆ ಬಳಸಿಕೊಳ್ಳಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/229–30**

## ಸ್ವರ್ಗದಂತೆ

ಟೋಕಿಯೋದಂಥ ನಗರದಲ್ಲಿ, ಉದಾಹರಣೆ ಜಗತ್ತಿನಲ್ಲೇ ಅತಿ ದೊಡ್ಡದಾದ ಲಂಡನ್‌ಕ್ಕಿಂತ ದೊಡ್ಡದಾಗಿರುವ, – ಅದು ತುಂಬಾ ಬೆಳದಿದೆ, (ಈಗೆಲ್ಲ ಮನೆಗಳು ಆಧುನೀಕೃತವಾಗಿವೆ, ಇಡೀ ನಗರದ ಕೇಂದ್ರವೇ ಅಸಂತುಷ್ಟಿಕರವಾಗಿ ಹೋಗಿದೆ. ಆದರೆ ನಾನು ಅಲ್ಲಿ ಇದ್ದಾಗ ಅದು ತುಂಬಾ ಚೆನ್ನಾಗಿತ್ತು) ನಗರದ ಹೊರ ವಲಯವೆಲ್ಲ ಬೆಳದಿದೆ, ಅಲ್ಲಿ ಎಲ್ಲವೂ ವ್ಯಾಪಾರದ ಕೇಂದ್ರಗಳೇನಲ್ಲ, ಆದರೂ ಪ್ರತಿ ಮನೆಯೂ ಏನಿಲ್ಲವೆಂದರೂ ಎರಡು ಮಹಡಿಗಳುಳ್ಳದಾಗಿದೆ, ಒಂದು ಸಣ್ಣ ತೋಟ–ತೋಟವೆಂಬುದು ಪ್ರತಿ ಮನೆಗೂ ಸಾಮಾನ್ಯವಾಗಿ ಇದ್ದೇ ಇದೆ. ಒಂದೆರಡು ತುಂಬ ಸುಂದರವಾದ ದೊಡ್ಡ ಗಿಡಗಳು ಇದ್ದೇ ಇರುತ್ತವೆ. ಸುಮ್ಮನೇ ಒಂದು ವಾಕಿಂಗ್ ಎಂದು ನೀವು ಹೋದರೆ.. ಹಿಂತಿರುಗಿ ಬರುವಾಗ ಟೋಕಿಯೋದಲ್ಲಿ ಸುಲಭವಾಗಿ ನಿಮಗೆ ದಾರಿ ಸಿಕ್ಕುವುದಿಲ್ಲ, ದಾರಿ ಕಳೆದುಕೊಳ್ಳುತ್ತೀರಿ. ನೀವು ಸುಮ್ಮನೇ

ಅಲೆದಾಡಬೇಕಾಗಿ ಬರುತ್ತದೆ – ನೀವು ಕಾಡಿನಂಥ ದಾರಿಯಲ್ಲಿ ಬರೀ ಸುತ್ತಾಡಬೇಕಾಗಿ ಬರುತ್ತದೆ. ಅಕಸ್ಮಾತ್ತಾಗಿ ಒಂದು ಓಣಿಯ ಮೂಲೆಯಲ್ಲಿ ಬಂದಾಗ ಒಂದು ಸ್ವರ್ಗವನ್ನೇ ನೋಡಿದಂಥ ಅನುಭವ ಆಗುತ್ತದೆ. ಅತಿ ಸುಂದರವಾದ ಅದ್ಭುತ ಗಿಡಮರಗಳು, ತುಂಬ ಸುಂದರವಾದ ದೇವಾಲಯ, ಪಟ್ಟಣದ ಯಾವ ಗೋಜು ಗದ್ದಲಿನ ಅನುಭವ ಆಗುವುದಿಲ್ಲ. ರಸ್ತೆ ನೂಕು ನುಗ್ಗಲು ಗದ್ದಲ ಇಲ್ಲ, ಮೋಟಾರು ವಾಹನಗಳ ಸದ್ದಿಲ್ಲ. ಒಂದು ಸಣ್ಣ ಸ್ಥಳ ಬಣ್ಣ ಬಣ್ಣದ ಗಿಡ ಮರಗಳು ಸುಂದರವಾದ, ನಿಜವಾಗಿ ಅತಿ ಸುಂದರವಾದ ಸಣ್ಣ ಸ್ಥಳ.. ನೀವಲ್ಲಿಗೆ ಹೇಗೆ ಬಂದಿರಿ ನಿಮಗೇ ತಿಳಿಯವುದಿಲ್ಲ, ನಿಮ್ಮ ಪುಣ್ಯ ನೀವಲ್ಲಿಗೆ ಬಂದಿದ್ದೀರಿ ಅನಿಸುತ್ತದೆ. ಅಲ್ಲಿಂದ ಪುನಃ ನಿಮ್ಮ ದಾರಿ ಹುಡುಕಿಕೊಂಡು ಹೊರಡುತ್ತೀರಿ, ಎಲ್ಲೆಲ್ಲೋ ಅಲೆದಾಡಿ ಮತ್ತೆಲ್ಲಿಗೋ ಹೋಗುತ್ತೀರಿ. ಕೆಲ ದಿನಗಳ ನಂತರ ನಿಮಗೆ ಮತ್ತೆ ಅಲ್ಲಿಗೆ ಹೋಗಬೇಕೆನಿಸುತ್ತದೆ, ಆದರು ಅದು ಅಸಾಧ್ಯ, ಅದು ಮಾಯವಾಗಿಬಿಟ್ಟಿದೆ ಏನೋ ಅನ್ನುವ ಹಾಗೆ. ಇದೆಲ್ಲ ಮತ್ತೆ ಮತ್ತೆ ನಿಜ, ಇಂಥ ಅನೇಕ ನೈಜ ಕಥೆಗಳನ್ನು ಜಪಾನಿನಲ್ಲಿ ಬಹು ಸಲ ಹೇಳಲಾಗುತ್ತದೆ. ಅವರ ಸಾಹಿತ್ಯ ಕೂಡ ತುಂಬ ಮೋಹಕತೆಯಿಂದ ಕೂಡಿದೆ. ಅವರಲ್ಲೊಂದು ಕಥೆ ಹೀಗಿದೆ, ಕಥಾನಾಯಕ ಅಕಸ್ಮಾತ್ತಾಗಿ ಒಂದು ಸ್ಥಳಕ್ಕೆ – ಮಾಂತ್ರಿಕದಂಥ ಪ್ರದೇಶಕ್ಕೆ ಬರುತ್ತಾನೆ. ಅನೇಕ ದೇವತಾ ಸ್ತ್ರೀಯರನ್ನು, ಅದ್ಭುತ ಜೀವಿಗಳನ್ನು, ಅಲ್ಲಿ ಕಾಣುತ್ತಾನೆ. ಅಲ್ಲಿನ ಹೂಗಳ ಮಧ್ಯೆ, ವಾತಾವರಣದ ಮಧ್ಯೆ ಆನಂದಿಂದ ಕಾಲ ಕಳೆಯುತ್ತದೆ. ಸಂಗೀತ ಹೀಗೆ ಎಲ್ಲವೂ ಅಲ್ಲಿ ಅದ್ಭುತವಾಗಿರುತ್ತದೆ. ಮರುದಿನ ಅವನು ಆ ಪ್ರದೇಶದಿಂದ ಹೋಗಬೇಕಾಗಿ ಬರುತ್ತದೆ, ಅದು ಅಲ್ಲಿನ ಶಾಸನ, ನಿಯಮ. ಅವನು ಹೊರಡುತ್ತಾನೆ. ಪುನಃ, ಅಲ್ಲಿಗೆ ಹೋಗುವ ಪ್ರಯತ್ನ ಮಾಡುತ್ತಾನಾದರೂ ಎಂದಿಗೂ ಅಲ್ಲಿಗೆ ಹೋಗಲಾಗುವುದೇ ಇಲ್ಲ. ಆ ಸ್ಥಳ ಅವನಿಗೆ ಮತ್ತೆಂದೂ ಸಿಕ್ಕುವುದೇ ಇಲ್ಲ. ಆಗೇನೋ ಅದು ಅಲ್ಲಿತ್ತು, ಈಗ ಕಾಣದಂತೆ ಮಾಯವಾಗಿ ಬಿಟ್ಟಿದೆ..! ಈ ನಗರದಲ್ಲಿನ ಎಲ್ಲವೂ, ಈ ದೇಶದಲ್ಲಿನ ಎಲ್ಲವೂ, ಮೊದಲಿನಿಂದ ಕೊನೆಯವರೆಗೂ, ಅಶ್ವಾಶತೆಯ ಅನುಭವವನ್ನೇ ನೀಡುತ್ತವೆ, ಅನಿರೀಕ್ಷಿತ ಹಾಗೂ ಅದ್ವೀತಿಯತೆಯ ಭಾವ ಮೂಡಿಸುತ್ತವೆ. ನೀವು ನಿರೀಕ್ಷೆ ಮಾಡದ ಸಂಗತಿಗಳೇ ನಿಮಗೆ ಸದಾ ಸಿಕ್ಕುತ್ತಿರುತ್ತವೆ. ಅವುಗಳನ್ನು ಮತ್ತೊಮ್ಮೆ ಹುಡುಕುವ, ಪಡೆಯುವ ಪ್ರಯತ್ನ ಮಾಡುತ್ತೀರಿ, ನಿಮಗವು ಸಿಕ್ಕುವುದೇ ಇಲ್ಲ – ಅವು ಕಳೆದುಹೋಗಿರುತ್ತವೆ – ಅವೇ ಪುನಃ ಬೇರೆ ಏನೋ ಆಗಿ ಬದಲಾವಣೆ ಹೊಂದಿರುತ್ತವೆ, ಆದರೆ ಆ ಹೊಸ ರೂಪ ಕೂಡ ಮೊದಲಿನಷ್ಟೇ ಸುಂದರವಾಗಿರುತ್ತದೆ.

ಕಲಾತ್ಮಕ ದೃಷ್ಟಿಯಿಂದ ನೋಡಿದರೆ, ಸೌಂದರ್ಯ ಪ್ರಜ್ಞೆಯಿಂದ ಗಮನಿಸಿದರೆ, ಅದರಷ್ಟು ಸುಂದರವಾದ ದೇಶ ಇನ್ನೊಂದಿಲ್ಲ ಎಂದು ನನಗನಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/307–08**

## ನೈತಿಕ ಪರಿಕಲ್ಪನೆ ಮತ್ತು ಆಧ್ಯಾತ್ಮಿಕತೆ

ಆ ಜಪಾನಿನ ಬಗ್ಗೆ ನಾನು ನಿಮಗೆ ನೀಡಿದ ಚಿತ್ರಣಕ್ಕೊಂದು ಪೂರ್ಣರೂಪ ಕೊಡಬೇಕಾಗಿರುವುದರಿಂದ ನಾನು ಇನ್ನೊಂದಿಷ್ಟು ಹೇಳಲೇಬೇಕು. ಅಲ್ಲಿ ನಾಲ್ಕು ವರ್ಷಗಳವರೆಗೆ ವಾಸವಾಗಿದ್ದೆ. ಅಲ್ಲಿ ಆಧ್ಯಾತ್ಮಿಕತೆಯ ಬರಡುತನ ಎಷ್ಟಿರಲು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಇದೆ. ಅಲ್ಲಿನ ಜನರಿಗೆ ಅದ್ಭುತ ನೈತಿಕತೆ ಇದೆ, ನೈತಿಕ ನಿಯಮಗಳಿಗನುವಾಗಿ ತುಂಬ ಕಟ್ಟುನಿಟ್ಟಿನಲ್ಲಿ ನಡೆದುಕೊಳ್ಳುತ್ತಾರೆ. ಬದುಕಿನ ಸಣ್ಣ ಸಂಗತಿಯಲ್ಲಿ ಕೂಡ ಒಂದು ವಿಧವಾದ ಮಾನಸಿಕ ಚಿಂತನೆ ಇರುತ್ತದೆ. ಇಂಥ ನಿರ್ದಿಷ್ಟವಾದ ರೀತಿಯಲ್ಲಿಯೇ ಉಣ್ಣಬೇಕು. ತಿನ್ನಬೇಕು, ನಿರ್ದಿಷ್ಟವಾಗಿ ಇದೇ ರೀತಿಯಲ್ಲಿಯೇ ನಮಸ್ಕಾರ ಮಾಡಬೇಕು. ಇಂಥ ಶಬ್ದಗಳನ್ನು ಮಾತ್ರ ಹೇಳಬೇಕೆ ಹೊರತು ಬೇಕಾದ ಹಾಗೆ ಹೇಳುವಂತಿಲ್ಲ, ಇಂಥ ಅನೇಕ ನಿಯಮಗಳಿವೆ. ಯಾವುದಾದರೂ ಅಂಗಡಿಗೆ ಏನಾದರೂ ತೆಗೆದುಕೊಳ್ಳಲು ಹೋಗಿರುವಿರಿ ಅನ್ನಿ, ನೀವು ಸರಿಯಾಗಿ ಈ ವಾಕ್ಯಗಳನ್ನೇ ಹೇಳಬೇಕು, ಅಥವಾ ಬೇರೆ ಏನಾದರೂ ಹೇಳಿದಿರೋ ನಿಮಗೆ ಅಲ್ಲಿ ಸೇವೆ ಸಿಕ್ಕುವುದಿಲ್ಲ. ನಿಮ್ಮೆಡೆಗೆ ವಿಸ್ಮಯದ ದೃಷ್ಟಿಯಿಂದ ನೋಡುತ್ತಾರೆ, ಅಲುಗಾಡುವುದಿಲ್ಲ ಕೂಡ. ನಿರ್ದಿಷ್ಟವಾದ ವಾಕ್ಯ, ಶಬ್ದ ಹೇಳಿದಿರೋ ಸರಿ ಎಲ್ಲ ರೀತಿಯಿಂದಲೂ ಸೇವೆ ಮಾಡುತ್ತಾರೆ, ನಿಮ್ಮೆಡೆಗೆ ಗಮನ ಹರಿಸುತ್ತಾರೆ. ಅಷ್ಟೇ ಏಕೆ ಬೇಕಾದರೆ ಒಂದು ಕಪ್ ಚಹಾ ಕುಡಿಯಬೇಕಾದರೂ ಒಂದು ಮೆತ್ತನೆಯ ಖುರ್ಚಿ ತಂದು ಇಟ್ಟು ಸೇವೆ ಮಾಡುತ್ತಾರೆ. ಅಲ್ಲಿ ಎಲ್ಲವೂ ಹಾಗೆಯೇ. ಒಟ್ಟಿನಲ್ಲಿ ನಿಮಗೆ ಒಂದು ಸಲವಾದರೂ ಸಹ ಅದ್ಭುತವಾದ ವ್ಯವಸ್ಥೆ ಇರುವ ಮನೋಶಾರೀರಿಕ ಕ್ಷೇತ್ರದಿಂದಾಚೆಗಿನ ಸಂಗತಿಯ ಬಗ್ಗೆ ನಿಮಗೆ ಅಲ್ಲಿ ಯಾವ ಸಂಪರ್ಕವೂ ಬಂದಿಲ್ಲವೇನೋ ಎನ್ನುವ ಹಾಗೆ ಅವರೆಲ್ಲ ನಡೆದುಕೊಳ್ಳುತ್ತಾರೆ. ಅವರಲ್ಲಿ ಎಂಥ ಶಕ್ತಿ ಅಂದಿರಿ! ಅವರ ಇಡೀ ಪ್ರಾಣಿಕ ಸತ್ತೆಯೇ ಶಕ್ತಿಯಾಗಿ ಬದಲಾಗಿರುವಂತಿದೆ. ಅವರಲ್ಲಿ ಅಸಾಧಾರಣವಾದ ಸಹನಶಕ್ತಿ ಇದೆ, ಆದರೆ ನೇರವಾದ ಅಭೀಪ್ಸೆ ಇಲ್ಲ. ನಿಯಮ ಪಾಲನೆ ಮಾಡಬೇಕು, ಮಾಡಲೇಬೇಕು. ನಿಯಮಗಳಿಗೆ ಬದ್ಧರಾಗದೇ ನಡೆದುಕೊಂಡರೆ, ಯುರೋಪಿಯನ್‌ರಂತೆ ನಡೆದುಕೊಂಡದ್ದೇ ಆದರೆ, –

ಯುರೋಪಿನ್‌ರಲ್ಲಿ ಅಸಂಸ್ಕೃತರು, ಅನಾಗರಿಕರು ಎಂಬಂತೆ ಅಲ್ಲಿ ನೋಡಲಾಗುವುದು, – ನಿಮ್ಮನ್ನು ಘುಸಬ್ಯೈಾ ಎಂಬಂತೆ ನೋಡಲಾಗುವುದು. ಆ ಜಪಾನಿಗರ ನಡುವೆ ನೀವೂ ಸಹ ಜಪಾನಿಗರಂತೆಯೇ ಇರಬೇಕೆಂದರೆ ಅವರು ಮಾಡುವಂತೆಯೇ ನೀವೂ ಮಾಡಬೇಕು, ಇಲ್ಲವಾದರೆ ಅವರು ಎಷ್ಟು ಅಸಂತುಷ್ಟರಾಗುವುರೆಂದರೆ ನೀವು ಅವರ ಜೊತೆ ಯಾವ ಸಂಬಂಧವನ್ನು ಇಟ್ಟುಕೊಳ್ಳುವುದೂ ಕಠಿಣವಾಗಿ ಬಿಡುತ್ತದೆ. ಅವರ ಮನೆಯಲ್ಲಿ ನೀವು ಅವರಂತೆ ನಿರ್ದಿಷ್ಟ ರೀತಿಯಲ್ಲಿಯೇ ನಡೆದುಕೊಳ್ಳಬೇಕು, ಅವರನ್ನು ಭೇಟಿಯಾದ ತಕ್ಷಣ ಅವರಿಗೆ ಶುಭಾಶಯ ಹೇಳಲೇಬೇಕು. ನಮಗೆ ತೀರ ಪರಿಚಿತನಾದ ಜಪಾನಿಯನೊಬ್ಬನ ಕಥೆಯನ್ನು ನಿಮಗೆ ಈಗಾಗಲೇ ನಾನು ಹೇಳಿರಬಹುದೆಂದು ತೋರುತ್ತದೆ, ನಾನು ಅವನಿಗೆ ತನ್ನ ಆತ್ಮದ ಸಂಪರ್ಕ ಕಂಡುಕೊಳ್ಳಲು ಸಹಾಯ ಮಾಡಿದ್ದೆ – ಅವನು ಅಲ್ಲಿಂದ ಪಲಾಯನ ಗೈದುಬಿಟ್ಟ. ಅವನು ಹಳ್ಳಿಯಲ್ಲಿ ನಮ್ಮ ಜೊತೆಗೆನೇ ಇದ್ದ, ನಾನು ಅವನಿಗೆ ತನ್ನ ಅಂತರಾತ್ಮದ ಸಂಪರ್ಕದಲ್ಲಿರುವ ಬಗೆ ಹೇಳಿಕೊಟ್ಟೆ, ಸಹಾಯ ಮಾಡಿದೆ. ಅವನಿಗೆ ಅನುಭವ ಆಯಿತು, ಒಂದು ರೀತಿಯ ಸಾಕ್ಷಾತ್ಕಾರವೂ ಆಯಿತು. ಪ್ರಖರವಾದ ಅಂತರಾತ್ಮಿಕ ಸಂಪರ್ಕ ಅವನಿಗೆ ಸಿದ್ಧಿಸಿತು.

ಮರುದಿನ ನೋಡಿದರೆ, ಅವನು ಇಲ್ಲವೇ ಇಲ್ಲ! ವಿಮಾನ ಹತ್ತಿ ಹೋಗಿಬಿಟ್ಟಿದ್ದ. ಮುಂದೊಮ್ಮೆ ಸೂಟಿಯ ಸಮಯದಲ್ಲಿ ನಗರದಲ್ಲಿ ನನಗೆ ಅವನು ಭೇಟಿಯಾದ, ನಾನವನನ್ನು ಕೇಳಿದೆ "ಏನಾಯಿತು ನಿನಗೆ? ಅಲ್ಲಿಂದ ಏಕೆ ಓಡಿ ಹೋದೆ?" – "ಓಹ್, ನಿಮಗೆ ಗೊತ್ತಿದೆ, ನಾನು ನನ್ನ ಆತ್ಮವನ್ನು ಕಂಡುಕೊಂಡೆ, ನನ್ನ ಆತ್ಮವು ಈ ದೇಶದಲ್ಲಿನ ಹಾಗೂ ಮತ್ಯಾರೋದಲ್ಲಿನ ನಂಬಿಕೆಗಳಿಗಿಂತ ತುಂಬ ಶಕ್ತಿಶಾಲಿಯಾಗಿದೆ ಎಂಬುದನ್ನು ಮನಗಂಡೆ. ನಾನು ನನ್ನ ಆತ್ಮದ ಮಾತು ಪಾಲಿಸಲೇಬೇಕಾಯ್ತು, ನಮ್ಮ ಚಕ್ರವರ್ತಿಗೆ ನಾನು ವಿಧೇಯನಾಗಿರುವುದು ಇನ್ನು ಮುಂದೆ ಸಾಧ್ಯವಿಲ್ಲ ಎಂದು ಅನಿಸಿತು. ಅಂತೆಯೇ ನಾನು ಅಲ್ಲಿಂದ ಹೋಗಿಬಿಟ್ಟೆ". ಇದು ಕಥೆ, ಇದೆಲ್ಲ ಖಂಡಿತವಾಗಿಯೂ ಅಧಿಕೃತವಾಗಿಯೂ ಸತ್ಯ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/308–09 – ಶ್ರೀಮಾತೆ**

ಇದು ನಡೆದದ್ದು ಜಪಾನಿನ ಒಂದು ಹಳ್ಳಿಯಲ್ಲಿ. ನಾವು ಅಲ್ಲಿಯೇ ಇದ್ದೆವು ಒಂದು ಕೊಳದ ಬಳಿ. ಅಲ್ಲಿ ಅನೇಕ ತರಹದ ಘಟನೆಗಳಾದವು, ಅನೇಕ ತರಹದ ಸನ್ನಿವೇಶಗಳು, ಎಲ್ಲ ಪ್ರಕಾರದ ಸಂಗತಿಗಳು – ಅದೊಂದು ದೊಡ್ಡ ಕಥೆಯೇ

ಆದೀತು, ಕಾದಂಬರಿಯಂತೆ. ಒಂದು ದಿನ ಏಕಾಂಗಿಯಾಗಿ ಧ್ಯಾನದಲ್ಲಿದ್ದೆ. ನಾನು ಸ್ಪಷ್ಟವಾಗಿ ನೋಡಿದೆ. ನಾನು ಅಸತ್ಯದ ಸ್ವಾಮಿಯ ಜೊತೆ ಮಾತನಾಡಿದ್ದೆಲ್ಲ ನಿಮಗೆ ಗೊತ್ತಿದೆ, ನಾನು ಅದನ್ನು ಒಂದು ಮೈದಾಳಿದ ಅಥವಾ ಸಾಕಾರವಾಗಿ ಬಂದ ಭೌತಿಕ ಸತ್ತೆಯ ಮೂಲಕ ಕಲ್ಪಿಸಲು ನೋಡಿದೆ. ಆ ಜಪಾನಿನಲ್ಲಿರುವ ನಾಲ್ಕು ವರ್ಷಗಳ ಅವಧಿಯಲ್ಲಿ ನಾನು ಅತ್ಯಂತ ಹೆಚ್ಚು ಪ್ರಯತ್ನ ಮಾಡಿದೆ. ನಾಲ್ಕು ವರ್ಷಗಳ ಅವಧಿ ಮುಗಿಯುತ್ತ ಬಂದಿತ್ತು, ಅಂತರಂಗದಲ್ಲಿ ನನಗೆ ಖಾತ್ರಿಯಾಗಿತ್ತು, ಏನೂ ಮಾಡಲು ಸಾಧ್ಯವಿಲ್ಲ ಎಂಬ ನಿರ್ಣಯಕ್ಕೆ ಬಂದಿದ್ದೆ, ಅಸಾಧ್ಯ, ಏನೂ ಮಾಡಲು ಸಾಧ್ಯವೇ ಇಲ್ಲ, ಕನಿಷ್ಠ ಪಕ್ಷ ಈ ರೀತಿಯಾಗಿಯಂತೂ ಮಾಡಲು ಸಾಧ್ಯವಿಲ್ಲ. ಏನೂ ಮಾಡುವುದು ಉಳಿದಿರಲು ಇಲ್ಲ. ನಾನು ತೀವ್ರತರವಾಗಿ ಏಕಾಗ್ರತೆ ಸಾಧಿಸಿದೆ, ಭಗವಂತನನ್ನು ಕೇಳಿಕೊಂಡೆ "ಪ್ರಭು ನಾನು ಇದನ್ನು ಮಾಡಿಯೇ ತೀರುವುದಾಗಿ ನಿನಗೆ ವಚನ ನೀಡಿದ್ದೆ. ಅವಶ್ಯಬಿದ್ದರೆ ನಾನು ನರಕಕ್ಕೆ ಹೋಗಲೂ ಸಿದ್ಧಳಿದ್ದೇನೆ ಎಂದು ಹೇಳಿದ್ದೆ. ಅದನ್ನು ಮಾಡಿ ಮುಗಿಸಲು ನಾನೀಗ ನರಕಕ್ಕೆ ಹೋಗುತ್ತೇನೆ. ನಾನೇನು ಮಾಡಲಿ ಎಂಬುದನ್ನು ಆದೇಶಿಸು" ಅಲ್ಲಿ ಆ ದಿವ್ಯ ಶಕ್ತಿ ಸಹಜವಾಗಿತ್ತು. ನಿರಾಳವಾಗಿತ್ತು. ಅಕಸ್ಮಾತ್ತಾಗಿ ನನ್ನೊಳಗೆ ಎಲ್ಲವೂ ಸ್ಥಬ್ಧವಾಗಿಬಿಟ್ಟಿತು, ನಿಶ್ಚಲವಾಗಿಬಿಟ್ಟಿತು. ಸಂಪೂರ್ಣ ಬಾಹ್ಯ ಶರೀರವು ನಿಷ್ಕ್ರಿಯವಾಗಿಬಿಟ್ಟಿತು, ನನಗೆ ಆಗ ಪರಮೋಚ್ಚ ಪುರುಷನ ದರ್ಶನವಾಯಿತು, ಗೀತೆಯಲ್ಲಿ ಹೇಳಿದುದಕ್ಕಿಂತ ತುಂಬ ಸುಂದರವಾಗಿ. ಪರಾತ್ಪರ ಪುರುಷನ ದರ್ಶನ. ಈ ದರ್ಶನವು ನನ್ನನ್ನು ಅಕ್ಷರಶಃ ತನ್ನ ತೋಳ್ತೆಕ್ಕೆಯಲ್ಲಿ ತೆಗೆದುಕೊಂಡಿತು. ಆ ಮೇಲೆ ಪಶ್ಚಿಮದೆಡೆಗೆ ತಿರುಗಿತು, ಭಾರತದ ಕಡೆಗೆ, ನನ್ನನ್ನು ಒಪ್ಪಿಸಿಬಿಟ್ಟಿತು. ಅಲ್ಲಿ ಅದರ ಕೊನೆಯ ಅಂಚಿನಲ್ಲಿ ಶ್ರೀ ಅರವಿಂದರನ್ನು ನಾನು ಸ್ಪಷ್ಟವಾಗಿ ನೋಡಿದೆ. ಇದೆಲ್ಲ ಭೌತಿಕವಾಗಿಯೇ ಅನುಭವದಲ್ಲಿ ಬಂದಿತು. ನಾನು ನೋಡಿದೆ, ನನ್ನ ಕಣ್ಣುಗಳು ಮುಚ್ಚಿಕೊಂಡಿದ್ದರೂ ನಾನು ಸ್ಪಷ್ಟವಾಗಿ ನೋಡಿದೆ (ಪರಾತ್ಪರನ ದರ್ಶನ ನನಗೆ ಹೀಗೆ ಎರಡು ಸಲ ಆಗಿದೆ – ಒಂದು ಸಲ ಇಲ್ಲಿ ಬಹಳ ದಿನಗಳ ನಂತರ ಆದರೆ ಈಗ ಆದದ್ದು ಮೊದಲ ಸಲ). ಅನಿರ್ವಚನೀಯ ವೈಶಾಲ್ಯವೆಂಬುದು ತಾನಾಗಿ ಕುಗ್ಗಿ ಬಂದು ಬೃಹ್‌ದಾಕಾರದ ಸತ್ತೆಯಾಗಿ ನನ್ನನ್ನು ಒಂದು ಒಣ ಹುಲ್ಲಿನಂತೆ ಎತ್ತಿಕೊಂಡು ಶ್ರೀ ಅರವಿಂದರಿಗೆ) ಕೊಡಮಾಡಿತು. ಯಾವ ಮಾತು ಇಲ್ಲ. ಒಂದು ಶಬ್ದ ಕೂಡ ಇಲ್ಲ, ಕೇವಲ ಅದಷ್ಟೇ, ಆ ಮೇಲೆ ಎಲ್ಲವೂ ಮರೆಯಾಗಿ ಬಿಟ್ಟಿತು.

ಮರುದಿನವೇ ನಾವು ಭಾರತಕ್ಕೆ ಹೊರಡಲು ಸಿದ್ಧತೆ ನಡೆಸಿದವು.

ಈ ದರ್ಶನದ ನಂತರವೇ, ನಾನು ಜಪಾನಿನಿಂದ ಹಿಂತಿರುಗಿ ಬಂದ ಮೇಲೆ, ಶ್ರೀ ಅರವಿಂದರೊಂದಿಗೆ ಭೇಟಿ ಜರುಗಿತು. ಹಾಗೂ ನಾನು ಕೈಕೊಂಡ ಮಹಾಕಾರ್ಯ ಸಿದ್ಧಿಸುವುದೆಂಬ ನಿಶ್ಚಿಂತತೆ ಮೂಡಿತು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಡಿಸೆಂಬರ್ 20, 1961**

## ಪಾಂಡಿಚೇರಿ

– ಅನುವಾದ: ನಾಗಜ್ಯೋತಿ ಯಲಿವಾರ

**ಒಂದು ಉನ್ನತ ಸಮನ್ವಯದತ್ತ**

ನನಗೆ ಗೊತ್ತಿಲ್ಲ, ನಾನು ಅದನ್ನು ಕಳಪೆಯಾಗಿ ಹೇಳುತ್ತಿದ್ದೇನೆ, ಆದರೆ ಈ ಅನುಭವವು ಎಷ್ಟು ಮಾತ್ರ ರೂಪವಾಗಿ ದೈಹಿಕ ಅಸ್ತಿತ್ವಕ್ಕೆ ಹತ್ತಿರವಾಗಿದೆ. ಉದ್ದು ನಾವು ವಾಸಿಸುತ್ತಿದ್ದ ಜಪಾನಿನ ಹಳ್ಳಿಯ ಮನೆಯಲ್ಲಿ, ಸರೋವರದ ಬಳಿ ಸಂಭವಿಸಿದೆ. ಅಲ್ಲಿ ಸನ್ನಿವೇಶಗಳು, ಘಟನೆಗಳು, ಎಲ್ಲಾ ರೀತಿಯ ವಸ್ತುಗಳ ಸಂಪೂರ್ಣ ಸರಣಿ ಇತ್ತು – ಒಂದು ಕಾದಂಬರಿಯಂತೆ ದೀರ್ಘವಾದ ಕಥೆ. ಆದರೆ ಒಂದು ದಿನ ನಾನು ಧ್ಯಾನದಲ್ಲಿ ಒಬ್ಬೊಂಟಿಯಾಗಿದ್ದೆ. (ನಾನು ಎಂದಿಗೂ ಆಳವಾದ ಧ್ಯಾನದಲ್ಲಿ ಪ್ರವೇಶಿಸಿದ್ದಿಲ್ಲ, ಕೇವಲ ಪ್ರಜ್ಞೆಯನ್ನು ಏಕಾಗ್ರತೆಗೊಳಿಸುತ್ತಿದ್ದೆ.. ಶ್ರೀಮಾತೆಯವರು ಇಡೀ ಅಸ್ತಿತ್ವದ ಹಠಾತ್ತನೆ ಅಂತರ್ಮುಖಿಯಾಗುವ ಸೂಚಕವನ್ನು ತೋರಿದರು); ಮತ್ತು ನಾನು ನೋಡುತ್ತಿದ್ದೆ.. “ಅಸತ್ಯದ ಒಡೆಯನ ಮತಾಂತರವನ್ನು ನಾನು ತೆಗೆದುಕೊಂಡಿದ್ದೇನೆ ಎಂದು ನಿಮಗೆ ತಿಳಿದಿದೆ: ಇದರ ಅಂಶವು ಭೌತಿಕ ಸ್ಥರದಲ್ಲಿ ಆವತರಿಸಿದ ರಿಚರ್ಡ್‌ನ ಮೂಲಕ ಬದಲಿಸಲು ಪ್ರಯತ್ನಸಿದೆ, ಮತ್ತು ಆ ನಾಲ್ಕು ವರ್ಷಗಳಲ್ಲಿ ಅತಿ ಹೆಚ್ಚಿನ ಪ್ರಯತ್ನವನ್ನು ಜಪಾನಿನಲ್ಲಿ ಮಾಡಲಾಯಿತು. ಈ ನಾಲ್ಕು ಇದನ್ನು ಮಾಡಲು ಅಸಾಧ್ಯವೆಂಬ ನಿಶ್ಚಿತತೆಯು ನನ್ನಲ್ಲಿ ಮೂಡತೊಡಗಿತು. ಇದು ಅಸಾರ್ಥಯ ಈ ರೀತಿ ಮಾಡುವ ದಾರಿ ಅಸಾಧ್ಯಮಯ. ಮಾಡುವುದು ಏನೂ ಇರಲಿಲ್ಲ ಮತ್ತು ನಾನು ತೀವ್ರವಾಗಿ ಕೇಂದ್ರೀಕೃತವಾಗಿ ಭಗವಂತನನ್ನು ಕೇಳುತ್ತಾ, ಸರಿ, ನಾನು ಇದನ್ನು ಮಾಡಲು ನಿನಗೆ ಪ್ರತಿಜ್ಞೆ ಮಾಡಿದ್ದೇನೆ, ನಾನು ಹೇಳಿದ್ದೇನೆಂದರೆ, “ನರಕಕ್ಕೆ ಇಳಿಯುವುದು ಅವಶ್ಯಕವಿದ್ದರೂ ಸಹ, ಇದನ್ನು ಮಾಡಲು ನಾನು ನರಕಕ್ಕೂ ಇಳಿಯಬಲ್ಲೆ..” ಈಗ ಹೇಳಿ ನಾನು ಏನು ಮಾಡಬೇಕು?.. (ದೈವೀ) ಶಕ್ತಿಯೂ ಸ್ಪಷ್ಟವಾಗಿ ಇತ್ತು: ಇದ್ದಕ್ಕಿದ್ದಂತೆ ನನ್ನಲ್ಲಿ ಎಲ್ಲವೂ ಸ್ಥಿತವಾಯಿತು;

ಇಡೀ ಬಾಹ್ಯ ಅಸ್ತಿತ್ವ ಸಂಪೂರ್ಣವಾಗಿ ನಿಶ್ಚಲವಾಗಿತ್ತು ಮತ್ತು ಪರಾತ್ಪರ ಪರಮಾತ್ಮನ ದರ್ಶನ ನನಗಾಯಿತು. ಗೀತೆಯಲ್ಲಿಯ ದರ್ಶನಗಿಂತ ಹೆಚ್ಚು ಸುಂದರವಾಗಿತ್ತು. ಇದು ಪರಾತ್ಪರ ಪರಮಾತ್ಮನ ದರ್ಶನ. ಮತ್ತು ಈ ದರ್ಶನ ಅಕ್ಷರಶಃ ನನ್ನನ್ನು ಅದರ ತೋಳುಗಳಲ್ಲಿ ಒಟ್ಟುಗೂಡಿಸಿತು; ಅದು ಪಶ್ಚಿಮಕ್ಕೆ, ಭಾರತದ ಕಡೆಗೆ ತಿರುಗಿ ನನ್ನನ್ನು ಅರ್ಪಿಸಿತು. ಮತ್ತು ಇನ್ನೊಂದು ತುದಿಯಲ್ಲಿ ನಾನು ಶ್ರೀ ಅರವಿಂದರನ್ನು ನೋಡಿದೆ. ಅದು.., ನಾನು ಅದನ್ನು ದೈಹಿಕವಾಗಿ ಅನುಭವಿಸಿದೆ. ನಾನು ನೋಡಿದೆ – ನನ್ನ ಕಣ್ಣುಗಳು ಮುಚ್ಚಲ್ಪಟ್ಟವು ಆದರೂ ನೋಡಿದೆ, (ಎರಡು ಬಾರಿ ನನಗೆ ಪರಮಾತ್ಮನ ದರ್ಶನವಾಗಿತ್ತು – ಒಮ್ಮೆ ಇಲ್ಲಿ, ಮತ್ತೊಮ್ಮೆ ಬಹಳ ನಂತರ – ಆದರೆ ಇದು ಮೊದಲನೆಯದು).. ಅನಿರ್ವಚನೀಯ. ಈ ಅಪಾರತೆಯು ತನ್ನನ್ನು ತಾನೇ ದೈತ್ಯಾಕಾರದ "ಅಸ್ತಿತ್ವ"ದ ರೂಪಕ್ಕೆ ಇಳಿಸಿಕೊಂಡು. ಅದು ಒಣಹುಲ್ಲಿನ ಹಾಗೆ ಎತ್ತಿ ನನ್ನನ್ನು ಅರ್ಪಿಸಿತು. ಅದನ್ನು ಬಿಟ್ಟು ಯಾವ ಶಬ್ದವಾಗಲೀ ಮತ್ತಿನ್ನೇನೂ ಇರಲಿಲ್ಲ.

ಆಗ ಎಲ್ಲವೂ ಮರೆಯಾಯಿತು.

ಮರುದಿನ ನಾವು ಭಾರತಕ್ಕೆ ಮರಳಲು ತಯಾರಿ ಆರಂಭಿಸಿದೆವು. ಈ ದರ್ಶನದ ನಂತರ ಈ "ಕಾರ್ಯ"ವು ನೆರವೇರಲಿದೆ ಎಂಬ ನಿಶ್ಚತತೆಯೊಂದಿಗೆ ಶ್ರೀ ಅರವಿಂದರೊಂದಿಗಿನ ಈ ಭೇಟಿ ನಡೆಯಿತು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಡಿಸೆಂಬರ್ 20 , 1961**

## ದೈವೀ ತತ್ವದೊಂದಿಗೆ ಭೂಮಿಯ ಐಕ್ಯತೆ

ಇಡೀ ಪ್ರಜ್ಞೆಯು ದೈವೀ ಧ್ಯಾನದಲ್ಲಿ ಮುಳುಗಿತ್ತು. ಇಡೀ ಅಸ್ತಿತ್ವವು ಒಂದು ಸರ್ವೋಚ್ಚ ಮತ್ತು ವಿಶಾಲವಾದ ಪರಮಾನಂದವನ್ನು ಅನುಭವಿಸಿತು. ನಂತರ ಭೌತಿಕ ದೇಹವು ಇದರ ಅಧೀನದಲ್ಲಿ ಸಿಲುಕಿ, ಮೊದಲು ಕೆಳ ಸ್ತರದ ಮತ್ತು ನಂತರ ಇಡಿಯಾಗಿ, ಪವಿತ್ರ ಕಂಪನದಿಂದಾಗಿ ಭೌತಿಕ ಸಂವೇದನೆಯಲ್ಲಿಯೂ ಸಹ ಎಲ್ಲಾ ವೈಯಕ್ತಿಕ ಮಿತಿಗಳನ್ನು ಸ್ವಲ್ಪ ಸ್ವಲ್ಪವಾಗಿ ಮೀರಲಾಯಿತು. ಅಸ್ತಿತ್ವವು ಹಂತ ಹಂತವಾಗಿ ಪದ್ಧತಿಯ ಪ್ರಕಾರ ಶ್ರೇಷ್ಠತೆಯ ಕಡೆಗೆ ಬೆಳೆಯುತ್ತಾ, ಪ್ರತೀ ಅಡೆತಡೆಯನ್ನು ದಾಟುತ್ತಾ, ಅಪಾರ ಮತ್ತು ತೀವ್ರತೆಯಲ್ಲಿ ಹೆಚ್ಚಾಗುತ್ತಿರುವ ಶಕ್ತಿಯನ್ನು ಧಾರಣೆ ಮಾಡಿತು. ಪೃಥ್ವಿಯೊಂದಿಗೆ ಸಂಪೂರ್ಣ ತಾದಾತ್ಮ್ಯ ಬರುವವರೆಗೂ

ಇದು ಜೀವಕೋಶಗಳ ಪ್ರಗತಿಶೀಲ ಹಿಗ್ಗುವಿಕೆಯಾಗಿತ್ತು: ಜಾಗೃತ ಪ್ರಜ್ಞೆಯ ದೇಹವು ಭೂಮಂಡಲದ ಗೋಳವಾಗಿ ಅಲೌಕಿಕ ಆಕಾಶದಲ್ಲಿ ಸಾಮರಸ್ಯದಿಂದ ಚಲಿಸುತ್ತಿತ್ತು. ಮತ್ತು ಆಪ್ರಜ್ಞೆಗೆ ತನ್ನ ವಿಶ್ವಾತ್ಮಕ ದೇಹವು ವಿಶ್ವಾತ್ಮಕ "ಅಸ್ತಿತ್ವ"ದ ಬಾಹುಗಳಲ್ಲಿ ಚಲಿಸುತ್ತಿದೆ ಎಂದು ತಿಳಿದಿತ್ತು, ಮತ್ತು ಅದು ಶಾಂತಿಯುತ ಆನಂದದ ಭಾವಪರವಶತೆಯಲ್ಲಿ ತನ್ನನ್ನು ತಾನು ಅದಕ್ಕೆ ಅರ್ಪಿಸಿತು. ಆಗ ಅದರ ದೇಹವು ವಿಶ್ವಾತ್ಮಕ ದೇಹದಲ್ಲಿ ಹೀರಲ್ಪಟ್ಟು ಒಂದಾದಂತೆ ಅದು ಭಾವಿಸಿತು; ಪ್ರಜ್ಞೆಯು ವಿಶ್ವಾತ್ಮಕ ಪ್ರಜ್ಞೆಯಾಯಿತು, ಅದರ ಸಂಪೂರ್ಣತೆಯಲ್ಲಿ ಸ್ಥಿರವಾಗಿದೆ, ಅದರ ಆಂತರಿಕ ಸಂಕೀರ್ಣತೆಯಲ್ಲಿ ಅನಂತವಾಗಿ ಚಲಿಸಿತು, ವಿಶ್ವಾತ್ಮಕ ಪ್ರಜ್ಞೆಯು ದೈವಿಕತೆಯ ಕಡೆಗೆ ಉತ್ಸಾಹಭರಿತ ಆಕಾಂಕ್ಷೆಯಲ್ಲಿ, ಪರಿಪೂರ್ಣ ಶರಣಾಗತಿಯಾಗಿ ಚಿಮ್ಮಿತು, ಮತ್ತು ಅದು ಪರಿಶುದ್ಧವಾದ ಬೆಳಕಿನ ವೈಭವದಲ್ಲಿ ಇರುವ ಪ್ರಜ್ವಲ "ಅಸ್ತಿತ್ವ"ವು ಅನೇಕ ತಲೆಯ ಸರ್ಪದ ಮೇಲೆ ನಿಂತಿತ್ತು, ಸರ್ಪದ ದೇಹವು ವಿಶ್ವದ ಸುತ್ತ ಅನಂತವಾಗಿ ಸುತ್ತಿಕೊಂಡಿತ್ತು. ಅಸ್ತಿತ್ವವು ವಿಜಯದ ಶಾಶ್ವತ ಸಂಕೇತವಾಗಿ ಏಕಕಾಲಕ್ಕೆ ಸರ್ಪ ಮತ್ತು ವಿಶ್ವವನ್ನು ತನ್ನೊಳಗಿನಿಂದ ಸೃಷ್ಟಿಸಿ ತನ್ನ ಆಧೀನದಲ್ಲಿಟ್ಟುಕೊಂಡು: ತನ್ನ ಎಲ್ಲಾ ವಿಜಯಶಾಲಿ ಶಕ್ತಿಗಳೊಂದಿಗೆ ಸರ್ಪದ ಮೇಲೆ ನೆಟ್ಟಗೆ ನಿಂತು ಪ್ರಾಬಲ್ಯ ಸಾಧಿಸಿತು ಮತ್ತು ಅದೇ ಸಂಕೇತದಲ್ಲಿ ಅದು ವಿಶ್ವವನ್ನು ಆವರಿಸಿದ ಸಹಸ್ರ ಫಣಿಯನ್ನು ನಾಶಗೊಳಿಸಿ ಅದಕ್ಕೆ ಶಾಶ್ವತ ಹುಟ್ಟುನೀಡಿತು. ನಂತರ ಪ್ರಜ್ಞೆಯು ಈ "ಅಸ್ತಿತ್ವ"ವಾಯಿತು ಮತ್ತು ಅದರ ರೂಪವು ಮತ್ತೊಮ್ಮೆ ಬದಲಾಗುತ್ತಿದೆ ಎಂದು ಗ್ರಹಿಸಿತು; ಅದು ಮುಂದೆ ಒಂದು ನಿರಾಕಾರದಲ್ಲಿ ಹೀರಿಕೊಳ್ಳಲ್ಪಟ್ಟು ಮತ್ತು ಇನ್ನೂ ಎಲ್ಲಾ ರೂಪಗಳನ್ನು ಒಳಗೊಂಡಿತ್ತು, ಅದು ಬದಲಾಗದ, ನೋಡುವ, ಸಾಕ್ಷಿಯಾಗಿತ್ತು. ಮತ್ತು ಅದು ಏನು ನೋಡುತ್ತದೆಯೋ, ಅದೇ ಆಗಿತ್ತು. ನಂತರ ರೂಪದ ಈ ಕೊನೆಯ ಕುರುಹು ಕಣ್ಮರೆಯಾಯಿತು ಮತ್ತು ಪ್ರಜ್ಞೆಯು ಸ್ವತಃ "ಅವರ್ಣನೀಯ"ನಲ್ಲಿ ಹೀರಲ್ಪಟ್ಟಿತು, ಅನಿರ್ವಚನೀಯ. ನೇರವಾಗಿ, ವಿಶ್ವಾತ್ಮಕ ಮತ್ತು ಪ್ರಾಪಂಚಿಕ ರೂಪಗಳ ಮೂಲಕ ಮತ್ತೆ ಹಾದುಹೋಗದೆ ಬೆಳಕು, ಶಕ್ತಿ, ಪರಮಾನಂದ ಮತ್ತು ಆರಾಧನೆಯ ಸ್ಥಿರ ಮತ್ತು ಅಸ್ಥಿರ ವೈಭವದಲ್ಲಿ ಸತತ ಹಂತಗಳಿಂದ ವೈಯಕ್ತಿಕ ದೇಹದ ಪ್ರಜ್ಞೆಯ ಕಡೆಗೆ ಮರಳಿದನು. ಮತ್ತು ಸಾಧಾರಣ ದೈಹಿಕ ರೂಪವು ಯಾವುದೇ ಮಧ್ಯವರ್ತಿಯಿಲ್ಲದೆ, ಸರ್ವೋಚ್ಚ ಮತ್ತು ಶಾಶ್ವತ ಸಾಕ್ಷಿಯ ನೇರ ಮತ್ತು ತಕ್ಷಣದ ಉಡುಪಾಗಿ ಮಾರ್ಪಟ್ಟಿತು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/311–312** **– ಶ್ರೀಮಾತೆ**

# ಶ್ರೀ ಅರವಿಂದರು – ಶತಮಾನದ ನೋಟ

– ಶ್ರೀ ನವನೀತ ರಾಮಚಂದ್ರರಾಯರು

## ಕನ್ನಡ ಸಾಹಿತ್ಯ–ಸಾಹಿತಿಗಳ ಮೇಲೆ ಮಹರ್ಷಿ ಶ್ರೀ ಅರವಿಂದರ ಪ್ರಭಾವ
## (ನನ್ನ ಅನುಭವಕ್ಕೆ ಬಂದಂತೆ)

ಈ ಪ್ರಬಂಧದ ಆದಿಭಾಗದಲ್ಲಿ ಶ್ರೀ ಅರವಿಂದರ ಮೌಲಿಕ ವಿಚಾರಧಾರೆ – ಬೋಧಸಾರಗಳನ್ನು ಸಂಕ್ಷೇಪವಾಗಿ ವಿವರಿಸಲು ಪ್ರಯತ್ನಿಸುತ್ತೇನೆ. ನನ್ನನ್ನೂ 'ಸಾಹಿತಿ' ಎಂದು ಜನ ಅನ್ನುತ್ತಾರೆ; ಆದುದರಿಂದ ನನ್ನ ದೃಷ್ಟಿಯಲ್ಲಿ ಶ್ರೀ ಅರವಿಂದರ ಜೀವನ ಪ್ರಭಾವವನ್ನು ಕುರಿತು ಕೊಂಚ ಬರೆಯುವುದು ಅಪ್ರಸ್ತುತವಾಗದು. ಇದು ಸುಲಭವಾದ ಕೆಲಸವಲ್ಲ. ಬಾಳಿನ ಆಳ–ಅಗಲ–ಎತ್ತರಗಳನ್ನು ಅಳೆದು ನೋಡಿದ ತತ್ತ್ವದರ್ಶಿಗಳು–ಅನುಭಾವಿಗಳು ಅವರು. ಶಂಕರ, ರಾಮಾನುಜ, ಮಧ್ವ, ವಲ್ಲಭ, ರೇಣುಕಾದಿ ಭಾರತದ ಹೆಸರಾಂತ ವೇದಾಂತ ಸಿದ್ಧಾಂತಗಳ ಪ್ರವರ್ತಕರು ಮಾಡಿದ ಅತಿಸೂಕ್ಷ್ಮ ಚಿಂತನಕ್ಕೆ ಆಧಾರ ಅವರ ಸತ್ಯ ಸಾಕ್ಷಾತ್ಕಾರವಾಗಿರುವುದು. ಅವರು 'ಆರಾಮ ಕುರ್ಚಿಯ ವಿರಾಮ ಕಾಲದ ತತ್ತ್ವಜ್ಞಾನಿಗಳಾಗಿರಲಿಲ್ಲ; ತಮ್ಮ ತಮ್ಮ ಪರಿಯಲ್ಲಿ, ಪರಿಶ್ರಮಪೂರ್ವಕವಾದ ಆಂತರಿಕ ಸಾಧನದ ಬಲದಿಂದ ಜೀವನದ ಒಡಪವನ್ನು ಒಡೆದು, ಒಳಗಿನ ತಿರುಳನ್ನು ಕಂಡುಂಡು, ಆ ಅರಿವನ್ನು ತಿಳಿವನ್ನಾಗಿ ಮಾಡಲು ಉಪಕ್ರಮಿಸಿದ ತರ್ಕಬದ್ಧ ಮೀಮಾಂಸೆಗಳೇ ಅವರ ಮತ ಸಿದ್ಧಾಂತಗಳು. ಅಂತೆಯೆ ಅವು 'ದರ್ಶನ'ಗಳೆಂಬ ಅಭಿಧಾನವನ್ನು ಪಡೆದಿವೆ. ಮೇಲೆ ಉದಾಹರಿಸಿದ ಮತಾಚಾರ್ಯರ ಜೀವನ ಚರಿತ್ರೆಗಳನ್ನು ನೋಡಿದರೆ, ಭಾರತೀಯ ಮತಸ್ಥಾಪಕರ ರೀತಿ ಮೂಲತಃ ಒಂದೇ ಆಗಿತ್ತೆಂಬುದು ವಿದಿತವಾಗುತ್ತದೆ. ಶ್ರೀ ಅರವಿಂದರು ಈ ಆಚಾರ್ಯರ ಮಾಲಿಕೆಯಲ್ಲಿ ಕೂಡಲು, ಇಷ್ಟೇ ಅಲ್ಲ–ಹಳೆಯ ಜೀವನ ದರ್ಶನಗಳನ್ನು ಅಲ್ಲಗಳೆಯದೆ ಅವುಗಳ ವಿಶಿಷ್ಟ ಅಂತಃಸತ್ತ್ವವನ್ನು ವಿಶದವಾಗಿ ಎತ್ತಿ ತೋರಿ, ಅವುಗಳಿಗೆ ತಮ್ಮ ಅನುಪಮ ಸಮನ್ವಯ ದೃಷ್ಟಿಕೋನದಿಂದ ಹೊಸ ಒಪ್ಪ ಹೊಸ ತಿರುಪಕೊಟ್ಟು, ನವಯುಗದ ನವ ಸಮಸ್ಯೆಗಳಿಗೆ ನವ ಪರಿಹಾರವನ್ನು ಅತ್ಯಂತ ಸೂಕ್ಷ್ಮ ಸಮರ್ಥ ವಿದಗ್ಧ ರೀತಿಯಲ್ಲಿ ಒದಗಿಸಿರುವುದರಿಂದ 'ನವ ಮನ್ವಂತರಾಚಾರ್ಯ'ರೆಂದೆನಿಸಿಕೊಳ್ಳಲು ಅರ್ಹರಾಗಿರುವರು. ಆದುದರಿಂದ ನಾನು ಮೇಲೆ ಉಲ್ಲೇಖಿಸಿದ ಕಾರ್ಯವು

ಅತ್ಯಂತ ಕಠಿಣವಾಗಿದೆಯಾದರೂ, ಅವರ ಜೀವನ ದರ್ಶನದ ರೂಪರೇಷೆಗಳ–ನ್ನಾದರೂ ಯಥಾಮತಿ–ಯಥಾಶಕ್ತಿ ದಿಗ್ದರ್ಶಿಸುವುದು ಕರ್ತವ್ಯವೆಂದು ಭಾವಿಸಿದ್ದೇನೆ.

ನಾವು ಸೃಷ್ಟಿಯ – ನಿಸರ್ಗ (Nature) ದ – ಪ್ರಕೃತಿಯ ಉತ್ಕ್ರಾಂತಿ ಕ್ರಮವನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದರೆ, ಅದರ ತೀರ ಕೆಳಗಿನ ಸ್ತರವು 'ಜಡ' (Matter) ಆಗಿರುವುದೆಂದು ಭಾಸವಾಗುತ್ತದೆ. (ಇದನ್ನೇ 'ಅನ್ನಮಯ ಕೋಶ' ವೆಂದು ಉಪನಿಷತ್ತುಗಳು ಹೆಸರಿಸಿವೆ.) ಆದರೆ ಅದು ನಿಜವಾಗಿಯೂ ಜಡವಾಗಿಲ್ಲ. ಅದರಲ್ಲಿ ಸಸ್ಯಸೃಷ್ಟಿ – ಜೀವೋತ್ಪತ್ತಿಯಾಗಿದೆ. ಅದರಲ್ಲಿ 'ಜೀವನ' ಎಂದರೇನೇ 'ಪ್ರಾಣ' (Life) ಪ್ರಕಟವಾಗಿದೆ. ಅಲ್ಲಿಗೆ ನಿಲ್ಲದೆ ಅದರಲ್ಲಿ 'ಮನ' ವೂ (Mind) ಒಡಮೂಡಿದೆ. ಮನೋವಿಶಿಷ್ಟ ಜೀವಿಯೇ ಮಾನವನು. ಅವನು ಪ್ರಕೃತಿಯ ಪ್ರಯೋಗಾಲಯದಲ್ಲಿ ಇಂದಿನ ಮಟ್ಟಿಗಿನ ಅತಿ ಶ್ರೇಷ್ಠ ಸೃಷ್ಟಿ, ಇಂದಿನ ವಿಕಸಿತ ಮಾನವನನ್ನು ನೋಡಿದರೆ ಆತ 'ಮನೋಮಯಃ ಪ್ರಾಣ ಶರೀರನೇತಾ' ಎಂಬ ಉಪನಿಷದ್ವರ್ಣನೆಗೆ ದೃಷ್ಟಾಂತವಾಗಿದ್ದಾನೆ. ಸರ್ವಸಾಮಾನ್ಯ ಮಾನವರು 'ಜಡ' ದ – 'ಅನ್ನ' ದ ಜಾಡ್ಯ–ಮೌಢ್ಯಗಳಿಗೆ ತುತ್ತಾಗಿ, ವಾಸನಾಮಯ 'ಪ್ರಾಣ' ದ ಹೊರಸೆಳೆತಗಳ ಎಳೆದಾಟಕ್ಕೆ ಸಿಲುಕಿ ಸಿಕ್ಕಿದತ್ತ ಸೆಳೆದೊಯ್ಯಲ್ಪಡುವುದು ಕಂಡುಬಂದರೂ, ಕೆಲವರಾದರೂ ವಿವೇಕಿಗಳು–ವಿಚಾರಿಗಳು ತಮ್ಮ 'ಪ್ರಾಣ–ಶರೀರ'ಗಳನ್ನು ನೀತಿನಿಯಮಗಳ ಆಚರಣೆಯಿಂದ ನಿಯಂತ್ರಿಸಿಕೊಂಡು, ಅವುಗಳ ನಾಯಕರಾಗಿ, ಸಾಮಾನ್ಯವಾಗಿ ಪ್ರಗತಿ–ಉನ್ನತಿಯೆಂದು ಕರೆಯಿಸಿಕೊಳ್ಳುವ ಪಥದಲ್ಲಿ ಅಡಿಯಿಡುತ್ತಿರುವುದು ಕಂಡುಬರುತ್ತದೆ. ಆದರೆ ಇದು ಮಾನವ ಜೀವಿತದ ನಿಜವಾದ ಪ್ರಗತಿಯ–ಉನ್ನತಿಯ ಕೊನೆಯೇ? 'ಇಲ್ಲ' ಎನ್ನುತ್ತಾರೆ ಶ್ರೀ ಅರವಿಂದರು. ಸೃಷ್ಟಿಯ ಉತ್ಕ್ರಾಂತಿಯ ಪರಿಣತ ಫಲವೆನಿಸಿದ ಮಾನವನು ಬರೀ ಅನ್ನಮಯ–ಪ್ರಾಣಮಯ–ಮನೋಮಯ ಜೀವಿಯಾಗಿ ಉಳಿಯಲಾರ. ಇದಕ್ಕೂ ಮೇಲಿನ 'ವಿಜ್ಞಾನಮಯ' 'ಆನಂದಮಯ' ಕೋಶಗಳಿಗೆ ಸ್ವಾಯತ್ತವಾದ ಉಚ್ಚಾನುಭವಗಳನ್ನು ಪಡೆದ ಹಲವಾರು ಧನ್ಯ ಜೀವಿಗಳನ್ನೂ, ಎಂದರೆ ಸಂತರನ್ನು–ಸಿದ್ಧರನ್ನು–ಯೋಗಿಗಳನ್ನು–ದಾರ್ಶನಿಕರನ್ನು–ವಿಭೂತಿಗಳನ್ನು ಅವತಾರೀ ವ್ಯಕ್ತಿಗಳನ್ನು ನಾವು ನೋಡುತ್ತೇವೆ. ಇವರ ಇರವಿನ ಪರಿ ಇಂದಿನ ಅತಿಭೌತಿಕ ವಾತಾವರಣದಲ್ಲಿ ಅಪವಾದಾತ್ಮಕವಾಗಿ ತೋರಿದರೂ ಅದು ಮಾನವ್ಯವು ವಿಸ್ತೃತ ಪ್ರಮಾಣದಲ್ಲಿ ಇಂದಿಲ್ಲ ನಾಳೆ ಪಡೆಯಲೇಬೇಕಾದ ಉಚ್ಚತರ ಅವಸ್ಥೆಯ ಮುಂಗುರುತಾಗಿದೆ. ಅವರನ್ನು ಅತಿಮಾನವರು – Supermen,

ಇಲ್ಲವೆ ದೇವಮಾನವರು – Godmen ಎಂದು ಬಣ್ಣಿಸಿ, ಪ್ರದರ್ಶನದಲ್ಲಿ ಇಡತಕ್ಕ ವಸ್ತುಗಳನ್ನಾಗಿ ಮಾಡಕೂಡದು. ಅವರ ಜಯಂತ್ಯುತ್ಸವಗಳನ್ನು ಆಚರಿಸಿ ಮತ್ತೆ ತಮ್ಮ ಮೃತ್ತಿಕಾಮಯ ಜೀವಿತವನ್ನು ಸಾಗಿಸುತ್ತ ಕೂಡಬಾರದು. 'ದುಡಕೊಂಡು ದುಡಕೊಂಡು ಆಗ್ಯಾರ ಶಿವಶರಣರಾ!' ಎಂದೊಬ್ಬ ಲಾವಣಿಕಾರ ಸೊಗಸಾಗಿ ಅವರು ಪಡೆದ ಎತ್ತರದ ಗುಟ್ಟನ್ನು ಹೇಳಿದ್ದಾನೆ. ದುಡಿಯಬೇಕು, ಪಡೆಯಬೇಕು. ನಾವು ದುಡಿದು ಪಡೆದಪ್ಪರಾಗಲು ಒಲ್ಲೆವು, ತಳ ಸೋಸಿ ವಿಚಾರ ಮಾಡಲು ಒಲ್ಲೆವು. ನಾವು ನಿಜವಾಗಿ ಏನಿದ್ದೇವೆ, ಏನಾಗಬಲ್ಲೆವು ಎಂಬುದರ ಬಗೆಗೆ ಮನೋಮಥನ ಮಾಡಿ, ಅನುಭವದ ನವನೀತ ಪಡೆಯಲು ಒಲ್ಲೆವು. ನಾವು ಸಾಧನ ಸೋಪಾನವನ್ನೇರಿ, 'ವಿಜ್ಞಾನ'ದ ಸೌಧವನ್ನು ಹತ್ತಿ, ಮೇಲಣ ಅಂತರಿಕ್ಷದಿಂದ ವರ್ಷಿಸುವ ಸತ್–ಚಿತ್–ಆನಂದ ಸುಧೆಯನ್ನು ಮೈ–ಮನದಣಿಯೆ ಈಂಟಿ ತೃಪ್ತಿಯಿಂದ ತೇಗಲು ಒಲ್ಲೆವು. ಅದಿರಲಿ, ಕವಿಗಳಿಗೆ–ಶಿಲ್ಪಕಲಾ ಕೋವಿದರಿಗೆ, ಗಾಯಕರಿಗೆ–ಗೀತರಚನಾಕರ್ತರಿಗೆ, ಧಾರ್ಮಿಕ ಅನುಭವಿಗಳಿಗೆ, ಧರ್ಮಸ್ಥಾಪಕರಿಗೆ, ಪ್ರವಾದಿಗಳಿಗೆ, ಕರ್ಮವೀರರಿಗೆ, ಅದೇಕೆ – ಭೌತ–ಮಾನಸ ಶಾಸ್ತ್ರಜ್ಞರಿಗೆ ಕೂಡ ಮನದ ಮೇಲಿನ ಬಾನಿನಿಂದ ಸ್ಫೂರ್ತಿ–ಪ್ರೇರಣೆ–ಆದೇಶಗಳು ಬಂದು, ಅವು ಜಗತ್ತಿನ ಸಂಸ್ಕೃತಿಯ ನಿಧಿಗೆ ಅವಿಸ್ಮರಣೀಯ ಭರತಿ ಹಾಕಿ ಹೋದುದು ಕಂಡುಬರುವುದಿಲ್ಲವೇ? ಈ ಮಹಾಚೇತನರೆಲ್ಲ ಆ ಅತ್ಯುನ್ನತ ಅನುಭವಗಳನ್ನು ಅದೆಂದು ಪಡೆದರೆಂಬುದನ್ನು ಶಾಸ್ತ್ರೀಯವಾಗಿ ಸಂಶೋಧಿಸಿ, ತಾತ್ತ್ವಿಕವಾಗಿ ನಿರೂಪಿಸಿರುವವರು ಶ್ರೀ ಅರವಿಂದರು.

ಇಲ್ಲಿ 'ವಿಜ್ಞಾನ' ಪದ ಪ್ರಯೋಗವನ್ನು ಕುರಿತು ಕಿಂಚಿತ್ ಚಿಂತನ ಅಗತ್ಯ. ಉಪನಿಷತ್ತುಗಳಲ್ಲಿ ಬರುವ 'ವಿಜ್ಞಾನ' 'ಮನ'ಕ್ಕೂ ಮಿಗಿಲಾದುದು–ಮೇಲಿನದು, ಅದನ್ನು ಗೀತೆಯಲ್ಲಿ ಬರುವ 'ಬುದ್ಧಿ'ಗೆ (ಅರ್ಥಾತ್ ಶುದ್ಧ ಬುದ್ಧಿಗೆ) ಸಮಾನಾರ್ಥಕ ಶಬ್ದವೆಂದು ಹೇಳಬಹುದು. ಈ ಬುದ್ಧಿಗೆ ಅತೀತನಾದವನು ಆತ (ಅರ್ಥಾತ್ ಪರಮ ಪುರುಷ) ಎಂದು ನಿರ್ದೇಶಿಸಿ ಗೀತೆ ಸುಮ್ಮನಾಗುವುದು. ಅಂತೂ ಬುದ್ಧಿಗೆ ಆ ಪರಾತ್ಪರದ ಪ್ರೇರಣೆ–ಸಂಜೀವನಿ ಅಗತ್ಯವೆಂದಾಯಿತು. ಗೀತೆ ಇತರತ್ರ ಬುದ್ಧಿಗೆ ಬಹು ಹೆಚ್ಚಿನ ಸ್ಥಾನವನ್ನು ಕೊಟ್ಟಿರುವುದು. 'ಬುದ್ಧಿಗ್ರಾಹ್ಯಂ ಅತೀಂದ್ರಿಯಂ' – ಆ ಪರಾತ್ಪರದ ದರ್ಶನ–ಸ್ಪರ್ಶನದಿಂದ ಲಭಿಸುವ ಸುಖ ಅತೀಂದ್ರಿಯವಾದುದು, ಆದರೆ ಬುದ್ಧಿಯಿಂದ ಗ್ರಹಿಸಬಹುದಾದುದು; 'ಬುದ್ಧ್ಯಾ ಧೃತಿಗೃಹೀತಯಾ' – ಧೃತಿಯಿಂದ ಗಟ್ಟಿಯಾಗಿ ಹಿಡಿಯಲ್ಪಟ್ಟ ಬುದ್ಧಿಯಿಂದ

ಸಾಧಕನು ಯೋಗಪ್ರವೃತ್ತನಾಗಬೇಕು ಎಂದು ಹೇಳಿದುದರ ಮೇಲಿಂದ, 'ಬುದ್ಧಿಯೋಗ' ಎಂಬ ಪ್ರಯೋಗದಿಂದ, 'ಬುದ್ಧಿಗೆ ಶರಣು ಹೋಗು' ಎಂದು ವಿಧಿಸಿದುದರಿಂದ, 'ಬುದ್ಧಿಗಿಂತ ಕರ್ಮ ಕಡಿಮೆಯದು' ಎಂದು ಸಾರಿದುದರಿಂದ, ಬುದ್ಧಿಯುಕ್ತನಾಗಿ 'ಕೌಶಲ್ಯದಿಂದ (ಅರ್ಥಾತ್ ಅಲಿಪ್ತತೆಯಿಂದ) ಕರ್ಮ ಮಾಡುವುದೆ ಯೋಗ' ಎಂದು ಹೇಳಿದುದರಿಂದ ಗೀತೆಯಲ್ಲಿ ಬುದ್ಧಿಗಿತ್ತ ಮಹತ್ತ್ವ ವ್ಯಕ್ತವಾಗುತ್ತದೆ. ಇನ್ನು ಗೀತೆಯೂ 'ವಿಜ್ಞಾನ' ಶಬ್ದವನ್ನು ಪ್ರಯೋಗಿಸುತ್ತದೆ: 'ಜ್ಞಾನಂ ವಿಜ್ಞಾನ ಸಹಿತಂ.' ಬುದ್ಧಿಯಿಂದ ಅರಿತ ಜ್ಞಾನವು ಜೀವನದ ಅಂಗಾಂಗವನ್ನೂ ವ್ಯಾಪಿಸಬೇಕು ಎಂಬುದು ಅದರ ಅರ್ಥ. ಅಲ್ಲಿ 'ವಿಜ್ಞಾನ'ವೆಂದರೆ ವ್ಯಾಪಕ ಜ್ಞಾನ, ವಿಸ್ತೃತ ಜ್ಞಾನ, ವಿಶೇಷ ಜ್ಞಾನ, ಆಚರಣೆಯಲ್ಲಿ ಬಂದ ಜ್ಞಾನ. 'ಧಿಯೋ ಯೋ ನಃ ಪ್ರಚೋದಯಾತ್' ಎಂಬ ವೈದಿಕ ಗಾಯತ್ರೀ ಮಂತ್ರದಲ್ಲಿ 'ನಮ್ಮ ಧೀಶಕ್ತಿ'ಯನ್ನು ಆ ಜ್ಞಾನಸೂರ್ಯನು ಪ್ರಚೋದಿಸಲಿ ಎಂಬ ಪ್ರಾರ್ಥನೆ ಬಂದಿದೆ. ಕಠೋಪನಿಷತ್ತಿನಲ್ಲಿ ಶರೀರವೆಂಬ ರಥಕ್ಕೆ ಆತ್ಮನು ರಥಿಕ, ಬುದ್ಧಿಯೆ ಸಾರಥಿ, ಇಂದ್ರಿಯಗಳು ಹೂಡಿದ ಕುದುರೆಗಳು, ಮನಸ್ಸು ಕುದುರೆಗಳಿಗೆ ಹಾಕಿದ ಕಡಿವಾಣ, ವಿಷಯಗಳು ಹುಲ್ಲುಗಾವಲು ಎಂಬ ಸುಂದರವಾದ ರೂಪಕ ಬಂದಿದೆ; ಅದರಲ್ಲಿ ಬುದ್ಧಿಗೆ ಸಾರಥಿಯೆಂದು ಪ್ರಧಾನ ಸ್ಥಾನ ಕೊಟ್ಟಿದೆ. ಇಷ್ಟೇ, ಬುದ್ಧಿ ಆತ್ಮಾನುವರ್ತಿಯಾಗಿ ಮನಸ್ಸೆಂಬ ಕಡಿವಾಣ ಹಾಕಿ ಇಂದ್ರಿಯಗಳನ್ನು ಹೂಡಿದ ಈ ಶರೀರದ ರಥವನ್ನು ಸರಿ ದಾರಿಯಲ್ಲಿ ನಡೆಯಿಸಬೇಕು; ಇಲ್ಲವಾದರೆ ಅವು ಸಿಕ್ಕಿದತ್ತ ಈ ರಥವನ್ನೊಯ್ದು ಹಳ್ಳಕ್ಕಾಗಲಿ, ಕೆರೆಗಾಗಲಿ ಹಾಕಬಹುದು. ಆತ್ಮಸ್ವಸ್ಥನಾಗಿರುವನು, ಬುದ್ಧಿ ಅವನ ಆದೇಶವನ್ನು ಅಂತಃಸ್ಫೂರ್ತಿಯಿಂದ ಅರಿತುಕೊಂಡು ಕೌಶಲ್ಯದಿಂದ ಈ ಶರೀರದ ತೇರನ್ನು ಮನದ ಸಹಾಯದಿಂದ ನಡೆಯಿಸಬೇಕು ಎಂಬ ಬೋಧವನ್ನು ಇದರಿಂದ ನಾವು ಪಡೆಯಬಹುದು. ಅಂತೂ ಆತ್ಮನ ಆದೇಶವನ್ನು ಕಾರ್ಯಗತ ಮಾಡುವ ಶಕ್ತಿ ಬುದ್ಧಿಯೆಂಬುದು ಸ್ಪಷ್ಟವಾಯಿತು. ಇದೇ ರೂಪಕದಲ್ಲಿ 'ವಿಜ್ಞಾನ ಸಾರಥಿರ್ಯಸ್ತು ಮನಃಪ್ರಗ್ರಹವಾನ್ ನರಃ' ಎಂಬ ಪದ ಪ್ರಯೋಗ ಬಂದಿರುವುದರಿಂದ 'ಬುದ್ಧಿ' ಹಾಗೂ 'ವಿಜ್ಞಾನ' ಉಪನಿಷತ್ಕಾಲದಲ್ಲಿ ಸಮಾನಾರ್ಥಕವಾಗಿದ್ದುವೆಂಬುದು ತಿಳಿತಿಳಿಯಾಗುತ್ತದೆ.

ಇಷ್ಟಾದ ಮೇಲೆ 'ವಿಜ್ಞಾನ'ವನ್ನು ಸರ್ವಸಾಮಾನ್ಯವಾಗಿ ಪಾಶ್ಚಾತ್ಯರ Science ಗೆ (ಭೌತಮಾನಸಾದಿ ಶಾಸ್ತ್ರೀಯ ಸಂಶೋಧನಕ್ಕೆ) ಸಮಾನಾರ್ಥಕವಾಗಿ

ಉಪಯೋಗಿಸುವುದನ್ನು ಗಮನಿಸುವುದು ಅಗತ್ಯ. ಆದರೆ ನಮ್ಮ ಪ್ರಾಚೀನ ಅಧ್ಯಾತ್ಮ ಶಾಸ್ತ್ರದಲ್ಲಿಯ 'ವಿಜ್ಞಾನ'ಕ್ಕೂ ಪ್ರಚಾರದಲ್ಲಿರುವ 'ವಿಜ್ಞಾನ'ಕ್ಕೂ ಇರುವ ಮಹದಂತರವನ್ನು ಸುಜ್ಞರು ಸಹಜವಾಗಿ ಅರಿಯಲು ಸಾಕು.

ಉಪನಿಷತ್ತುಗಳು 'ವಿಜ್ಞಾನ'ದ ಮೇಲಿನ ಭೂಮಿಕೆಯನ್ನು 'ಆನಂದ'ವೆಂದು ಕರೆಯುವವು. ಮೇಲಿನಿಂದ ಕೆಳಕ್ಕೆ ಬಂದರೆ, ಆನಂದ–ವಿಜ್ಞಾನ–ಮನ–ಪ್ರಾಣ–ಅನ್ನ ಇವು ಪಂಚಭೂಮಿಕೆಗಳು. ಶ್ರೀ ಅರವಿಂದರ ಯೋಗ ಸಾಹಿತ್ಯವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, 'ಆನಂದ'ವೆಂದರೆ 'ಸತ್–ಚಿತ್–ಆನಂದ'ವೆ ಅಹುದು. 'ಸತ್' ಎಂದರೆ ಇರವು. 'ಅದು', ಆ ಆತ್ಮತತ್ತ್ವ ಇರುವುದು, ಎಂದೆಂದಿಗೂ ಇರುವುದು. ಆದರೆ ಅದು ಜಡವಸ್ತುವಿನ ಇರವಲ್ಲ. ಇರವು ತನ್ನ ತಾನರಿಯಲು ಹೆಣಗಿದುದರ ಫಲವೆ 'ಚಿತ್'. 'ಚಿತ್'ದಲ್ಲಿ ಜ್ಞಾನ–ಶಕ್ತಿಗಳೆರಡೂ ಒಳಗೊಳ್ಳುವವು, ಜ್ಞಾನವಿದ್ದಲ್ಲಿ ಶಕ್ತಿಯಿದ್ದೇ ಇದೆ. ಭೌತ ಜಗತ್ತಿನಲ್ಲಿಯಂತೆ ಅಧ್ಯಾತ್ಮ ಜಗತ್ತಿನಲ್ಲೂ ಇದು ಸತ್ಯ 'Power and Light' ಎಂಬ ಫಲಕವನ್ನು ಹಳೇ ಮೈಸೂರಿನಲ್ಲಿ ನಾನು ಹಲವು ಕಡೆ ನೋಡಿದ್ದೇನೆ. ವಿದ್ಯುತ್ತು ಪ್ರಕಾಶವನ್ನು ಕೊಡುವುದು, ಶಕ್ತಿಯನ್ನೂ ಕೊಡುವುದು ಅಥವಾ ವಿದ್ಯುತ್ತು ಪ್ರಕಾಶಮಯವೂ ಶಕ್ತಿಮಯವೂ ಆಗಿದೆ. ಅಣು ವಿಜ್ಞಾನವು ಭೌತ ಪ್ರಪಂಚಕ್ಕೆ ದೊಡ್ಡ ಜ್ಞಾನನಿಧಿಯಾಗಿರುವಂತೆ, ಅದು ಶಕ್ತಿಯ ಆಗರವೂ ಆಗಿದೆಯೆಂಬುದಕ್ಕೆ ಮಾನವ ಕುಲದ ಸಿಹಿ ಕಹಿ ಅನುಭವಗಳೆ ಸಾಕ್ಷಿ, ಶಕ್ತಿಯು ಜ್ಞಾನಕ್ಕೆ (ಅರ್ಥಾತ್ ಸುಜ್ಞಾನಕ್ಕೆ) ಅಧೀನವಾಗಿರಬೇಕೇ ವಿನಾ, ಅದರ ಎದೆ ತುಳಿದು ನಗ್ನ ನರ್ತನ ಮಾಡುತ್ತ ವಿಶ್ವ ವಿನಾಶಕ್ಕೆ ಹೊರಡಬಾರದು, ಸುಜ್ಞಾನಕ್ಕೆ ಶಕ್ತಿ ಅನುವರ್ತಿಯಾಗುವುದರಿಂದ ಜೀವನವು ನಂದನವನವಾದೀತು; ಸುಜ್ಞಾನವನ್ನೆ ಮಣ್ಣು ಮುಕ್ಕಿಸುವುದರಿಂದ ನರಕಕ್ಕಿಂತಲೂ ಹೇಯವಾದೀತು. ಅದಿರಲಿ; ಇರವು ತನ್ನ ತಾನರಿಯಿತು ಅಥವಾ ಇರವೆ ಅರಿವಾಯಿತು. ಆದರೆ ಇಲ್ಲಿಗೆ ಸಮಸ್ಯಾಪೂರ್ತಿಯಾಗಲಿಲ್ಲ. ಇರುವು ಅರಿವಾದುದರಲ್ಲಿ ಏನೋ ಒಂದು ಆಂತರ ಹೇತುವಿದ್ದಿತು. ಆಗ ಅದು 'ತಾನು ಆನಂದ.' ಎಂಬ ಅನುಭವದಲ್ಲಿ ಸಾರ್ಥಕ್ಯ ಹೊಂದಿತು. ಇರುವು–ಅರಿವಿನ ಕೊರತೆ ನೀಗಿತು. ಈ ಜಗತ್ತಿನಲ್ಲಿಯ ಎಲ್ಲಿ ವ್ಯವಹಾರಗಳ–ಚಿಂತನ ಮಂಥನಗಳ–ಧಡಪಡಿಕೆ ಚಡಪಡಿಕೆಗಳ–ಮಹತ್ತ್ವಾಕಾಂಕ್ಷೆಗಳ–ಪ್ರೇಮ ದ್ವೇಷಗಳ ಒಳಗಿನ ಉದ್ದೇಶ ಆನಂದಪ್ರಾಪ್ತಿ. ಕೆಳಗಿನಂತೆ ಮೇಲಿನ ಜಗತ್ತಿನಲ್ಲಿಯೂ ಇದು ನಿತಾಂತ ಸತ್ಯ. ನಾವು ಅರಿಯಬೇಕಾದರೆ ಏನನ್ನೋ (ನವನಗ್ನವಾಗಿ ತೋರಬಹುದೇನನ್ನೊ)

ಅರಿಯಬೇಕು; ಆದರೆ 'ಆನಂದ' ವೆಂದರೆ ನಿರ್ಹೇತುಕ ನಿತ್ಯ ತೃಪ್ತಿ. ಅದು ತನ್ನ ಹೊರಗೆ ನೋಡುವುದೇ ಇಲ್ಲ. ಆದರೆ ಅದರ ತೃಪ್ತಿ – ಅಂತಃಸುಖ ಅಂಟುರೋಗವಿದ್ದಂತೆ. ಅದರ ಸಂಪರ್ಕ ಬಂದವರೆಲ್ಲರೂ ಸುಖಿಗಳಾಗುವರು, ಆನಂದಿಗಳಾಗುವರು. ಅಂತೆಯೆ ನಾವು ಇರಬೇಕು, ಅರಿಯಬೇಕು, ಆ ಆನಂದದಲ್ಲಿ ಬೆರೆಯಬೇಕು, ಆನಂದವೆ ಆಗಬೇಕು. ಅಂತೆಯೆ ಆ ಪರವಸ್ತುವನ್ನು 'ಸಚ್ಚಿದಾನಂದ' ಎಂದು ಅಧ್ಯಾತ್ಮ ಶಾಸ್ತ್ರಗಳು ಹೇಳಿವೆ. ಈ ಪರಬ್ರಹ್ಮ ಸ್ವರೂಪವನ್ನು ನಾವು ಮನದಟ್ಟು ಮಾಡಿಕೊಂಡೇ ಬಾಳಬಟ್ಟೆಯಲ್ಲಿ ಅಡಿಯಿಡಬೇಕು.

ಪರಬ್ರಹ್ಮ ಚಿಚ್ಛಕ್ತಿಯೆ 'ವಿಜ್ಞಾನ' ಭೂಮಿಕೆಯಲ್ಲಿ ಪ್ರಭಾವಯುತ ಜಗದುದ್ಧಾರಕ ಶಕ್ತಿಯಾಗುವುದು. ಇದುವೆ ಶ್ರೀ ಅರವಿಂದರ ವಿಚಾರ ಸರಣಿಯಲ್ಲಿ Super-mind, ಅತಿಮಾನಸ–ಸುಪ್ರಮಾನಸ. ಅದು ದಿವ್ಯ ಶಕ್ತಿಯ ಡೈನೆಮೋ ಎನ್ನಬಹುದು. ಆ ಶಕ್ತಿಯನ್ನು ಅಲ್ಲಿಂದ ಇಲ್ಲಿಗೆ ತಂದು ಭುವಿಯನ್ನು ದಿವಿಯನ್ನಾಗಿ ಮಾರ್ಪಡಿಸಬೇಕೆಂದು ತಾವು ಹಲವು ವರ್ಷ ಏಕಾಂತದಲ್ಲಿದ್ದು ಸಾಧನೆ ಮಾಡಿ ಸಾಕ್ಷಾತ್ಕರಿಸಿಕೊಂಡು, ಅದರ ಗುಟ್ಟುಮಟ್ಟಗಳನ್ನು ತಮ್ಮ ಪ್ರಭೂತ ಲೇಖನಗಳ ಮೂಲಕ ನಮಗೆ ತಿಳಿಸಿಹೋಗಿದ್ದಾರೆ. ಅವರೀ 'ಪೂರ್ಣಯೋಗ' ದ ಪ್ರವಕ್ತಾರರು ಇಂದು (ಶ್ರೀ ಅರವಿಂದರೇ ತಮ್ಮ ಸಹೋದ್ಯೋಗಿನಿ [collaborator], ಎಂದರೆ ಯೋಗಮಾರ್ಗದಲ್ಲಿಯ ಸಾಕ್ಷಾತ್ಕಾರದ ಸಾಧನದಲ್ಲಿ ಪಾಲುಗಾರ್ತಿ ಎಂದು ಹೇಳಿದ) ಶ್ರೀಮಾತೆಯವರು. ಶ್ರೀಮಾತೆಯವರು ಶ್ರೀ ಅರವಿಂದರನ್ನು ಕುರಿತು ಒಂದೆಡೆ ಅಂದುದನ್ನು ನನ್ನ ಮಿತ್ರರಾದ 'ಶ್ರೀ ದೇವತ್ತ'ರು ಕನ್ನಡಿಸಿದುದರಲ್ಲಿ ಎರಡೇ ಪಂಕ್ತಿಗಳನ್ನು ಮೂಲಸಹಿತ ಇಲ್ಲಿ ಉದಾಹರಿಸದಿರಲಾರೆ:–

Without Him I do not exist,
Without Me He is unmanifest.

'ಅವ 'ನಿಲ್ಲದೆ 'ನನ್ನ' ಅಸ್ತಿತ್ವವಿಲ್ಲ.
'ನಾ' ನಿಲ್ಲದೆ 'ಅವನ' ಆವಿಷ್ಕಾರವಿಲ್ಲ.

ಎಂತಹ ಆತ್ಮಾದ್ವೈತವಿದು! 'ಶ್ರೀ ಅರವಿಂದ ದರ್ಶನ' ವೆಂದರೆ 'ಶ್ರೀ ಅರವಿಂದ–ಮಾತೃ ದರ್ಶನ' ಎಂಬುದನ್ನು ಮರೆಯಬಾರದು.

ಮೇಲೆ ಮಾಡಲು ಪ್ರಯತ್ನಿಸಿದ ತಾತ್ತ್ವಿಕ ವಿವೇಚನೆಯನ್ನು ಶ್ರೀ ಅರವಿಂದರ ಮಾತುಗಳಲ್ಲಿಯೆ ಪ್ರಮಾಣಿಸಿಕೊಂಡು ನೋಡೋಣ.

"ಪ್ರಕೃತಿ ಜಡದಾಚೆ (beyond Matter) ಉತ್ಕ್ರಾಂತಿ ಹೊಂದಿ ಪ್ರಾಣವನ್ನು (ಜೀವನವನ್ನು – Life) ಪ್ರಕಟಿಸಿದಂತೆ, ಪ್ರಾಣದಾಚೆ 'ಮನ' (Mind) ವನ್ನು ಪ್ರಕಟಿಸಿದಂತೆ, ಅವಳು ಮನದಾಚೆಗೂ ಉತ್ಕ್ರಾಂತಿ ಹೊಂದಿ, ನಮ್ಮ ಮನೋಮಯ ಜೀವಿತಕ್ಕೆ ಸಹಜವಾಗಿರುವ ಅಪೂರ್ಣತೆ–ಸೀಮಿತತೆಗಳಿಂದ ಮುಕ್ತವಾಗಿರುವ (ಹೆಚ್ಚಿನ) ಪ್ರಜ್ಞೆ–ಚೇತನವನ್ನು (consciousness) ಮತ್ತು ಶಕ್ತಿ (power) ಯನ್ನು ಪ್ರಕಟಿಸಲೇಬೇಕು. ಅದುವೆ 'ಅತಿಮಾನಸ' (ಬೇಂದ್ರೆಯವರು ಹೆಸರಿಸಿದ 'ಸುಪ್ರಮಾನಸ') ಅವಸ್ಥೆ ಅಥವಾ ಸತ್ಯಪ್ರಜ್ಞೆ (a Supramental or truth-consciousness); (ಇದನ್ನು ಅಳವಡಿಸಿಕೊಂಡು) 'ಆತ್ಮ' ನಿಗೆ ಸಹಜವಾದ ಶಕ್ತಿ–ಸಿದ್ಧಿಗಳನ್ನು (the power and perfection of the Spirit) ಬೆಳೆಯಿಸಿಕೊಳ್ಳಲೇಬೇಕು."

"ಸುಪ್ರಮಾನಸವೊಂದು ಸತ್ಯ. ಅದರ ಆಗಮನ–ಅವತರಣ ಸೃಷ್ಟಿ ನಿಯಮದನ್ವಯವೆ ಅನಿವಾರ್ಯ."

"ಸುಪ್ರಮಾನಸ ಸತ್ಯಪ್ರಜ್ಞೆಗೆ ವಿರುದ್ಧವಾಗಿ ಪೃಥ್ವೀ ಜೀವನದ ಸಂದಿಗ್ಧತೆ–ಅಂಧಕಾರಮಯತೆ–ಅಸ್ಪಷ್ಟತೆಗಳು (obscurations) ಮೇಲ್ಮೈ ಪಡೆಯಲಾರವು. ಏಕೆಂದರೆ ಈ ಪೃಥ್ವಿಯಲ್ಲಿಯೂ ಆ ದಿವ್ಯಶಕ್ತಿ ಆತ್ಮದೇವನ ಚೈತನ್ಯಕ್ಕೆ ಸಹಜವಾದ ಸರ್ವಜ್ಞ ಪ್ರಕಾಶವನ್ನು – ಸರ್ವಸಮರ್ಥ ಬಲವನ್ನು ಸಾಕಷ್ಟು ಪ್ರಮಾಣದಲ್ಲಿ ತಂದು ಜಯವನ್ನು ಸಂಪಾದಿಸಿಕೊಡಬಲ್ಲುದು."

"ಅವಿದ್ಯೆಯೊಳಗಿಂದ ನಮ್ಮ ಉತ್ಕ್ರಾಂತಿ ನಡೆದಿದೆ. ಇಲ್ಲಿಯ ಆನಂದಾನುಭವ ಹೆಜ್ಜೆಹೆಜ್ಜೆಗೆ ಕಂಟಕಮಯವಾದುದು, ನಮ್ಮನ್ನು ನಾವು ಕಂಡುಕೊಳ್ಳಬೇಕೆಂಬ ಪ್ರಯತ್ನ ದುಃಖಪೂರ್ಣವಾದುದು. ನಮ್ಮ ಸಿದ್ಧಿಗಳು ಅರ್ಧಮರ್ಧವಾದುವು, ನಾವು ಪಡೆಯುವೆವು ಕಳೆದುಕೊಳ್ಳುವೆವು. ಆದರೆ ಇದೆಲ್ಲ ಪ್ರಥಮಾವಸ್ಥೆ. ಆದರಿದು ಅನಿವಾರ್ಯವಾಗಿ ಬದಲಾವಣೆ ಹೊಂದಿ, ನಮ್ಮ ಜ್ಞಾನ ವಿಕಾಸಗೊಳ್ಳುವುದು; ನಮ್ಮ ಆತ್ಮಚೈತನ್ಯ ತನ್ನನ್ನು ತಾನು ಕಂಡುಕೊಳ್ಳುವುದು ತನ್ನನ್ನು ತಾನೆ ಅರಳಿಸಿಕೊಳ್ಳುವುದು; ನಮಗಿಂದು 'ಪರಾ ಪ್ರಕೃತಿ' (Super Nature) ಆಗಿ ತೋರುವ ನಿಜ ಪ್ರಕೃತಿಯ ದಿವ್ಯಶಕ್ತಿಯ ಬಲದಿಂದ ಪ್ರತಿ ವಸ್ತುವಿನಲ್ಲಿ ಪ್ರತಿ ಸಂಗತಿಯಲ್ಲಿ ಅಡಗಿದ ಆ ದಿವ್ಯತೆ ತನ್ನನ್ನು ತಾನೆ ಪ್ರಕಟಿಸಿಕೊಳ್ಳುವುದು."

"ಈ ಪೃಥ್ವಿಯಲ್ಲಿ ದಿವ್ಯಜೀವನ–ಇದು ನಾವು ನಮ್ಮ ಮುಂದೆ ಇರಿಸಿಕೊಂಡಿರುವ ಆದರ್ಶ. ನಮ್ಮ ಅಂತಃಸತ್ತ್ವದಲ್ಲಿ ಆಧ್ಯಾತ್ಮಿಕ ಪರಿವರ್ತನೆ – ತೀವ್ರಗಾಮಿಯಾದ ಮೂಲಭೂತವಾದ ಪರಿವರ್ತನೆಯಾಗುವುದರಿಂದ ಮಾತ್ರ ನಮ್ಮ ಪ್ರಕೃತಿಯಲ್ಲಿ ಜರುಗುವ ಉತ್ಕ್ರಾಂತಿಯಿಂದ ಇಲ್ಲವೆ ಕ್ರಾಂತಿಯಿಂದ ಮಾತ್ರ (evolution or revolution) ಇದು ಸಾಧ್ಯವಾಗಬಲ್ಲುದು."

"ಭೌತ ಜಗತ್ತಿನಲ್ಲಿ ದಿವ್ಯಜೀವನವೆಂಬುದರ ನಿಶ್ಚಿತವಾದ ಅರ್ಥವೆಂದರೆ ಬಾಳಿನ ಎರಡೂ ತುದಿಗಳು, ಆ ಆಧ್ಯಾತ್ಮಿಕ ಶಿಖರ ಹಾಗೂ ಇಲ್ಲಿಯ ಭೌತ ತಳಹದಿ ಒಂದುಗೂಡುವುದು."

"... ಈ ಪವಾಡವನ್ನು ಆ ಒಂದು ಪರಮ ಕೃಪೆಯೆ (Supreme Grace) ಜರುಗಿಸಬಲ್ಲುದು.

ಆ ಪರಮ ಪರಾತ್ಪರ ಶಕ್ತಿ ಅತ್ಯಂತ ಜಡ ಚೇತನದಲ್ಲಿಯೂ ಇಳಿದಿರುವುದು; ಆದರೆ ತನ್ನ ಪ್ರಕಟಣೆಗೆ ಮೊದಲು – ತನ್ನ ಮಹಾನ್ ಬಹಿರಂಗ ಸಾಧನೆಗಳು ಪ್ರಾರಂಭವಾಗುವ ಮೊದಲು ಆ ಪರಮ ದೈವೀ ಕೃಪೆಯ ಅವತರಣಕ್ಕೆ ಅಗತ್ಯವಾಗಿರುವ ಅನುಕೂಲತೆಗಳು–ನಿಯಮ ನಿಬಂಧನೆಗಳು ಅಲ್ಲಿವೆಯೇ, ಸತ್ಯವಾಗಿವೆಯೇ, ಪರಿಣಾಮಕಾರಿಯಾಗಿವೆಯೇ ಎಂಬುದನ್ನು ಅದು ಒತ್ತಾಯಿಸಿ ಕೇಳುವುದು.

"ಆ ನಿಯಮ ನಿಬಂಧನೆಗಳು, ಆ ಮಾನವ ಹೃದಯದ ಅನುಕೂಲತೆಗಳು ಯಾವವು? ಸಂಪೂರ್ಣ ಶರಣಾಗತಿ, ದೈವೀ ಪ್ರಭಾವಕ್ಕೆ ಅನನ್ಯವಾಗಿ ಅಂತರಾತ್ಮನನ್ನು ತೆರೆದಿಡುವುದು, ಸತ್ಯವನ್ನು ಸಂತತವಾಗಿ–ಸಮಗ್ರವಾಗಿ ಆಶ್ರಯಿಸುವುದು ಮತ್ತು ಅ–ಸತ್ಯವನ್ನು ಸಂತತವಾಗಿ–ಸಮಗ್ರವಾಗಿ ನಿರಾಕರಿಸುವುದು, ಇವೇ ಅವು. ಆದರೀ ಬಂಧನಗಳನ್ನು ಪೂರ್ತಿಯಾಗಿ ಪಾಲಿಸಬೇಕು, ಏನನ್ನೂ ಒಳಗಿಟ್ಟುಕೊಳ್ಳಬಾರದು, ತಪ್ಪಿಸಿಕೊಳ್ಳುವ – ದಂಭಾಚರಣೆಯ ಪ್ರವೃತ್ತಿಯಿರಬಾರದು, ದೈಹಿಕ ಚೇತನದ ಹಾಗೂ ಅದರ ವ್ಯಾಪಾರಗಳವರೆಗೂ ಋಜುತೆ–ನಿರ್ವಂಚನೆ–ಕಳಕಳಿ ಇಳಿದುಬಂದು ತುಂಬಿಕೊಳ್ಳಬೇಕು."

... ಮುಂದುವರೆಯುತ್ತದೆ

# ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್
## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ಹೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ<br>ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926<br>(Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ಯ ಪುರುಷ |

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 28ನೇ ಡಿಸೆಂಬರ್ 2019 ಶನಿವಾರ ಸಂಜೆ 5.30 ರಿಂದ 6.30ರ ವರೆಗೆ ಮಿರಾಂಬಿಕಾ ಶಾಲೆಯ ಹಳೆಯ ವಿದ್ಯಾರ್ಥಿಗಳಿಂದ ಸಂಗೀತವನ್ನು ಏರ್ಪಡಿಸಲಾಗಿತ್ತು.

ದಿನಾಂಕ 1ನೇ ಜನವರಿ 2020 ಬುಧವಾರ ಬೆಳಿಗ್ಗೆ 7.00 ರಿಂದ 7.30ರ ವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ತತ್ಸಂಬಂಧ ಚಂಪಕಲಾಲ್‌ರವರ ಪೈಂಟಿಂಗ್ ವಸ್ತು ಪ್ರದರ್ಶನವನ್ನು ಹಾಕಲಾಗಿದೆ.

ದಿನಾಂಕ 4ನೇ ಜನವರಿ 2020 ಶನಿವಾರ ಸಂಜೆ 5.30 ರಿಂದ 6.30ರ ವರೆಗೆ ಡಾ॥ ಗುರುಪಾದಪ್ಪ ಕಜಗರ್, ನೇಚರ್ ಕ್ಯೂರ್ ಹಾಸ್ಪಿಟಲ್, ಬೆಂಗಳೂರು ಇವರಿಂದ "ನೇಚರ್ ಕ್ಯೂರ್" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.

ದಿನಾಂಕ 11ನೇ ಜನವರಿ 2020 ಶನಿವಾರ ಸಂಜೆ 5.30 ರಿಂದ 6.30ರ ವರೆಗೆ ಡಾ॥ ವರ್ಷ ಸುವರ್ಣ, ನೇಚರ್ ಕ್ಯೂರ್ ಹಾಸ್ಪಿಟಲ್, ಬೆಂಗಳೂರು ಇವರಿಂದ "ನ್ಯೂಟ್ರಿಶಿಯನ್" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.

ದಿನಾಂಕ 18ನೇ ಜನವರಿ 2020 ಶನಿವಾರ ಸಂಜೆ 5.30 ರಿಂದ 6.30ರ ವರೆಗೆ ಕುಮಾರಿ ಚಿನ್ಮಯಿ ಎಂ. ಕರ್ನಾಟಕ ಸಂಗೀತ, ಬೆಂಗಳೂರು ಇವರಿಂದ "ಭಕ್ತಿ ಗೀತೆಗಳ"ನ್ನು ಏರ್ಪಡಿಸಲಾಗಿತ್ತು.

ದಿನಾಂಕ 25ನೇ ಜನವರಿ 2020 ಶನಿವಾರ ಸಂಜೆ 5.30 ರಿಂದ 6.30ರ ವರೆಗೆ ಡಾ॥ ಶಾಂತಲಾ ಹೆಗಡೆ, ನಿಮ್ಹ್ಯಾನ್ಸ್, ಬೆಂಗಳೂರು ಇವರಿಂದ "ಮ್ಯೂಸಿಕ್ ಫಾರ್ ದಿ ಏಜಿಂಗ್ ಬ್ರೈನ್" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮಗಳಿಗೆ ಅನೇಕ ಗುರು–ಬಂಧುಗಳು ಹಾಗೂ ಇತರರು ಹಾಜರಿದ್ದರು.



ಅವಿನಾಶಿಯಾದ ಪಥದೆಡೆಗೆ ಸನಿಹ ಬುವಿಯಿಂದು ಪಡೆದು ಸಖ್ಯ
ಪ್ರಕೃತಿ ಸೂಕ್ಷ್ಮತೆಯ ಶ್ರವಣ ಜಾಗ್ರತದಿ ಆಲಿಸಿತು ಪದದ ವಾಕ್ಯ
ಮುಚ್ಚಿರುವ ಗೌಪ್ಯದಾಳಗಳ ಮೇಲೆ ಉಜ್ವಲದಿ ಸ್ಮಿತದಿ ತಾಗಿ
ವಿಸ್ತಾರ ಕ್ಷಿತಿಜ ನೆಲೆಯರಸಿ ಅವಳ ಅನಂತದಾ ಅಕ್ಷಿಯಾಗಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 1 ಪುಟ 4)**

Photo: Imaging Savitri

**RNI No. 22511/1971**
No. of Pages **56 + 4 (Cov. Page)**
KAR Reg No.: RNP/KA/BGS/368/2018-2020
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2020
Licensed to Post at BG PSO, Mysore Road, Bengaluru - 560 026



ಅವತರಣ ಮತ್ತೆ ಆ ಊರ್ಧ್ವಗಮನ ಕುಂಡಲದ ಚಿರದ ಗತಿಗೆ
ಬೃಹದ್‌–ಬ್ರಹ್ಮಾಂಡ ಜ್ಯೋತಿ ಮೂಲದೆಡೆ ಸಂಯೋಗಗೊಳುವವರೆಗೆ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 3 ಪುಟ 24)**

Photo: Imaging Savitri

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.